सत्यमेव जयते

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

# ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

SUPREME AUDIT INSTITUTION OF INDIA

लोकहितार्थ सत्यनिष्ठा

Dedicated to Truth in Public Interest

ಕರ್ನಾಟಕ ಸರ್ಕಾರ

2022ನೇ ವರ್ಷದ ವರದಿ ಸಂಖ್ಯೆ 9

# ಭಾರತದ ಲೆಕ್ಕನಿಯಂತ್ರಕರು ಮತ್ತು

# ಮಹಾಲೆಕ್ಕಪರಿಶೋಧಕರ ವರದಿ

# ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತ ಮೇಲಿನ

# ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

**ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷ**

**ಕರ್ನಾಟಕ ಸರ್ಕಾರ**

**2022ನೇ ವರ್ಷದ ವರದಿ ಸಂಖ್ಯೆ 9**

| ವಿಷಯಸೂಚಿ | | |
|---|---|---|


| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| | ಮುನ್ನುಡಿ | v |
| | ಕಾರ್ಯನಿರ್ವಹಣಾ ಸಾರಾಂಶ | vii |
| **ಅಧ್ಯಾಯ 1** | **ಪರಿಚಯ** | |
| **1.1** | ಕೆಆರ್‌ಐಡಿಎಲ್ ನ ಉದ್ದೇಶಗಳು | 1 |
| **1.2** | ಸಂಘಟನಾ ವ್ಯವಸ್ಥೆ | 1 |
| **1.3** | ಲೆಕ್ಕಪರಿಶೋಧನಾ ಉದ್ದೇಶಗಳು | 3 |
| **1.4** | ಲೆಕ್ಕಪರಿಶೋಧನಾ ಮಾನದಂಡಗಳು | 3 |
| **1.5** | ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ | 3 |
| **1.6** | ಕೃತಜ್ಞತೆ | 4 |
| **1.7** | ಲೆಕ್ಕಪರಿಶೋಧನೆಯ ಫಲಿತಾಂಶಗಳ ಜೋಡಣೆ | 4 |
| **ಅಧ್ಯಾಯ 2** | **ಹಣಕಾಸು ನಿರ್ವಹಣೆ** | |
| **2.1** | ಹಣದ ಸ್ವೀಕೃತಿ ಮತ್ತು ಬಳಕೆ/ಭೌತಿಕ ಮತ್ತು ಆರ್ಥಿಕ ಪ್ರಗತಿ | 6 |
| **2.2** | ರಾಯಧನ ವಸೂಲಾತಿ ಆಗದಿರುವುದು/ಕಡಿಮೆ ವಸೂಲಾತಿ ಆಗಿರುವುದು – ₹4.81 ಕೋಟಿ | 9 |
| **2.3** | ಯೋಜನಾ ನಿಧಿಗಳ ಮೇಲೆ ಗಳಿಸಿದ ಬಡ್ಡಿಯನ್ನು ಜಮಾ ಮಾಡದೆ ಇರುವುದು – ₹238.89 ಕೋಟಿ | 10 |
| **ಅಧ್ಯಾಯ 3** | **ಕಾಮಗಾರಿಗಳ ವಹಿಸುವಿಕೆ, ಅಂದಾಜು ಪಟ್ಟಿಗಳು ಮತ್ತು ಮಂಜೂರಾತಿಗಳು** | |
| **3.1** | ಕೆಆರ್‌ಐಡಿಎಲ್ ನ ಯೋಜನಾ ನಿರ್ವಹಣಾ ವ್ಯವಸ್ಥೆ (ಭೂಸಿರಿ) | 12 |
| **3.2** | ಕಾಮಗಾರಿಗಳ ವಹಿಸುವಿಕೆ | 13 |
| **3.3** | ಅಂದಾಜುಪಟ್ಟಿಗಳ ತಯಾರಿಕೆ | 17 |
| **3.4** | ಆಡಳಿತಾತ್ಮಕ ಅನುಮೋದನೆ | 21 |
| **3.5** | ನಿವೇಶನ ಸಮಸ್ಯೆಗಳಿಂದ ಪರಿತ್ಯಜಿಸಲಾದ ಕಾಮಗಾರಿ ಮೇಲಿನ ವ್ಯರ್ಥ ವೆಚ್ಚ – ₹15.25 ಲಕ್ಷ | 23 |
| **3.6** | ತಾಂತ್ರಿಕ ಮಂಜೂರಾತಿ | 24 |

| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| ಅಧ್ಯಾಯ 4 | **ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ** | |
| 4.1 | ಕಾಮಗಾರಿಗಳ ಯೋಜನೆ | 30 |
| 4.2 | ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬ | 34 |
| 4.3 | ಔಪಚಾರಿಕ ಒಪ್ಪಂದ ಮಾಡಿಕೊಳ್ಳದೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದು | 35 |
| 4.4 | ಕೋಲಾರ ಉಪ–ವಿಭಾಗದಿಂದ ಕಳಪೆ ಕಾಮಗಾರಿ ಅನುಷ್ಠಾನ | 35 |
| 4.5 | ಗುಂಪು ನಾಯಕರುಗಳ ಮೂಲಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದು | 36 |
| 4.6 | ಕಾಮಗಾರಿಗಳ ಅನುಷ್ಠಾನದಲ್ಲಿ ಮಿತವ್ಯಯ ಮತ್ತು ಪರಿಣಾಮಕಾರಿತ್ವ | 38 |
| 4.7 | ಬಿಬಿಎಂಪಿ ವಹಿಸಿರುವ ಕಾಮಗಾರಿಗಳ ನಿರ್ವಹಣೆ | 40 |
| ಅಧ್ಯಾಯ 5 | **ಲೆಕ್ಕಪತ್ರ ನಿರ್ವಹಣೆ, ಆಂತರಿಕ ನಿಯಂತ್ರಣಗಳು ಮತ್ತು ಮೇಲ್ವಿಚಾರಣೆ** | |
| 5.1 | ಕೆಆರ್‌ಐಡಿಎಲ್‌ನಲ್ಲಿ ಲೆಕ್ಕಪತ್ರ ನಿರ್ವಹಣಾ ವ್ಯವಸ್ಥೆ | 44 |
| 5.2 | ಸಾಮಗ್ರಿಗಳ ಖರೀದಿ | 49 |
| 5.3 | ಸ್ವೀಕೃತಿಗಳು, ನೀಡಿಕೆಗಳು ಮತ್ತು ಸಾಮಗ್ರಿಗಳ ಲೆಕ್ಕದಲ್ಲಿ ನಿಯಂತ್ರಣ ಕಾರ್ಯವಿಧಾನದ ಅನುಪಸ್ಥಿತಿ | 51 |
| 5.4 | ಲೆಕ್ಕಪರಿಶೋಧನಾ ಸಮಿತಿ ಮತ್ತು ನಿರ್ದೇಶಕರ ಮಂಡಳಿಯ ಸಭೆಗಳು | 52 |
| 5.5 | ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶ | 53 |
| 5.6 | ಗುಣಮಟ್ಟ ನಿಯಂತ್ರಣಕ್ಕೆ ಸಂಬಂಧಿಸಿದ ಲೋಪಗಳು | 54 |
| 5.7 | ನೇಮಕಾತಿ ಮತ್ತು ತರಬೇತಿ | 59 |
| | ಅನುಬಂಧಗಳು | 63 |
| | ಪದಕೋಶ | 84 |

## ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| I | ಆಯ್ಕೆ ಮಾಡಿದ ಉಪ-ವಿಭಾಗಗಳ ಪಟ್ಟಿ | 63 |
| II | ಪರೀಕ್ಷಾ ತನಿಖೆ ನಡೆಸಿದ ಕಾಮಗಾರಿಗಳು | 64 |
| III | ಅಂದಾಜಿಸಿದ ವೆಚ್ಚಕ್ಕಿಂತ ಅಧಿಕ ವೆಚ್ಚ | 65 |
| IV | ರಾಜಧನದ ವಸೂಲಿ ಮಾಡದಿರುವಿಕೆ/ ಕಡಿಮೆ ವಸೂಲಿ ಮಾಡಿರುವಿಕೆ | 66 |
| V | ಎರಡು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಕಾಮಗಾರಿಗಳು | 67 |
| VI | ಇ ಎ ರವರಿಂದ ಎರಡು ಕೋಟಿಗಳಿಗೂ ಹೆಚ್ಚಿನ ಅಂದಾಜುಗಳ ವಿಭಜನೆ | 68 |
| VII | ಅನರ್ಹ ಕಾಮಗಾರಿಗಳ ವಹಿಸಿಕೊಡುವಿಕೆ | 69 |
| VIII | ಕೆಆರ್‌ಐಡಿಎಲ್‌ನಿಂದ ಎರಡು ಕೋಟರೂಗಳಿಗೂ ಹೆಚ್ಚಿನ ಅಂದಾಜುಗಳ ವಿಭಜನೆ | 70 |
| IX | ಪಿಆರ್‌ಇಡಿ ದರಪಟ್ಟಿ ಬದಲು ಪಿಡಬ್ಲ್ಯೂಡಿ ದರಪಟ್ಟಿ ಅಳವಡಿಸಿಕೊಂಡ ಕಾರಣದಿಂದ ವ್ಯತ್ಯಾಸದ ವೆಚ್ಚ | 71 |
| X | ಆಡಳಿತಾತ್ಮಕ ಅನುಮೋದನೆಗೆ ಮುಂಚೆಯೇ ನಿಧಿಗಳ ಬಿಡುಗಡೆ | 72 |
| XI(a) | ಹೆಚ್ಚಿನ ತಾಂತ್ರಿಕ ಮಂಜೂರಾತಿಯನ್ನು ತಪ್ಪಿಸಲು ಅಂದಾಜುಗಳ ವಿಭಜನೆ. | 73 |
| XI(b) | ಉಪ-ಸಮಿತಿಯ ಬದಲು ಮುಖ್ಯ ಇಂಜಿನೀಯರ್ರವರು ತಾಂತ್ರಿಕ ಮಂಜೂರಾತಿ ನೀಡಿದ್ದು | 74 |
| XII | ತಾಂತ್ರಿಕ ಮಂಜೂರಾತಿಗೆ ಮೊದಲೇ ಕಾಮಗಾರಿಗಳನ್ನು ಪ್ರಾರಂಭಿಸಿದ್ದು | 75 |
| XIII | ಕಾಮಗಾರಿಗಳನ್ನು ಪ್ರಾರಂಭಿಸುವುದರಲ್ಲಿ ವಿಳಂಬ | 76 |
| XIV | ಕಾಮಗಾರಿಗಳನ್ನು ಮುಕ್ತಾಯಗೊಳಿಸುವಲ್ಲಿ ವಿಳಂಬ | 77 |
| XV | ಕಾಮಗಾರಿಗಳನ್ನು ಇಡಿಗಂಟು ಆಧಾರದ ಮೇಲೆ ನಿರ್ವಹಿಸಿದ್ದು | 78 |
| XVI | ಅಧಿಕ ವೆಚ್ಚವನ್ನು ವರದಿ ಮಾಡದಿದ್ದುದು | 79 |
| XVII | ಉಳಿತಾಯಗಳನ್ನು ವರದಿ ಮಾಡದಿದ್ದುದು | 80 |
| XVIII | ಅನುಮೋದಿಸದ ಸಂಸ್ಥೆಗಳಿಂದ ಸ್ಟೀಲ್/ಸಿಮೆಂಟು ಖರೀದಿ | 81 |
| XIX | ಟೆಂಡರು ಕರೆಯದೆ ಸಾಮಗ್ರಿಗಳನ್ನು ಖರೀದಿಸಿದ್ದು | 82 |
| XX | ನೊಂದಾಯಿಸಲ್ಪಡದ ಮಾರಾಟಗಾರರಿಂದ ಸಾಮಗ್ರಿ ಖರೀದಿ ಮತ್ತು ಕೂಲಿಯಿಂದಾಗಿ ಖರೀದಿ ತೆರಿಗೆ ಜಮೆಯ ನಷ್ಟ | 83 |

# ಮುನ್ನುಡಿ

31 ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ಸಂವಿಧಾನದ 151(2)ರ ವಿಧಿಯ ಅನ್ವಯ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸುವುದಕ್ಕಾಗಿ ರಾಜ್ಯಪಾಲರಿಗೆ ಸಲ್ಲಿಸಲು ತಯಾರಿಸಲಾಗಿದೆ.

2016–21ರ ಅವಧಿಯನ್ನು ಒಳಗೊಂಡಿರುವ ಈ ವರದಿಯು " ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ .

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯಕ್ಷಮತೆ ಸಾರಾಂಶ

## ಸಿಎಜಿ ಏಕೆ ಈ ಲೆಕ್ಕಪರಿಶೋಧನೆ ಮಾಡಿದರು

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್) ಅನ್ನು 1971ರಲ್ಲಿ ಕರ್ನಾಟಕ ಸರ್ಕಾರದ ಒಂದು ಉದ್ದಿಮೆಯಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಡಿಯಲ್ಲಿ ಈ ಉದ್ದೇಶಗಳೊಂದಿಗೆ ಸ್ಥಾಪಿಸಲಾಯಿತು : (i) ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸಲು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು, (ii) ಮಧ್ಯವರ್ತಿಗಳನ್ನು ತೊಡೆದುಹಾಕುವ ಮೂಲಕ ಸಂಸ್ಥೆಯಿಂದಲೇ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಮೂಲಕ ಮೂಲಸೌಕರ್ಯಗಳನ್ನು ನಿರ್ಮಿಸುವುದು ಮತ್ತು (iii) ಹಣದ ಪೂರ್ಣ ಮೌಲ್ಯವನ್ನು ಜನರಿಗೆ ವರ್ಗಾಯಿಸುವುದು.

ಕಳೆದ ಐದು ವರ್ಷಗಳಲ್ಲಿ ಕೆಆರ್‌ಐಡಿಎಲ್‌ಗೆ ವಹಿಸಲಾದ ಕಾಮಗಾರಿಗಳ ಪ್ರಮಾಣವನ್ನು ಪರಿಗಣಿಸುವುದರ ಜೊತೆಗೆ ಕೆಟಿಪಿಪಿ ಕಾಯ್ದೆಯಡಿ ಕೆಆರ್‌ಐಡಿಎಲ್‌ಗೆ ನೀಡಲಾದ ವಿನಾಯಿತಿಗಳು ಮತ್ತು ಹಿಂದಿನ ಲೆಕ್ಕಪರಿಶೋಧನೆಗಳಲ್ಲಿ ಗಮನಿಸಿದ ಅಂಶಗಳ ಆಧಾರದ ಮೇಲೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 2016–17ರಿಂದ 2020–21ರವರೆಗಿನ ಅವಧಿಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕೈಗೊಂಡರು. ಕಾಮಗಾರಿಗಳನ್ನು ವಹಿಸುವ ಇಲಾಖೆಗಳ ಕಾರ್ಯವಿಧಾನಗಳು; ಕೆಆರ್‌ಐಡಿಎಲ್‌ನಿಂದ ಕಾರ್ಯಗತಗೊಳಿಸಲಾದ ಕಾಮಗಾರಿಗಳಲ್ಲಿನ ದಕ್ಷತೆ, ಪರಿಣಾಮಕಾರಿತ್ವ ಮತ್ತು ಮಿತವ್ಯಯತೆ; ಕೂಲಿಯಾಳುಗಳು ಮತ್ತು ಸಾಮಗ್ರಿಗಳ ಸಂಗ್ರಹಣೆ; ಆಂತರಿಕ ನಿಯಂತ್ರಣಗಳು ಮತ್ತು ಕೆಆರ್‌ಐಡಿಎಲ್‌ನ ಲೆಕ್ಕಪತ್ರ ವ್ಯವಸ್ಥೆಯನ್ನು ಸಮೀಕ್ಷಿಸುವ ಉದ್ದೇಶದಿಂದ ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

## ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಪ್ರಮುಖ ಅಂಶಗಳು

4(ಜಿ) ವಿನಾಯತಿ ಅಧಿಸೂಚನೆಗೆ ವಿರುದ್ಧವಾಗಿ, ಕಾಮಗಾರಿ ವಹಿಸುವ ಸಂಸ್ಥೆಗಳು ₹2.00 ಕೋಟಿಗಿಂತ ಹೆಚ್ಚಿನ ಮೌಲ್ಯದ ಕಾಮಗಾರಿಗಳನ್ನು ವಹಿಸಿಕೊಡುವಿಕೆಯ ಮಾನದಂಡಗಳಿಗೆ ಹೊಂದಿಕೆಯಾಗಿವಂತೆ ವಿಭಜಿಸುವ ಮೂಲಕ ವಹಿಸಿಕೊಟ್ಟವು ಮತ್ತು ಆ ಮೂಲಕ ನಿಯಮಿತ ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸಿದವು. ಕಾರ್ಯಕ್ರಮ ಆಯೋಜನೆ, ತಡೆರಹಿತ ವಿದ್ಯುತ್ ಸರಬರಾಜು ಉಪಕರಣ (ಯುಪಿಎಸ್), ಭಾರಿ ವಿದ್ಯುತ್ ಪ್ರವಹಣ ಮಾರ್ಗಗಳ ಬದಲಾವಣೆ ಮುಂತಾದ ಅನರ್ಹ ಕಾಮಗಾರಿಗಳನ್ನು ವಹಿಸಿಕೊಟ್ಟಿರುವುದು/ ಕಾರ್ಯಗತಗೊಳಿಸಿರುವುದನ್ನು ಸಹ ಗಮನಿಸಲಾಗಿದೆ

ಸಾಮಗ್ರಿಗಳ ಖರೀದಿ ಯೋಜನೆಯಾಗಲಿ ಅಥವಾ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಬಾಡಿಗೆಗೆ ಪಡೆದ ಯಂತ್ರೋಪಕರಣಗಳ ವಿವರಗಳಾಗಲಿ ಲಭ್ಯವಿರಲಿಲ್ಲ. ಇಡುಗಂಟು ಮೊತ್ತದ ಆಧಾರದ ಮೇಲೆ ಗುಂಪು ನಾಯಕರುಗಳಿಗೆ ಪಾವತಿ ಮಾಡಲಾಗಿದೆ. ಗುಂಪು ನಾಯಕರುಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಅಗತ್ಯವಿರುವ ಆಳುಗಳು ಮತ್ತು ಯಂತ್ರೋಪಕರಣಗಳನ್ನು ತರುತ್ತಾರೆ ಎಂಬ ಸರ್ಕಾರದ ಒಪ್ಪಿಗೆಯ ಉತ್ತರವು ಕಾಮಗಾರಿಗಳ ಅನುಷ್ಠಾನಕ್ಕೆ ಉಪ–ಗುತ್ತಿಗೆ ನೀಡಿರುವುದನ್ನು ಸೂಚಿಸುತ್ತದೆ. ಪರೀಕ್ಷಾ–ತನಿಖೆ ಮಾಡಲಾದ ಗುಂಪು ನಾಯಕರುಗಳ ಜಿಎಸ್‌ಟಿ/ಟಿನ್ ಸ್ಥಾನಮಾನವು ಬಿಬಿಎಂಪಿ ದಾಖಲೆಗಳಲ್ಲಿ ಮರುಪರಿಶೀಲನೆಯಿಂದ ಅವರ ಚಟುವಟಿಕೆಯು ಗುತ್ತಿಗೆಕಾರ್ಯ ಎಂಬುದು ತಿಳಿದುಬಂದಿತು. ಹೊರಗುತ್ತಿಗೆ ಸಿಬ್ಬಂದಿ, ಎಇಗಳು ಮತ್ತು ಜೆಇಗಳನ್ನು ಗುಂಪು ನಾಯಕರುಗಳು ಎಂದು ಪರಿಗಣಿಸಲಾಗಿದೆ ಮತ್ತು ಅವರಿಗೆ ಕಾಮಗಾರಿ ಕಾರ್ಯಗತಗೊಳಿಸಿದ್ದಕ್ಕಾಗಿ ಪಾವತಿಗಳನ್ನು ಮಾಡಲಾಗಿದೆ.

ಲೆಕ್ಕಪರಿಶೋಧನೆ ಅವಧಿಯಲ್ಲಿ ಪಡೆದ 84,574 ಕಾಮಗಾರಿಗಳಿಗೆ ಪ್ರತಿಯಾಗಿ, ಕೆಆರ್‌ಐಡಿಎಲ್‌ಗೆ ಕೇವಲ 24,014 ಕಾಮಗಾರಿಗಳನ್ನು (ಶೇಕಡ 28) ಪೂರ್ಣಗೊಳಿಸಲು ಸಾಧ್ಯವಾಯಿತು. ಹಣ ಲಭ್ಯವಿದ್ದರೂ ಕಾಮಗಾರಿ ಆರಂಭಿಸುವಲ್ಲಿ ಒಂದು ತಿಂಗಳಿನಿಂದ 24 ತಿಂಗಳುಗಳವರೆಗೆ ಮಿತಿಮೀರಿದ ವಿಳಂಬವಾಗಿದೆ. ಕೆಆರ್‌ಐಡಿಎಲ್ ಲಭ್ಯವಿರುವ ಸಂಪನ್ಮೂಲಗಳು ಮತ್ತು ವಹಿಸಿಕೊಂಡಿರುವ ಕಾಮಗಾರಿಗಳ ತುಲನೆಯಲ್ಲಿ ತನ್ನ ಸಾಮರ್ಥ್ಯವನ್ನು ವಿಶ್ಲೇಷಿಸಲು ಯಾವ ಕಾರ್ಯವಿಧಾನವನ್ನೂ ಹೊಂದಿಲ್ಲ.

₹352.88 ಕೋಟಿಯಿಂದ ₹1,679.74 ಕೋಟಿವರೆಗೆ ಹಣದ ಬಳಕೆಯಾಗಿದ್ದರೆ, ಕೆಆರ್‌ಐಡಿಎಲ್ ₹2,604 ಕೋಟಿಯಿಂದ ₹4610.35 ಕೋಟಿವರೆಗೆ ಹಣವನ್ನು ಪಡೆದುಕೊಂಡಿದೆ, ಇದರ ಪರಿಣಾಮವಾಗಿ 2020–21ರ ಅಂತ್ಯದಲ್ಲಿ, ₹17,320.30 ಕೋಟಿ ಶಿಲ್ಕು ಸಂಗ್ರಹಗೊಂಡಿತ್ತು. ವಹಿಸಲಾದ ಕಾಮಗಾರಿಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಅಸಮರ್ಥತವಾದ ಕಾರಣ ಕೆಆರ್‌ಐಡಿಎಲ್‌ನಲ್ಲಿ ಹಣ ಬಳಕೆಯಾಗದೆ ಉಳಿದಂತಾಯಿತು.

₹303.76 ಕೋಟಿಗೆ ವರ್ಕ್ ಕೋಡ್ ನೀಡದಿರುವುದು, ₹389.90 ಕೋಟಿ ಮೊತ್ತದ ಕ್ರೋಢೀಕರಣ ಮುಂಗಡಗಳನ್ನು ಇತ್ಯರ್ಥಪಡಿಸದಿರುವುದು ಮತ್ತು ಅಮಾನತ್ತು ಖಾತೆಯಲ್ಲಿನ ಹಣವು ₹3.95 ಕೋಟಿಯಿಂದ ₹66.92 ಕೋಟಿಗೆ ಹೆಚ್ಚಳವಾಗಿರುವುದು ಆರ್ಥಿಕ ನಿರ್ವಹಣೆ ಕಳಪೆಯಾಗಿರುವುದನ್ನು ಸೂಚಿಸುತ್ತದೆ. ಕೆಆರ್‌ಐಡಿಎಲ್ ಹಣ ಬಿಡುಗಡೆಗೆ ಮುನ್ನವೇ ವೆಚ್ಚ ಮಾಡಿರುವುದು, ಕಾಮಗಾರಿ ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡಿದ ಹಣಕ್ಕಿಂತ ಹೆಚ್ಚಿನ ವೆಚ್ಚ ಮಾಡಿರುವುದು ಮತ್ತು ಅಂದಾಜು ಮೌಲ್ಯಕ್ಕಿಂತಲೂ ಹೆಚ್ಚಿನ ವೆಚ್ಚ ಮಾಡಿರುವುದು ಆರ್ಥಿಕ ನಿಯಂತ್ರಣಗಳು ಕಳಪೆಯಾಗಿರುವುದನ್ನು ಸೂಚಿಸುತ್ತವೆ. ಕಾಮಗಾರಿಯ ಬಿಲ್ಲುಗಳಲ್ಲಿ ರಾಯಧನವನ್ನು ವಸೂಲಿ ಮಾಡದಿರುವುದು ಗುಂಪು ನಾಯಕರುಗಳಿಗೆ ಅನುಚಿತ ಲಾಭ ನೀಡುವಲ್ಲಿ ಮತ್ತು ಸರ್ಕಾರಕ್ಕೆ ಆದಾಯದ ನಷ್ಟದಲ್ಲಿ ಪರಿಣಮಿಸಿತು.

ಕಾಮಗಾರಿಗಳ ಅನುಷ್ಠಾನದಲ್ಲಿ ವಿವಿಧ ಲೋಪದೋಷಗಳು, ಕಾಮಗಾರಿಗಳು ಪೂರ್ಣಗೊಂಡ ಬಗ್ಗೆ ವರದಿ ಮಾಡದಿರುವುದು ಮತ್ತು ಹೆಚ್ಚುವರಿ ವೆಚ್ಚಗಳು, ಅಂತಿಮ ಬಿಲ್‌ಗಳನ್ನು ಸಲ್ಲಿಸದಿರುವುದು ಮತ್ತು ಇತ್ಯರ್ಥಪಡಿಸದಿರುವುದು ಮತ್ತು ಕಾಮಗಾರಿ ವಹಿಸಿದ ಸಂಸ್ಥೆಗಳಿಗೆ ಉಳಿತಾಯ ಹಣವನ್ನು ವರ್ಗಾಯಿಸದಿರುವುದು ಮೇಲ್ವಿಚಾರಣೆ ಮತ್ತು ಅನುಸರಣಾ ಕಾರ್ಯವಿಧಾನದ ಕೊರತೆಯನ್ನು ಸೂಚಿಸುತ್ತವೆ.

ಕೆಆರ್‌ಐಡಿಎಲ್‌ನಲ್ಲಿ ಗುಣಮಟ್ಟ ನಿಯಂತ್ರಣ ವ್ಯವಸ್ಥೆಯು ಅಸ್ತಿತ್ವದಲ್ಲಿಲ್ಲ. ಮೂರು ಹಂತದ ಗುಣಮಟ್ಟ ನಿಯಂತ್ರಣ ಕಾರ್ಯವಿಧಾನವನ್ನು ನಿಯಮಾನುಸಾರ ಸೂಕ್ತ ರೀತಿಯಲ್ಲಿ ಪಾಲಿಸಲಾಗಿಲ್ಲ. ಮೂರನೇ ವ್ಯಕ್ತಿ ಮೇಲ್ವಿಚಾರಕರನ್ನು ನೇಮಕ ಮಾಡಿಲ್ಲ, ಗುಣಮಟ್ಟ ನಿಯಂತ್ರಣ ವಿಭಾಗಗಳು ನಿಷ್ಕ್ರಿಯವಾಗಿವೆ ಮತ್ತು ಲೋಕೋಪಯೋಗಿ ಇಲಾಖಾ ಕೈಪಿಡಿಯಲ್ಲಿ ನಿಗದಿಪಡಿಸಿದ ಗುಣಮಟ್ಟ ನಿರ್ವಹಣಾ ವ್ಯವಸ್ಥೆ ಮತ್ತು ಗುಣಮಟ್ಟ ಭರವಸೆ ಕಾರ್ಯಕ್ರಮ ಅಸ್ತಿತ್ವದಲ್ಲಿಲ್ಲ.

1974ರಲ್ಲಿ ರೂಪಿಸಲಾದ ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳನ್ನು ಆನಂತರ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಗಾಗಿ ಕೆಟಿಪಿಪಿ ಕಾಯ್ದೆ, 1999ರ ನಿಬಂಧನೆಗಳನ್ನು ಸೂಕ್ತವಾಗಿ ಅಳವಡಿಸಲು ಪರಿಷ್ಕರಿಸಲಾಗಿಲ್ಲ/ನವೀಕರಿಸಲಾಗಿಲ್ಲ. ಅಗತ್ಯವಿದ್ದಂತಹ ಲೆಕ್ಕಪತ್ರ ನಿಯಂತ್ರಣಗಳಲ್ಲಿ ಕೊರತೆಯು ಸ್ಥಾಯಿ ಆದೇಶಗಳನ್ನು ಕನಿಷ್ಠವಾಗಿ ಅನುಸರಿಸಲಾಗಿರುವುದನ್ನು ಸೂಚಿಸುತ್ತದೆ. ಮಾಸಿಕ

ವರದಿಗಳನ್ನು ಸಲ್ಲಿಸದಿರುವುದರಿಂದಾಗಿ, ಮಂಡಳಿಯು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವಶ್ಯವಿದ್ದ, ಮಾಸಿಕ ಲೆಕ್ಕಪತ್ರಗಳು/ತ್ರೈಮಾಸಿಕ ಹಣಕಾಸು ತಖ್ತೆಗಳನ್ನು ಮೌಲ್ಯಮಾಪನ ಮಾಡಲಾಗಲಿಲ್ಲ

### ಸಿಎಜಿ ಏನು ಶಿಫಾರಸು ಮಾಡಿದ್ದಾರೆ

1. ರಾಜ್ಯ ಸರ್ಕಾರವು ಕಾಮಗಾರಿ ವಹಿಸುವ ಸಂಸ್ಥೆಗಳು ಮತ್ತು ಕೆಆರ್‌ಐಡಿಎಲ್ ನಡುವೆ ನಿಧಿಗಳ ನಿಯತಕಾಲಿಕ ಸಮನ್ವಯವನ್ನು ಖಚಿತಪಡಿಸಿಕೊಳ್ಳಬೇಕು. ಕಾಮಗಾರಿಗಳ ಅರಂಭಿಸುವಲ್ಲಿನ ವಿಳಂಬಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.
2. ಇಲಾಖೆಗಳು ಟೆಂಡರ್ ಪ್ರಕ್ರಿಯೆ ನಡೆಸದಿರಲು ಕಾರಣಗಳನ್ನು ನೀಡುವ ಜೊತೆಗೆ ಕಾಮಗಾರಿಗಳನ್ನು ನೇರವಾಗಿ ವಹಿಸಿಕೊಡಲು ವಿವರವಾದ ಸಮರ್ಥನೆಯನ್ನು ನೀಡುವುದನ್ನು ರಾಜ್ಯ ಸರ್ಕಾರವು ಕಡ್ಡಾಯಗೊಳಿಸಬೇಕು. ವಹಿಸುವಿಕೆಯ ಷರತ್ತುಗಳನ್ನು ಉಲ್ಲಂಘಿಸಿದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಬೇಕು.
3. ಅಂದಾಜುಪಟ್ಟಿಗಳ ತಯಾರಿಕೆ, ಪರಿಶೀಲನೆ ಮತ್ತು ಮಂಜೂರಾತಿಯ ಪ್ರತಿ ಹಂತದಲ್ಲಿಯೂ ಜವಾಬ್ದಾರಿ ನಿಗದಿಪಡಿಸಲಾಗಿದೆ ಎಂಬುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳನ್ನು ಸೂಕ್ತವಾಗಿ ಪರಿಷ್ಕರಿಸಬೇಕು
4. ಕೆಆರ್‌ಐಡಿಎಲ್ ಕಾಮಗಾರಿಗಳನ್ನು ಸ್ವತಃ ನಿರ್ವಹಿಸುತ್ತದೆ ಮತ್ತು ಗುಂಪು ನಾಯಕರುಗಳಿಗೆ ವಹಿಸುವುದಿಲ್ಲ ಎಂಬುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ಟೆಂಡರ್ ಪ್ರಕ್ರಿಯೆ ಅನುಸರಿಸದೆಯೇ ಕಾಮಗಾರಿಗಳನ್ನು ಉಪ-ಗುತ್ತಿಗೆ ನೀಡುವುದಕ್ಕೆ ಹೊಣೆಗಾರಿಕೆ ನಿಗದಿಪಡಿಸಬೇಕು ಹಾಗೂ ಪ್ರತಿ ಕಾಮಗಾರಿಯಲ್ಲಿ ನೇಮಿಸಿಕೊಂಡ ಕೂಲಿಯಾಳುಗಳಿಗೆ ಪಾವತಿಗಳ ವಿವರಗಳನ್ನು ಕೆಆರ್‌ಐಡಿಎಲ್ ಡಿಜಿಟಲ್ ದತ್ತಾಂಶವಾಗಿ ನಿರ್ವಹಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.
5. ಸಕಾಲದಲ್ಲಿ ಹಣ ಬಿಡುಗಡೆ ಮತ್ತು ಸಕಾಲದಲ್ಲಿ ಕಾಮಗಾರಿಗಳನ್ನು ಪೂರೈಸುವುದನ್ನು ಖಚಿತಪಡಿಸಿಕೊಳ್ಳಲು, ಬಿಬಿಎಂಪಿಯು ರೂಢಿಸಿಕೊಂಡಿರುವಂತೆ, ಇತರ ಇಲಾಖೆಗಳೂ ಕೆಆರ್‌ಐಡಿಎಲ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವುದನ್ನು ರಾಜ್ಯ ಸರ್ಕಾರವು ಕಡ್ಡಾಯಗೊಳಿಸಬೇಕು.
6. ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಿ ಸಾಮಗ್ರಿಗಳ ಖರೀದಿ ಮಾಡಿರುವುದಕ್ಕೆ ಮತ್ತು ಮಾಪನ ಪುಸ್ತಕಗಳಲ್ಲಿ ಸೂಕ್ತ ರೀತಿಯ ದಾಖಲಾತಿಗಳಿಲ್ಲದೆಯೇ ಪಾವತಿಗಳನ್ನು ಮಾಡಿರುವುದಕ್ಕೆ ರಾಜ್ಯ ಸರ್ಕಾರವು ಹೊಣೆಗಾರಿಕೆ ನಿಗದಿಪಡಿಸಬೇಕು.
7. ರಾಜ್ಯ ಸರ್ಕಾರವು ಕಾಮಗಾರಿಗಳ ತತ್ಕಾಲದ ಮೇಲ್ವಿಚಾರಣೆಗಾಗಿ ಅಸ್ತಿತ್ವದಲ್ಲಿರುವ ಯೋಜನೆ ನಿರ್ವಹಣೆ ಸಾಫ್ಟ್‌ವೇರ್ (ಭೂಸಿರಿ) ಅನ್ನು ಸಾಮಗ್ರಿ ನಿರ್ವಹಣೆ ವ್ಯವಸ್ಥೆಯನ್ನೂ ಒಳಗೊಂಡಂತೆ ಮತ್ತು ವಹಿಸಿದ ಕಾಮಗಾರಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯ ಜಾಡು ಹಿಡಿದು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ವಹಿಸಿದ ಇಲಾಖೆಗಳಿಗೆ ಒಂದು ಮಾಡ್ಯೂಲ್ ಒದಗಿಸಿ ನವೀಕರಿಸಲು/ಮಾರ್ಪಡಿಸಲು ಕೆಆರ್‌ಐಡಿಎಲ್‌ಗೆ ಸೂಚನೆ ನೀಡಬೇಕು.

8. ರಾಜ್ಯ ಸರ್ಕಾರವು ಮೂರು ಹಂತದ ಗುಣಮಟ್ಟದ ಮೇಲ್ವಿಚಾರಣಾ ವ್ಯವಸ್ಥೆಯ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ನಿಷ್ಕ್ರಿಯವಾಗಿರುವ ಗುಣಮಟ್ಟ ನಿಯಂತ್ರಣ ವಿಭಾಗಗಳನ್ನು ಕಾರ್ಯೋನ್ಮುಖಗೊಳಿಸಬೇಕು.
9. ಕೆಟಿಪಿಪಿ ಕಾಯ್ದೆಯ ನಿಬಂಧನೆಗಳು, ಲೋಕೋಪಯೋಗಿ ಇಲಾಖೆಯ ಲೆಕ್ಕಪತ್ರ ಕೈಪಿಡಿ ಮತ್ತು ಇಲಾಖಾ ಕೈಪಿಡಿಗಳ ಪರಿಷ್ಕರಣೆಗಳು ಮತ್ತು ಸಂಬಂಧಿತ ಇತರ ಶಾಸನಬದ್ಧ ನಿಯಮಗಳು ಹಾಗೂ ಖರೀದಿ ಮತ್ತು ಅನುಷ್ಠಾನಕ್ಕೆ ಸಂಬಂಧಿತ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಕೆಆರ್ಐಡಿಎಲ್‌ನ ಸ್ಥಾಯಿ ಆದೇಶಗಳ ನಿಯತಕಾಲಿಕ ಪರಿಷ್ಕರಣೆಯನ್ನು ಖಚಿತಪಡಿಸಿಕೊಳ್ಳಬೇಕು. ದರಪಟ್ಟಿ ಮತ್ತು ಚಾಲ್ತಿ ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ದರಗಳ ನಿರಂತರ ನವೀಕರಣಕ್ಕಾಗಿ ಕೆಆರ್ಐಡಿಎಲ್ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಬೇಕು.
10. ವಹಿಸಲಾದ ಕಾಮಗಾರಿಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಲಭ್ಯವಿರುವ ಮಾನವಶಕ್ತಿಯ ಆಧಾರದ ಮೇಲೆ ಕೆಆರ್ಐಡಿಎಲ್ ಕಾಮಗಾರಿಗಳನ್ನು ಸ್ವೀಕರಿಸುವುದನ್ನು ಅಥವಾ ನಿರಾಕರಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

## ಲೆಕ್ಕಪರಿಶೋಧನೆಯ ಶಿಫಾರಸುಗಳಿಗೆ ಆಡಳಿತ ಇಲಾಖೆಯ ಪ್ರತಿಕ್ರಿಯೆ

- ಗುಂಪು ನಾಯಕರುಗಳ ಪಟ್ಟಿ ಸಿದ್ಧಪಡಿಸಲಾಗುವುದು ಮತ್ತು ಅದರಂತೆ ಪಾವತಿಗಳನ್ನು ಕ್ರಮಬದ್ಧಗೊಳಿಸಲಾಗುವುದು ಎಂದು ಸರ್ಕಾರವು ಉತ್ತರಿಸಿತು. ವಿಭಾಗಗಳು/ಉಪ–ವಿಭಾಗಗಳು ಶಾಸನಬದ್ಧ ಕಡಿತಗಳನ್ನು ಮಾಡಬೇಕಾಗಿರುವುದರಿಂದ ಮಂಡಳಿಯು ಆನ್‌ಲೈನ್ ಪಾವತಿಗಳನ್ನು ಮಾಡಲು ಸಾಧ್ಯವಾಗುವುದಿಲ್ಲ ಎಂದೂ ಸರ್ಕಾರವು ತಿಳಿಸಿತು. ಆನ್‌ಲೈನ್ ಪಾವತಿಗಳು ಹೆಚ್ಚು ಪಾರದರ್ಶಕತೆಯನ್ನು ಮತ್ತು ಲೆಕ್ಕಪತ್ರ ನಿರ್ವಹಣೆಯ ಮೇಲೆ ಸೂಕ್ತ ನಿಯಂತ್ರಣವನ್ನು ತರುವುದರಿಂದ ಸರ್ಕಾರದ ಪ್ರತಿಕ್ರಿಯೆಯು ಸ್ವೀಕಾರಾರ್ಹವಾಗಿಲ್ಲ. ಇದಲ್ಲದೆ, ಗುಂಪು ನಾಯಕರುಗಳ ಪಟ್ಟಿ ತಯಾರಿಕೆಯು ಗುತ್ತಿಗೆದಾರರುಗಳನ್ನು ಗುಂಪು ನಾಯಕರುಗಳಾಗಿ ಕ್ರಮಬದ್ಧಗೊಳಿಸುವುದರಲ್ಲಿ ಪರಿಣಮಿಸಬಹುದಾಗಿದೆ.
- 1974ರಲ್ಲಿ ಹೊರಡಿಸಿದ ಸ್ಥಾಯಿ ಆದೇಶಗಳು ಅಂದಿನ ಅಗತ್ಯತೆಗಳಿಗೆ ಅನುಗುಣವಾಗಿದ್ದವು ಆಧಾರದ ಮತ್ತು ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಇಂದಿನ ಅವಶ್ಯಕತೆಗೆ ತಕ್ಕಂತೆ ಸ್ಥಾಯಿ ಆದೇಶಗಳನ್ನು ತಿದ್ದುಪಡಿ ಮಾಡುವ ಅಗತ್ಯವಿದೆ ಎಂದು ಸರ್ಕಾರವು ಒಪ್ಪಿಕೊಂಡಿತು.

# ಅಧ್ಯಾಯ I
# ಪರಿಚಯ



# ಅಧ್ಯಾಯ 1 – ಪರಿಚಯ

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಆರ್‌ಡಿಪಿಆರ್) ಅಡಿಯಲ್ಲಿನ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್), ರಾಜ್ಯದಲ್ಲಿ ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಗಳ ಅನುಷ್ಠಾನ ಮತ್ತು ಆಸ್ತಿಗಳ ರಚನೆಯಲ್ಲಿ ತೊಡಗಿಸಿಕೊಂಡಿದೆ. ಇದು 1971ರಲ್ಲಿ ಭೂ ಸೇನೆಯ ನಿರ್ದೇಶನಾಲಯವಾಗಿ ಪ್ರಾರಂಭವಾಯಿತು ಮತ್ತು ಕರ್ನಾಟಕ ಸರ್ಕಾರದ ಸಂಪೂರ್ಣ ಮಾಲೀಕತ್ವದ ಅಡಿಯಲ್ಲಿ 'ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ (ಕೆಎಲ್‌ಎಸಿ)' ಎಂದು ಸ್ಥಾಪಿಸಲಾಯಿತು (ಆಗಸ್ಟ್ 1974) ಮತ್ತು ಆಗಸ್ಟ್ 2009ರಲ್ಲಿ 'ಕೆಆರ್‌ಐಡಿಎಲ್' ಎಂದು ಮರುನಾಮಕರಣ ಮಾಡಲಾಯಿತು.

## 1.1 ಕೆಆರ್‌ಐಡಿಎಲ್‌ನ ಉದ್ದೇಶಗಳು

ಈ ಕೆಳಗಿನವುಗಳು ಕಂಪನಿಯ ಉದ್ದೇಶಗಳಾಗಿದ್ದವು

- ನಿರುದ್ಯೋಗಿಗಳು ಮತ್ತು ಕಡಿಮೆ ಆದಾಯದ ಉದ್ಯೋಗದಲ್ಲಿರುವ ಗ್ರಾಮೀಣ ಯುವಕರಿಗೆ ಅವರ ಕೌಶಲ್ಯ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸಲು ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುವ ದೃಷ್ಟಿಯಿಂದ ಗ್ರಾಮೀಣ ಅಭಿವೃದ್ಧಿ ಯೋಜನೆಗಳಡಿಯಲ್ಲಿ ಕಾರ್ಮಿಕ ಆಧಾರಿತ ಕಾಮಗಾರಿಗಳ ಅನುಷ್ಠಾನ.
- ಹೆಚ್ಚಿನ ವೆಚ್ಚ ಮತ್ತು ಗ್ರಾಮೀಣ ಬಡವರ ಶೋಷಣೆಯನ್ನು ತಪ್ಪಿಸಲು ಮಧ್ಯವರ್ತಿಗಳನ್ನು ತೊಡೆದುಹಾಕುವ ಮೂಲಕ ಎಲ್ಲಾ ಗ್ರಾಮೀಣ ಅಭಿವೃದ್ಧಿ ಸಿವಿಲ್ ಕಾಮಗಾರಿಗಳನ್ನು ಸ್ವತಃ ನೇರವಾಗಿ ಮೇಲ್ವಿಚಾರಣೆ ಮಾಡುವುದು ಮತ್ತು ಅನುಷ್ಠಾನಗೊಳಿಸುವುದು ಮತ್ತು ಆ ಮೂಲಕ ಹಣದ ಪೂರ್ಣ ಮೌಲ್ಯವನ್ನು ಜನರಿಗೆ ತಲುಪಿಸುವುದು.
- ಸಮಗ್ರ ಪ್ರದೇಶಾಭಿವೃದ್ಧಿ, ಜಲಸಂಪನ್ಮೂಲ ಅಭಿವೃದ್ಧಿ, ಹೈನುಗಾರಿಕೆ, ಮೀನುಗಾರಿಕೆ, ಸಣ್ಣ ನೀರಾವರಿ, ಗ್ರಾಮೀಣ ಸಂಪರ್ಕ, ಸೇತುವೆಗಳು, ರಸ್ತೆಗಳು, ಕಟ್ಟಡ ನಿರ್ಮಾಣಗಳಂತಹ ಶಾಲೆಗಳು, ಆಸ್ಪತ್ರೆಗಳು, ವಸತಿ ಕಟ್ಟಡಗಳು ಹಾಗೂ ಮಣ್ಣು ಸಂರಕ್ಷಣೆಯಂತಹ ಅಭಿವೃದ್ಧಿಗೆ ಪೂರಕವಾದ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಸಹಾಯ ಮಾಡುವುದು.

## 1.2 ಸಂಘಟನಾ ವ್ಯವಸ್ಥೆ

ವ್ಯವಸ್ಥಾಪಕ ನಿರ್ದೇಶಕರು (ಎಮ್‌ಡಿ) ಕಂಪನಿಯ ಮುಖ್ಯಸ್ಥರಾಗಿರುತ್ತಾರೆ. ಕೆಆರ್‌ಐಡಿಎಲ್‌ನ ಚಟುವಟಿಕೆಗಳನ್ನು ರಾಜ್ಯ ಸರ್ಕಾರದಿಂದ ನಾಮನಿರ್ದೇಶನಗೊಂಡ ನಿರ್ದೇಶಕರ ಮಂಡಳಿಯು ನಿಯಂತ್ರಿಸುತ್ತದೆ ಮತ್ತು ನಿರ್ವಹಿಸುತ್ತದೆ. 1 ಆಗಸ್ಟ್ 2021 ರಂತೆ, ಕೆಆರ್‌ಐಡಿಎಲ್ ಮೂರು ಮುಖ್ಯ ಇಂಜಿನಿಯರ್‌ಗಳನ್ನು (ಸಿಇ) ಹೊಂದಿದ್ದು, ಅವರ ಅಡಿಯಲ್ಲಿ 6 ವಲಯಗಳು, 41 ವಿಭಾಗಗಳು ಮತ್ತು 90 ಉಪ-ವಿಭಾಗಗಳು (ಪ್ರಾಜೆಕ್ಟ್ ಇಂಪ್ಲಿಮೆಂಟಿಂಗ್ ಯೂನಿಟ್‌ಗಳು ಎಂದೂ ಸಹ ಕರೆಯಲ್ಪಡುತ್ತವೆ) ಕಾರ್ಯನಿರ್ವಹಿಸುತ್ತಿವೆ. ಇವುಗಳು ಕೆಳಗೆ ನಕ್ಷೆ 1.1ರಲ್ಲಿ ತೋರಿಸಿರುವಂತೆ, ಅನುಕ್ರಮವಾಗಿ ಅಧೀಕ್ಷಕ ಇಂಜಿನಿಯರ್ (ಎಸ್‌ಇ), ಕಾರ್ಯನಿರ್ವಾಹಕ ಇಂಜಿನಿಯರ್ (ಇಇ) ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಇಇ) ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತವೆ.

**ನಕ್ಷೆ–1.1: ಕಂಪನಿಯ ಸಾಂಸ್ಥಿಕ ವ್ಯವಸ್ಥೆ**




ಆಧಾರ: ಕೆಆರ್‌ಐಡಿಎಲ್‌ನ ವಾರ್ಷಿಕ ವರದಿ

## 1.3 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳನ್ನು ಪರಿಶೀಲಿಸುವುದು ಲೆಕ್ಕಪರಿಶೋಧನೆಯ ಉದ್ದೇಶವಾಗಿತ್ತು:

- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯಿದೆ, 1999ರ ಸೆಕ್ಷನ್ 4(ಜಿ) ನಿಬಂಧನೆಗಳನ್ನು ಅನ್ವಯಿಸುವ ಮೂಲಕ ಕೆಆರ್ಐಡಿಎಲ್‌ಗೆ ಕಾಮಗಾರಿಗಳನ್ನು ವಹಿಸಿಕೊಡುವ ಸರ್ಕಾರದ ಇಲಾಖೆಗಳ ಕ್ರಮವು ಸಮರ್ಥನೀಯವಾಗಿತ್ತೇ;
- ಒಪ್ಪಿಸಲಾದ ಕೆಲಸಗಳನ್ನು ಕೆಆರ್ಐಡಿಎಲ್ ಸಮರ್ಥವಾಗಿ, ಪರಿಣಾಮಕಾರಿಯಾಗಿ ಮತ್ತು ಆರ್ಥಿಕವಾಗಿ ನಿಗದಿಪಡಿಸಿದ ಗುಣಮಟ್ಟದ ಮಾನದಂಡಗಳಿಗೆ ಬದ್ಧವಾಗಿ ನಿರ್ವಹಿಸಿತ್ತೇ;
- ನಿರ್ಮಾಣ ಸಾಮಗ್ರಿಗಳು, ಕಾರ್ಮಿಕರು ಮತ್ತು ಯಂತ್ರೋಪಕರಣಗಳ ಖರೀದಿಯನ್ನು ಕೆಆರ್ಐಡಿಎಲ್ ಆರ್ಥಿಕ ಮಿತವ್ಯಯಕಾರಿಯಾಗಿ ಮತ್ತು ನೇರವಾಗಿ ಮಾಡಿತ್ತೇ;
- ಲೆಕ್ಕಪತ್ರ ವ್ಯವಸ್ಥೆ/ತೆರಿಗೆ ಮತ್ತು ಉತ್ತಮ ಆಂತರಿಕ ನಿಯಂತ್ರಣ ವ್ಯವಸ್ಥೆ ಜೊತೆಗೆ ಕಾಮಗಾರಿ ವಹಿಸಿಕೊಡುವ ಇಲಾಖೆಗಳೊಂದಿಗೆ ಸಮನ್ವಯವು ಅಸ್ತಿತ್ವದಲ್ಲಿತ್ತೇ;

## 1.4 ಲೆಕ್ಕಪರಿಶೋಧನಾ ಮಾನದಂಡಗಳು

ಈ ಕೆಳಗಿನವುಗಳು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಮಾನದಂಡಗಳಾಗಿದ್ದವು:

- ಸ್ಥಾಯಿ ಆದೇಶಗಳು, ಕೆಎಲ್ಎಸಿ/ಕೆಆರ್ಐಡಿಎಲ್ ಖರೀದಿ ಮತ್ತು ಕಾರ್ಯಾಚರಣೆ ಕೈಪಿಡಿ.
- ಲೋಕೋಪಯೋಗಿ ಇಲಾಖೆ/ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ (ಪಿಆರ್ಇಡಿ) ಮತ್ತು ಸರ್ಕಾರದ ಇತರ ಇಲಾಖೆಗಳು ನಿಗದಿಪಡಿಸಿದ ದರಪಟ್ಟಿ/ಪ್ರಮುಖ ಸಾಮಗ್ರಿಗಳ ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳು).
- ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ (ಮಾರ್ತ್)/ಗ್ರಾಮೀಣಾಭಿವೃದ್ಧಿ ಸಚಿವಾಲಯ/ಭಾರತೀಯ ರಸ್ತೆ ಕಾಂಗ್ರೆಸ್ (ಐಆರ್‌ಸಿ) ಮತ್ತು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಮ್‌ಜಿಎಸ್‌ವೈ) ಕಾರ್ಯಕ್ರಮದ ಮಾರ್ಗಸೂಚಿಗಳು.
- ಕರ್ನಾಟಕ ಲೋಕೋಪಯೋಗಿ ಇಲಾಖೆ ಲೆಕ್ಕಪತ್ರ ಕೋಡ್ ಮತ್ತು ಕರ್ನಾಟಕ ಲೋಕೋಪಯೋಗಿ ಇಲಾಖೆ ಕಾಮಗಾರಿಗಳ ಕೋಡ್/ಕೈಪಿಡಿ, ಕೆಟಿಪಿಪಿ ಕಾಯಿದೆ, ಕರ್ನಾಟಕ ಹಣಕಾಸು ಸಂಹಿತೆ.
- ಭಾರತ ಸರ್ಕಾರ/ರಾಜ್ಯ ಸರ್ಕಾರದ ಆದೇಶಗಳು, ರಾಜ್ಯ ಸರ್ಕಾರದಿಂದ ಹೊರಡಿಸಿದ ಸೂಚನೆಗಳು/ಮಾರ್ಗಸೂಚಿಗಳು/ಕಾಮಗಾರಿ ವಹಿಸುವ ಇಲಾಖೆಗಳ ಆದೇಶಗಳು, ಮಂಡಳಿಯ ಸಭೆಗಳ ನಡಾವಳಿಗಳು, ಗುತ್ತಿಗೆ ಒಪ್ಪಂದದ ದಾಖಲೆಗಳು ಇತ್ಯಾದಿ.
- ಕಾಮಗಾರಿ ವಹಿಸಿಕೊಡುವ ಸಂಸ್ಥೆಗಳು/ಕಂಪನಿಯಿಂದ ಕಾಲಕಾಲಕ್ಕೆ ತಯಾರಿಸಲಾದ ಕ್ರಿಯಾ ಯೋಜನೆಗಳು.

## 1.5 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

2016–17 ರಿಂದ 2020–21ರ ಅವಧಿಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಜುಲೈ 2021 ರಿಂದ ಮಾರ್ಚ್ 2022ರ ಅವಧಿಯಲ್ಲಿ ಕೆಆರ್ಐಡಿಎಲ್ ವ್ಯವಸ್ಥಾಪಕ ನಿರ್ದೇಶಕರು ಮತ್ತು ಎಲ್ಲಾ ಆರು

ವಲಯಗಳನ್ನು[1] ಒಳಗೊಂಡಂತೆ 24 ಉಪ-ವಿಭಾಗಗಳ ಕಚೇರಿಗಳ ದಾಖಲೆಗಳ ಪರೀಕ್ಷಾ-ತನಿಖೆಯ ಮೂಲಕ ನಡೆಸಲಾಯಿತು. ಉಪ-ವಿಭಾಗಗಳ ಆಯ್ಕೆಗಾಗಿ ಲೆಕ್ಕಪರಿಶೋಧನೆಯು ಯಾದೃಚ್ಛಿಕ ಮಾದರಿ ವಿಧಾನವನ್ನು ಅಳವಡಿಸಿಕೊಂಡಿತು ಮತ್ತು **ಅನುಬಂಧ-I**ರಲ್ಲಿ ತೋರಿಸಿರುವಂತೆ ಪ್ರತಿ ಆರು ವಲಯಗಳಿಂದ ನಾಲ್ಕು ಉಪ-ವಿಭಾಗಗಳನ್ನು ಆಯ್ಕೆಮಾಡಲಾಗಿದೆ. ಪ್ರತಿ ಆಯ್ದ ಉಪ-ವಿಭಾಗದೊಳಗಿನ ಕಾಮಗಾರಿಗಳ ಆಯ್ಕೆಯು ಕಾಮಗಾರಿಗಳ ಆರ್ಥಿಕ ಮೌಲ್ಯವನ್ನು ಆಧರಿಸಿದೆ. ಅದರಂತೆ, ಆಯ್ದ ಉಪವಿಭಾಗಗಳಲ್ಲಿ ಕಾರ್ಯಗತಗೊಂಡ ಒಟ್ಟಾರೆ 37,906 ಕಾಮಗಾರಿಗಳಲ್ಲಿ 1,379 ಕಾಮಗಾರಿಗಳನ್ನು ಪರೀಕ್ಷಾ-ತನಿಖೆಗೆ ಆಯ್ಕೆ ಮಾಡಲಾಗಿದೆ. ಉಪ-ವಿಭಾಗಗಳ ಅನುಸಾರ ಆಯ್ದ ಕಾಮಗಾರಿಗಳ ವಿವರಗಳನ್ನು **ಅನುಬಂಧ-II**ರಲ್ಲಿ ತೋರಿಸಲಾಗಿದೆ. ಕೆಆರ್ಐಡಿಎಲ್‌ನ ಎಇಇ/ಸಿಬ್ಬಂದಿಗಳೊಂದಿಗೆ ಜಂಟಿ ಭೌತಿಕ ಪರಿಶೀಲನೆಯನ್ನು ಸಹ ನಡೆಸಲಾಯಿತು.

18 ಆಗಸ್ಟ್ 2021ರಂದು ನಡೆದ ಪ್ರವೇಶ ಸಮಾವೇಶದ ಸಂದರ್ಭದಲ್ಲಿ ಲೆಕ್ಕಪರಿಶೋಧನಾ ಉದ್ದೇಶಗಳು, ವ್ಯಾಪ್ತಿ ಮತ್ತು ವಿಧಾನವನ್ನು ಆರ್‌ಡಿಪಿಆರ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೊಂದಿಗೆ ಚರ್ಚಿಸಲಾಯಿತು. ಆರ್‌ಡಿಪಿಆರ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರೊಂದಿಗೆ ನಿರ್ಗಮನ ಸಮಾವೇಶವನ್ನು 13 ಜುಲೈ 2022 ರಂದು ನಡೆಸಲಾಯಿತು.

## 1.6 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ರಾಜ್ಯ ಸರ್ಕಾರ, ಆರ್‌ಡಿಪಿಆರ್ ಇಲಾಖೆ, ಬೆಂಗಳೂರಿನ ಕೆಆರ್ಐಡಿಎಲ್ ವ್ಯವಸ್ಥಾಪಕ ನಿರ್ದೇಶಕರ ಕಚೇರಿ ಮತ್ತು ಪರೀಕ್ಷಾ-ತನಿಖೆ ನಡೆಸಲಾದ ಉಪ-ವಿಭಾಗಗಳು ನೀಡಿದ ಸಹಕಾರ ಮತ್ತು ಸಹಾಯಕ್ಕೆ ಲೆಕ್ಕಪರಿಶೋಧನೆಯು ಕೃತಜ್ಞತೆ ಸಲ್ಲಿಸುತ್ತದೆ.

## 1.7 ಲೆಕ್ಕಪರಿಶೋಧನೆಯ ಫಲಿತಾಂಶಗಳ ಜೋಡಣೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತಹ ಅಂಶಗಳನ್ನು ಈ ಕೆಳಗಿನಂತೆ ಲೆಕ್ಕಪರಿಶೋಧನಾ ಉದ್ದೇಶಗಳಿಗೆ ಅನುಗುಣವಾಗಿ ಸಂಯೋಜಿಸಲಾಗಿದೆ:

ಅಧ್ಯಾಯ 2: ಹಣಕಾಸು ನಿರ್ವಹಣೆ

ಅಧ್ಯಾಯ 3: ಕಾಮಗಾರಿಗಳ ವಹಿಸುವಿಕೆ, ಅಂದಾಜುಪಟ್ಟಿಗಳು ಮತ್ತು ಅನುಮೋದನೆಗಳು

ಅಧ್ಯಾಯ 4: ಕಾಮಗಾರಿಗಳ ಅನುಷ್ಠಾನ

ಅಧ್ಯಾಯ 5: ಲೆಕ್ಕಪತ್ರ ನಿರ್ವಹಣೆ, ಆಂತರಿಕ ನಿಯಂತ್ರಣಗಳು ಮತ್ತು ಮೇಲ್ವಿಚಾರಣೆ

[1] ಬೆಳಗಾವಿ, ಬೆಂಗಳೂರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಸೆಂಟ್ರಲ್, ಕಲಬುರಗಿ ಮತ್ತು ಮೈಸೂರು.

# ಅಧ್ಯಾಯ II
# ಹಣಕಾಸು ನಿರ್ವಹಣೆ



2017–18ರಿಂದ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಸ್ವೀಕರಿಸಲಾದ ₹303.76 ಕೋಟಿ ಮೌಲ್ಯದ ಕಾಮಗಾರಿಗಳಿಗೆ ಅಗತ್ಯವಾಗಿದ್ದ ವರ್ಕ್ ಕೋಡ್ ನೀಡಲಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಹಣ ಬಿಡುಗಡೆಗೆ ಮುನ್ನವೇ ಕಾಮಗಾರಿಗಳನ್ನು ಆರಂಭಿಸಿರುವುದು ಮತ್ತು ಕಾಮಗಾರಿ ವಹಿಸುವ ಸಂಸ್ಥೆಗಳು ಹಣ ಬಿಡುಗಡೆ ಮಾಡಿದ್ದಕ್ಕಿಂತ ಹೆಚ್ಚು ವೆಚ್ಚ ಮಾಡುತ್ತಿರುವ ಸಂದರ್ಭಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಇದಲ್ಲದೆ, 15 ಕಾಮಗಾರಿಗಳಲ್ಲಿ ವೆಚ್ಚವು ಅಂದಾಜು ವೆಚ್ಚಕ್ಕಿಂತ ₹3.82 ಕೋಟಿಗಳಷ್ಟು ಹೆಚ್ಚಾದರೂ ಮತ್ತು 439 ಕಾಮಗಾರಿಗಳಿಗೆ ಸಂಬಂಧಿಸಿದಂತೆ ₹54.39 ಕೋಟಿ ಹಣ ಸ್ವೀಕೃತವಾಗಬೇಕಿದ್ದರೂ ಕೆಆರ್‌ಐಡಿಎಲ್ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಬಾಕಿ ಹಣವನ್ನು ತ್ವರಿತವಾಗಿ ಪಡೆಯಲು ವಿಫಲವಾಗಿದೆ. ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಬಳಕೆಗಾಗಿ ಕೆಆರ್‌ಐಡಿಎಲ್ ಪಡೆದ ಹಣದಲ್ಲಿ ಶೇಕಡ 33ರಷ್ಟು ಬಳಕೆಯಾಗದ ಉಳಿಕೆಯಿದ್ದಿತು. ಕೆಆರ್‌ಐಡಿಎಲ್‌ನ ಸಾಧನೆಯ ಕೊರತೆಯಿಂದಾಗಿ ಕ್ರೋಢೀಕರಣ ಮುಂಗಡವಾಗಿ ಪಡೆದ ಹಣದಲ್ಲಿ ₹389.90 ಕೋಟಿಗಳಷ್ಟು ಮೊತ್ತವು ಇತ್ಯರ್ಥವಾಗದೆ ಉಳಿದಿತ್ತು.

ಗುರುತಿಸಲಾಗದ ಅಂತಿಮ ಲೆಕ್ಕ ಶೀರ್ಷಿಕೆಗಳ ವಹಿವಾಟುಗಳ ಲೆಕ್ಕ ಇಡುವ ಅಮಾನತ್ತು ಖಾತೆಯ ಶಿಲ್ಕು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇತ್ತು. ಗ್ರೂಪ್ ಲೀಡರ್‌ಗಳ ಕಾಮಗಾರಿ ಬಿಲ್‌ಗಳಿಂದ ₹4.81 ಕೋಟಿಯಷ್ಟು ಶಾಸನಬದ್ಧ ರಾಯಧನ ಕಠಾವಣೆ ಮಾಡಲು ಕೆಆರ್‌ಐಡಿಎಲ್ ವಿಫಲವಾಗಿದೆ.

ಕಾಮಗಾರಿವಾರು ದಾಖಲೆಗಳ ನಿರ್ವಹಣೆ ಮಾಡದಿರುವುದು, ವರ್ಕ್ ಕೋಡ್ ನೀಡದಿರುವುದು, ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಬಿಡುಗಡೆಯಾದ ಹಣಕ್ಕೆ ಮೀರಿದ ಖರ್ಚು, ಯೋಜನೆಗಳ ಹಣದ ಮೇಲೆ ಗಳಿಸಿದ ಬಡ್ಡಿಯ ಜಮೆಯ ಬಗೆಗಿನ ಸರ್ಕಾರದ ಆದೇಶಗಳನ್ನು ಅನುಸರಿಸದಿರುವುದು ಮತ್ತು ಇತ್ಯರ್ಥವಾಗದ ಕ್ರೋಢೀಕರಣ ಮುಂಗಡಗಳು ಮತ್ತು ಅಮಾನತ್ತು ಖಾತೆಗಳು ಕಾರಣದಿಂದಾಗಿ ಕೆಆರ್‌ಐಡಿಎಲ್‌ನ ಆರ್ಥಿಕ ನಿರ್ವಹಣೆ ದುರ್ಬಲವಾಗಿತ್ತು.

ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಕೆಆರ್‌ಐಡಿಎಲ್‌ನ ಕೇಂದ್ರ ಕಛೇರಿಗೆ ಮತ್ತು ಕೇಂದ್ರ ಕಛೇರಿಯಿಂದ ಉಪ–ವಿಭಾಗಗಳಿಗೆ ಅಂತಿಮ ಖಾತೆಗಳ ಸಲ್ಲಿಕೆಯಾಗುವವರೆಗಿನ ಹಣದ ಹರಿವಿನ ಪ್ರಕ್ರಿಯೆಯನ್ನು ಕೆಳಗಿನ **ನಕ್ಷೆ 2.1**ರಲ್ಲಿ ತೋರಿಸಲಾಗಿದೆ.

**ನಕ್ಷೆ 2.1: ಹಣದ ಹರಿವಿನ ಪ್ರಕ್ರಿಯೆ** ಆಧಾರ: ಕೆಆರ್‌ಐಡಿಎಲ್ ಒದಗಿಸಿದ ಮಾಹಿತಿ



## 2.1 ಹಣದ ಸ್ವೀಕೃತಿ ಮತ್ತು ಬಳಕೆ/ಭೌತಿಕ ಮತ್ತು ಆರ್ಥಿಕ ಪ್ರಗತಿ

2016–17 ರಿಂದ 2020–21ರವರೆಗೆ ಕೆಆರ್ಐಡಿಎಲ್‌ನ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳ ಅನುಸಾರ ಸ್ವೀಕರಿಸಿದ, ಬಳಸಿದ ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳಿಗೆ ಸರಿಹೊಂದಿಸಲಾದ ಹಣದ ವಿವರಗಳನ್ನು ಕೆಳಗಿನ **ಕೋಷ್ಟಕ 2.1**ರಲ್ಲಿ ನೀಡಲಾಗಿದೆ:

**ಕೋಷ್ಟಕ 2.1: ಭೌತಿಕ ಮತ್ತು ಆರ್ಥಿಕ ಪ್ರಗತಿಯಲ್ಲಿನ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ವರ್ಷ | ವಹಿಸಿದ ಒಟ್ಟು ಕಾಮಗಾರಿಗಳ ಸಂಖ್ಯೆ | ಪೂರ್ಣಗೊಳಿಸಿದ ಒಟ್ಟು ಕಾಮಗಾರಿಗಳ ಸಂಖ್ಯೆ | ಪೂರ್ಣಗೊಳಿಸಿದ ಕಾಮಗಾರಿಗಳ ಶೇಕಡಾವಾರು | ವರ್ಷದಲ್ಲಿ ಸ್ವೀಕರಿಸಿದ ಹಣ | ಲಭ್ಯವಿದ್ದ ಒಟ್ಟು ಹಣ (ಎ + ಹಿಂದಿನ ವರ್ಷದ ಅಂತಿಮ ಶಿಲ್ಕು (ಡಿ)) | ವರ್ಷದಲ್ಲಿ ಸರಿಹೊಂದಿಸಲಾದ ಹಣ | ಲಭ್ಯವಿದ್ದ ಶಿಲ್ಕು (ಬಿ–ಸಿ) |
|---|---|---|---|---|---|---|---|
| | | | | (ಎ) | (ಬಿ) | (ಸಿ) | (ಡಿ) |
| 2016–17 | 12802 | 4967 | 38.79 | 2,604.14 | *7,816.15 | 1,068.05 | 6,748.10 |
| 2017–18 | 19384 | 5250 | 27.08 | 3,640.98 | 10,389.08 | 1,247.79 | 9,141.29 |
| 2018–19 | 24963 | 6169 | 24.71 | 3,590.21 | 12,731.50 | 1,679.74 | 11,051.76 |
| 2019–20 | 17893 | 6296 | 35.18 | 4,610.35 | 15,662.11 | 1,346.68 | 14,315.43 |
| 2020–21 | 9532 | 1332 | 13.97 | 3,357.75 | 17,673.18 | 352.88 | 17,320.30 |

ಆಧಾರ: ಕೆಆರ್ಐಡಿಎಲ್ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಸಂಕಲಿಸಿರುವುದು

* ₹5212.01 ಕೋಟಿ ಆರಂಭಿಕ ಬಾಕಿ ಒಳಗೊಂಡಿದೆ

2016–17 ರಿಂದ 2020–21ರವರೆಗಿನ ಅವಧಿಯಲ್ಲಿ ನಿಧಿಯ ಸಂಗ್ರಹವು ಸ್ಥಿರವಾಗಿ ಹೆಚ್ಚುತ್ತಾ ₹6,748.10 ಕೋಟಿಯಿಂದ ₹17,320.30 ಕೋಟಿಗೆ ಏರಿಕೆಯಾಗಿದೆ.

ಈ ಅವಧಿಯಲ್ಲಿ ಕಾರ್ಯಗತ ಮಾಡಿದ ಕಾಮಗಾರಿಗಳಿಗೆ ಸರಿಹೊಂದಿಸಲಾದ ಹಣವು ₹352.88 ಕೋಟಿಯಿಂದ ₹1,679.74 ಕೋಟಿ ವ್ಯಾಪ್ತಿಯಲ್ಲಿತ್ತು. ಹಣ ಲಭ್ಯವಿದ್ದರೂ, ಕಂಡಿಕೆ 4.2ರಲ್ಲಿ ಚರ್ಚಿಸಿರುವಂತೆ, ಲೆಕ್ಕಪರಿಶೋಧನಾ ಅವಧಿಯಲ್ಲಿ ಶೇಕಡಾ 28ರಷ್ಟು (84,574ರಲ್ಲಿ 24,014) ಕಾಮಗಾರಿಗಳನ್ನು ಮಾತ್ರ ಪೂರ್ಣಗೊಳಿಸಲಾಗಿದೆ.

ಹಣಕಾಸು ನಿರ್ವಹಣೆಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ಅವಲೋಕನಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

### *2.1.1 ಕೆಆರ್ಐಡಿಎಲ್ ಸ್ವೀಕರಿಸಿದ ಕ್ರೋಢೀಕರಣ ಮುಂಗಡಗಳನ್ನು ಇತ್ಯರ್ಥಗೊಳಿಸದಿರುವುದು – ₹389.90 ಕೋಟಿ*

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ 200ರ ಪ್ರಕಾರ, ಗುತ್ತಿಗೆ ಒಪ್ಪಂದದ ಮೌಲ್ಯದ ಶೇಕಡಾ ಐದಕ್ಕಿಂತ ಹೆಚ್ಚಿಲ್ಲದ ಕ್ರೋಢೀಕರಣ ಮುಂಗಡವನ್ನು ಗುತ್ತಿಗೆದಾರನಿಗೆ ಬ್ಯಾಂಕ್ ಗ್ಯಾರಂಟಿ ಸಲ್ಲಿಕೆಯ ಷರತ್ತಿಗೆ ಒಳಪಟ್ಟು ಮತ್ತು ಕಾರ್ಯಾದೇಶ ನೀಡಿದ ಹದಿನೈದು ದಿನಗಳ ಒಳಗೆ ಬಿಡುಗಡೆ

ಮಾಡಬೇಕು. ಕಾಮಗಾರಿಯು ಶೇಕಡಾ 15 ಅಥವಾ ಅದಕ್ಕಿಂತ ಹೆಚ್ಚು ಪ್ರಗತಿಯಾದ ನಂತರ ಚಾಲ್ತಿ ಕಾಮಗಾರಿ ಬಿಲ್‌ಗಳಿಂದ ಕ್ರೋಢೀಕರಣ ಮುಂಗಡವನ್ನು ಸರಿಹೊಂದಿಸಬೇಕು.

2020–21ರ ಅಂತ್ಯಕ್ಕೆ ಕೆಆರ್‌ಐಡಿಎಲ್‌ನ ಇತ್ಯರ್ಥವಾಗದ ಕ್ರೋಢೀಕರಣ ಮುಂಗಡಗಳ ಮೊತ್ತ ₹389.90 ಕೋಟಿಗಳಾಗಿದ್ದವು ಎಂಬುದನ್ನು ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳಿಂದ ಗಮನಿಸಲಾಯಿತು. ಕ್ರೋಢೀಕರಣ ಮುಂಗಡವನ್ನು ಇತ್ಯರ್ಥಪಡಿಸದಿರುವುದು ಕೆಆರ್‌ಐಡಿಎಲ್ ಅಂತಿಮ ಚಾಲ್ತಿ ಕಾಮಗಾರಿ ಬಿಲ್‌ಗಳನ್ನು ಇನ್ನೂ ಇತ್ಯರ್ಥಪಡಿಸಿಲ್ಲದಿರುವುದನ್ನು ಸೂಚಿಸುತ್ತದೆ. ಕಾಮಗಾರಿ ವಹಿಸುವ ಸಂಸ್ಥೆಗಳು ಮುಂಗಡವಾಗಿಯೇ ಹಣವನ್ನು ಕೆಆರ್‌ಐಡಿಎಲ್‌ಗೆ ಬಿಡುಗಡೆ ಮಾಡುತ್ತಿರುವುದರಿಂದ ಕ್ರೋಢೀಕರಣ ಮುಂಗಡವನ್ನು ಸ್ವೀಕರಿಸುವ ಅಭ್ಯಾಸವು ಸಮರ್ಥನೀಯವಾಗಿಲ್ಲ. ಇದು ನಿಧಿಗಳ ನಿಷ್ಕ್ರಿಯತೆಗೆ ಕಾರಣವಾಗಿದೆ ಮತ್ತು ಕಂಪನಿಯ ಲೆಕ್ಕಪತ್ರಗಳ ಸಂಪೂರ್ಣತೆಯ ಮೇಲೆ ಪರಿಣಾಮ ಬೀರುತ್ತದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯು ಗಮನಿಸಿದ ಅಂಶವನ್ನು ಒಪ್ಪಿಕೊಂಡು 2021–22ನೇ ಸಾಲಿನಲ್ಲಿ ಕೆಆರ್‌ಐಡಿಎಲ್ ಬಾಕಿ ಉಳಿದಿರುವ ಕ್ರೋಢೀಕರಣ ಮುಂಗಡವನ್ನು ಶೇಕಡಾ 50ರಷ್ಟಕ್ಕೆ ಇಳಿಸಲು ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಿತು. ಇದು ಕ್ರೋಢೀಕರಣ ಮುಂಗಡವನ್ನು ಇತ್ಯರ್ಥಪಡಿಸುವಲ್ಲಿ ಸಾಕಷ್ಟು ಪ್ರಯತ್ನಗಳ ಕೊರತೆಯನ್ನು ಪುನರುಚ್ಚರಿಸುತ್ತದೆ.

### *2.1.2 ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಪಡೆದ ನಿಧಿಗಳಿಗೆ ವರ್ಕ್ ಕೋಡ್ ನೀಡದಿರುವುದು – ₹303.76 ಕೋಟಿ*

2016–17 ರಿಂದ 2020–21ರ ಅವಧಿಗೆ 24 ಪರೀಕ್ಷಾ–ತನಿಖೆ ನಡೆಸಲಾದ ಉಪ–ವಿಭಾಗಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳ ಲೆಕ್ಕಪರಿಶೋಧನಾ ಪರಿಶೀಲನೆಯು ವರ್ಕ್ ಕೋಡ್[2] ನೀಡದೆಯೇ ಉಪ–ವಿಭಾಗಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿತ್ತು ಎಂಬುದನ್ನು ತಿಳಿಯಪಡಿಸಿತು. 2020–21ರ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳಿಂದ ಕಂಡುಬಂದಂತೆ, ಕಂಪನಿಯು 2017–18, 2018–19, 2019–20 ಮತ್ತು 2020–21ರ ಅವಧಿಯಲ್ಲಿ ಕಾಮಗಾರಿ ವಹಿಸಿಕೊಡುವ ವಿವಿಧ ಇಲಾಖೆಗಳಿಂದ ಪಡೆದ ಹಣಕ್ಕೆ ಪ್ರತಿಯಾಗಿ ಅನುಕ್ರಮವಾಗಿ ₹24.79 ಕೋಟಿ, ₹35.80 ಕೋಟಿ, ₹143.41 ಕೋಟಿ ಮತ್ತು ₹99.76 ಕೋಟಿ ಹೀಗೆ ಒಟ್ಟಾರೆ ₹303.76 ಕೋಟಿ ಮೊತ್ತದ ಕಾಮಗಾರಿಗಳಿಗೆ ವರ್ಕ್ ಕೋಡ್‌ಗಳನ್ನು ಹಂಚಿಕೆ ಮಾಡಿರಲಿಲ್ಲ. ಪ್ರತಿ ಕಾಮಗಾರಿಗೆ ವರ್ಕ್ ಕೋಡ್ ಹಂಚಿಕೆ ಮಾಡುವುದು ಕಾಮಗಾರಿಯ ಆರಂಭ, ಹಣ ಬಿಡುಗಡೆ ಮತ್ತು ಉಪ–ವಿಭಾಗಗಳ ಮೇಲ್ವಿಚಾರಣೆಗೆ ಪೂರ್ವಾಪೇಕ್ಷಿತವಾಗಿದೆ. ವರ್ಕ್ ಕೋಡ್ ಹಂಚಿಕೆ ಮಾಡದಿರುವುದು ಕಾಮಗಾರಿ ವಹಿಸಿಕೊಡುವ ಇಲಾಖೆಗಳ ನಿಧಿಯನ್ನು ಸರ್ಕಾರದ ಲೆಕ್ಕಗಳ ಹೊರಗೆ ನಿಷ್ಕ್ರಿಯವಾಗಿ ಇಡುವಲ್ಲಿ ಪರಿಣಮಿಸಿತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯು ಗಮನಿಸಿದ ಅಂಶವನ್ನು ಒಪ್ಪಿಕೊಂಡು ಲಭ್ಯವಿರುವ ಮಾಹಿತಿ/ವಿವರಗಳ ಅನುಸಾರ ವರ್ಕ್ ಕೋಡ್ ಹಂಚಿಕೆ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಉತ್ತರಿಸಿತು. ₹303.76 ಕೋಟಿ ಮೌಲ್ಯದ ಕಾಮಗಾರಿಗಳಿಗೆ ವರ್ಕ್ ಕೋಡ್‌ಗಳನ್ನು ಇನ್ನೂ ಹಂಚಿಕೆ ಮಾಡಬೇಕಾಗಿರುವುದು ಕಂಪನಿಯಲ್ಲಿ ಲೆಕ್ಕಪತ್ರಗಳ ಮೇಲಿನ ನಿಯಂತ್ರಣಗಳ ಅನುಪಸ್ಥಿತಿಯನ್ನು ಸೂಚಿಸುತ್ತದೆ.

---

[2] ಹಣದ ಬಿಡುಗಡೆ, ವಹಿಸಿಕೊಡುವ ಇಲಾಖೆಗಳಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಖಚಿತಪಡಿಸಿಕೊಂಡ ನಂತರ ಉಪ–ವಿಭಾಗಗಳಿಂದ ಫಾರ್ಮ್–9ರಲ್ಲಿ ಹಣದ ಕೋರಿಕೆಯ ಆಧಾರದ ಮೇಲೆ ಪ್ರತಿ ನಿರ್ದಿಷ್ಟ ಕಾಮಗಾರಿಗೆ ಕೇಂದ್ರ ಕಛೇರಿಯಿಂದ ನೀಡಲಾಗುವ ವಿಶಿಷ್ಟ ಸರಣಿ ಸಂಖ್ಯೆ.

### *2.1.3 ಅಮಾನತ್ತು ಖಾತೆಗಳಲ್ಲಿ ಇರಿಸಲಾದ ನಿಧಿಗಳು – ₹66.92 ಕೋಟಿ*

ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ, ಕಂಪನಿಯು ಕೆಲವು ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಅಂತಿಮ ಲೆಕ್ಕಶೀರ್ಷಿಕೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಅವುಗಳನ್ನು 'ಅಮಾನತ್ತು ಖಾತೆ' ಅಡಿಯಲ್ಲಿ ಇರಿಸಿದೆ. 2016–17 ರಿಂದ 2020–21ರವರೆಗೆ 'ಅಮಾನತ್ತು ಖಾತೆ' ಎಂದು ವರ್ಗೀಕರಿಸಲಾದ ನಿಧಿಗಳು ಏರು ಪ್ರವೃತ್ತಿಯನ್ನು ತೋರಿಸಿದ್ದು, ₹3.95 ಕೋಟಿಯಿಂದ ₹66.92 ಕೋಟಿಗೆ ಏರಿದೆ.

ಅಮಾನತ್ತು ಖಾತೆಗಳಲ್ಲಿ ಇರುವ ಮೊತ್ತವು ಜಿಲ್ಲಾ ಖಜಾನೆಗಳಿಂದ ಪಡೆದ ನಿಧಿಗಳು, ವಿವಿಧ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಮತ್ತು ಕೆಆರ್‌ಐಡಿಎಲ್ ಉಪ–ವಿಭಾಗಗಳಿಂದ ಹಿಂತಿರುಗಿಸಲಾದ ಹಣವನ್ನು ಒಳಗೊಂಡಿರುತ್ತದೆ. ಧೀರ್ಘ ಕಾಲದ ಅವಧಿಗೆ ಅಮಾನತ್ತು ಸ್ವೀಕೃತಿಗಳನ್ನು ಇತ್ಯರ್ಥಪಡಿಸದೇ ಇರುವುದು ಕೆಆರ್‌ಐಡಿಎಲ್‌ನಿಂದ ಧೃಡ ಪ್ರಯತ್ನಗಳ ಕೊರತೆಯನ್ನು ಸೂಚಿಸುತ್ತದೆ ಮತ್ತು ಇದು ಕಂಪನಿಯ ವಾರ್ಷಿಕ ಲೆಕ್ಕಪತ್ರಗಳ ಸಂಪೂರ್ಣತೆಯ ಮೇಲೆ ಪರಿಣಾಮ ಬೀರುತ್ತದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯು ಗಮನಿಸಿದ ಅಂಶವನ್ನು ಒಪ್ಪಿಕೊಂಡು ಕೆಆರ್‌ಐಡಿಎಲ್‌ನ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಬಲಪಡಿಸಲಾಗುವುದು ಮತ್ತು ಅಮಾನತ್ತು ಖಾತೆಯನ್ನು ಸಮನ್ವಯಗೊಳಿಸಲಾಗುವುದು ಎಂದು ಹೇಳಿತು.

### *2.1.4 ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಹಣ ಬಿಡುಗಡೆಗೆ ಮುನ್ನವೇ ಕಾಮಗಾರಿಗಳನ್ನು ಆರಂಭಿಸಿರುವುದು – ₹25.35 ಕೋಟಿ*

11 ಉಪವಿಭಾಗಗಳಲ್ಲಿ[3] ₹25.35 ಕೋಟಿ ಅಂದಾಜು ವೆಚ್ಚದ 23 ಕಾಮಗಾರಿಗಳನ್ನು ವಹಿಸಿಕೊಡುವ ಇಲಾಖೆಗಳಿಂದ (01 ರಿಂದ 20 ತಿಂಗಳವರೆಗೆ) ಹಣವನ್ನು ಬಿಡುಗಡೆ ಮಾಡುವ ಮೊದಲೇ ಪ್ರಾರಂಭಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹಣದ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳದೆ ಕಾಮಗಾರಿಗಳನ್ನು ಆರಂಭಿಸಿರುವುದು ಇತರೆ ಕಾಮಗಾರಿಗಳಿಗೆ ಮೀಸಲಿಟ್ಟ ಹಣವನ್ನು ಬಳಸಿದಂತಾಯಿತು.

### *2.1.5 ಕಾಮಗಾರಿ ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡಿದ ಹಣಕ್ಕಿಂತ ಹೆಚ್ಚಿನ ಖರ್ಚು– ₹54.39 ಕೋಟಿ*

ಪರೀಕ್ಷಾ–ತನಿಖೆ ಮಾಡಲಾದ 1,379 ಕಾಮಗಾರಿಗಳ ಪೈಕಿ, ₹586.05 ಕೋಟಿ ಅಂದಾಜು ವೆಚ್ಚದ 439 ಕಾಮಗಾರಿಗಳಿಗೆ (ಶೇಕಡ 32) ಸಂಬಂಧಿಸಿದಂತೆ ಕೆಆರ್‌ಐಡಿಎಲ್ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಕೇವಲ ₹515.16 ಕೋಟಿ ಮಾತ್ರ ಸ್ವೀಕರಿಸಿರುವುದನ್ನು ಗಮನಿಸಲಾಗಿದೆ. ಆದಾಗ್ಯೂ, ಉಪ–ವಿಭಾಗಗಳು ₹569.54 ಕೋಟಿ ವೆಚ್ಚ ಮಾಡಿದ್ದು, ಸ್ವೀಕೃತ ಹಣಕ್ಕಿಂತ ₹54.39 ಕೋಟಿ (ಶೇಕಡ 11) ಹೆಚ್ಚು ವ್ಯಯಿಸಿದಂತಾಗಿದೆ. ಈ ಹೆಚ್ಚುವರಿ ವೆಚ್ಚಕ್ಕೆ ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ಪರಿಷ್ಕೃತ ಬೇಡಿಕೆಗಳನ್ನು ಸಲ್ಲಿಸಲಾಗಿಲ್ಲ.

---

[3] ಚಿಕ್ಕಬಳ್ಳಾಪುರ, ದಾವಣಗೆರೆ, ಪೂರ್ವ–1 (ಬಿಬಿಎಂಪಿ), ಗದಗ, ಹೂವಿನಹಡಗಲಿ, ಕಲಬುರಗಿ–1, ಕಲಬುರಗಿ–2, ಕೊಪ್ಪಳ (ನೆಲೋಗಿಪುರ), ಮೈಸೂರು, ರಾಮನಗರ ಮತ್ತು ಶಿವಮೊಗ್ಗ.

### *2.1.6 ಅಂದಾಜು ವೆಚ್ಚಕ್ಕಿಂತ ಹೆಚ್ಚಿನ ವೆಚ್ಚ – ₹3.82 ಕೋಟಿ*

ಪರೀಕ್ಷಾ–ತನಿಖೆ ಮಾಡಲಾದ ಆರು ಉಪ–ವಿಭಾಗಗಳಲ್ಲಿ, ₹27.24 ಕೋಟಿ ವೆಚ್ಚದ 15 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಾಡಿದ ವೆಚ್ಚವು ಅಂದಾಜು ವೆಚ್ಚಕ್ಕಿಂತ ₹3.82 ಕೋಟಿ (ಶೇಕಡ 14) ಹೆಚ್ಚಾಗಿದೆ, **ಅನುಬಂಧ–III**ರಲ್ಲಿ ವಿವರಿಸಿದಂತೆ, ಈ ಹೆಚ್ಚಿನ ವೆಚ್ಚಕ್ಕೆ ಕೇಂದ್ರ ಕಛೇರಿಯ ಅನುಮೋದನೆಯನ್ನು ಪಡೆದಿಲ್ಲ ಅಥವಾ ಪರಿಷ್ಕೃತ ಅಂದಾಜುಗಳನ್ನು ತಯಾರಿಸಲಾಗಿಲ್ಲ.

ಮೇಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಲೆಕ್ಕ ಇತ್ಯರ್ಥಕ್ಕಾಗಿ ಕೆಆರ್‌ಐಡಿಎಲ್ ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ಬೇಡಿಕೆ ಸಲ್ಲಿಸಲು ವಿಫಲವಾಗಿದೆ.

ಮೇಲಿನ ಪದ್ಧತಿಯನ್ನು ಕೈಬಿಡಲಾಗಿದೆ ಮತ್ತು ಸಂಬಂಧಿತ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಮುಂಗಡ ಹಣವನ್ನು ಸ್ವೀಕರಿಸಿದ ನಂತರವೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುತ್ತಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು. ಮುಂದುವರೆದು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ತಾಂಡಾ ಅಭಿವೃದ್ಧಿ ನಿಗಮ ಮುಂತಾದ ಕಾಮಗಾರಿ ವಹಿಸುವ ಸಂಸ್ಥೆಗಳು ಅಂದಾಜು ವೆಚ್ಚದ ಶೇಕಡ 80ರಷ್ಟು ಹಣವನ್ನು ಮಾತ್ರ ಬಿಡುಗಡೆ ಮಾಡುತ್ತಿದ್ದು, ಹಣದ ನಿರೀಕ್ಷೆಯಲ್ಲಿ ಕೆಆರ್‌ಐಡಿಎಲ್ ಬಾಕಿ ವೆಚ್ಚವನ್ನು ಭರಿಸುತ್ತಿದೆ ಎಂದು ತಿಳಿಸಿತು. ಈ ನ್ಯೂನತೆಗಳನ್ನು ಸರಿಪಡಿಸಲು ಕಂಪನಿಯು ವಿಭಾಗ/ಉಪ–ವಿಭಾಗಗಳ ಮಟ್ಟದಲ್ಲಿ ಮಾರ್ಗಪಲ್ಲಟ/ಹೆಚ್ಚುವರಿ ವೆಚ್ಚವನ್ನು ತಪ್ಪಿಸಲು ಪರಿಣಾಮಕಾರಿ ಹಣಕಾಸು ನಿರ್ವಹಣೆಗಾಗಿ ಒಂದು ಪೂರ್ವ–ಲೆಕ್ಕಪರಿಶೋಧನೆ ವ್ಯವಸ್ಥೆಯನ್ನು ಪರಿಚಯಿಸಿದೆ ಎಂದೂ ಸಹ ತಿಳಿಸಿತು. ಆದರೆ, ಉಪ–ವಿಭಾಗಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ವ್ಯತ್ಯಾಸದ ಹಣದ ಅಗತ್ಯತೆ ಇದೆ ಎಂಬುದು ನೈಜ ಸಂಗತಿಯಾಗಿದೆ.

## 2.2 ರಾಯಧನ ವಸೂಲಾತಿ ಆಗದಿರುವುದು/ಕಡಿಮೆ ವಸೂಲಾತಿ ಆಗಿರುವುದು – ₹4.81 ಕೋಟಿ

ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಆದೇಶದಂತೆ, ಕಾಮಗಾರಿಗಳ ಅನುಷ್ಠಾನದಲ್ಲಿ ಬಳಸುವ ಮರಳು, ಜೆಲ್ಲಿ, ಕಲ್ಲು, ಮಣ್ಣು ಮುಂತಾದ ವಸ್ತುಗಳ ಮೇಲೆ ಕಾಲಕಾಲಕ್ಕೆ ನಿಗದಿಪಡಿಸಿದ ದರಗಳಲ್ಲಿ ರಾಯಧನ ಪಾವತಿಯಾಗಬೇಕು. ರಾಯಧನವನ್ನು ಮೊದಲೇ ಪಾವತಿಸಿ ಮಾನ್ಯತೆ ಹೊಂದಿದ ಖನಿಜ ರವಾನೆ ಪರವಾನಗಿ ಪತ್ರ ಲಗತ್ತಿಸಿದ ಸಂದರ್ಭಗಳಲ್ಲಿ ಇಲಾಖೆಯು ಆ ಸಂಸ್ಥೆಗಳ ಕ್ಲೇಮ/ಹಕ್ಕುಗಳನ್ನು ಅನುಮತಿಸಬೇಕು.

ರಾಯಧನವನ್ನು ಒಳಗೊಂಡಂತೆ ಲೋಕೋಪಯೋಗಿ ಇಲಾಖೆ ದರಪಟ್ಟಿ/ಪಿಆರ್‌ಇಡಿ ದರಪಟ್ಟಿಯಲ್ಲಿ ಒದಗಿಸಲಾದ ಐಟಂ ದರದ ಆಧಾರದಲ್ಲಿ ಉಪ–ವಿಭಾಗಗಳು 2016–17ರಿಂದ 2020–21ರ ಅವಧಿಯಲ್ಲಿ ವಿವಿಧ ರಸ್ತೆಗಳು ಮತ್ತು ಕಟ್ಟಡಗಳ ನಿರ್ಮಾಣ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗುಂಪು ನಾಯಕರುಗಳಿಗೆ[4] ಕಾಮಗಾರಿ ಬಿಲ್ಲುಗಳ ಮೂಲಕ ಪಾವತಿಗಳನ್ನು ಮಾಡುವಾಗ ರಾಯಧನವನ್ನು ಕ್ರಮಬದ್ಧವಾಗಿ ಕಡಿತಗೊಳಿಸಬೇಕು ಮತ್ತು ಅಂತಹ ಆದಾಯವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಂಬಂಧಿತ ಸ್ವೀಕೃತಿ ಲೆಕ್ಕಶೀರ್ಷಿಕೆಗೆ ಜಮೆ ಮಾಡಬೇಕು. ಗುಂಪು ನಾಯಕರುಗಳಿಗೆ ಮಾಡಿದ ಪಾವತಿಗಳಿಂದ **ಅನುಬಂಧ–IV**ರಲ್ಲಿ ವಿವರಿಸಿರುವಂತೆ, ₹4.82 ಕೋಟಿ ಮೊತ್ತದ ಅಂತಹ 287 ಕಾಮಗಾರಿಗಳಲ್ಲಿ ರಾಯಧನವನ್ನು ಕಡಿತಗೊಳಿಸಲಾಗಿಲ್ಲ ಎಂಬುದು ತಿಳಿದುಬಂದಿತು.

---

[4] 20 ರಿಂದ 25 ಕೂಲಿಕಾರ್ಮಿಕರ ಗುಂಪಿನಲ್ಲಿ ಓರ್ವನನ್ನು ಗುಂಪಿನ ನಾಯಕ (ಗ್ರೂಪ್ ಲೀಡರ್) ಎನ್ನಲಾಗುತ್ತದೆ.

ಈ ಬಗ್ಗೆ, ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 539/2006ರ (M/s ಕರ್ನಾಟಕ ಕ್ರಷರ್ಸ್ Vs ಕರ್ನಾಟಕ ರಾಜ್ಯ) ಅನುಸಾರ ಕ್ವಾರಿ ಗುತ್ತಿಗೆದಾರರು, ಖಾಸಗಿ ಕ್ವಾರಿ ಮಾಲೀಕರು ಮುಂತಾದ ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಿದ ವಸ್ತುಗಳನ್ನು ಗುತ್ತಿಗೆದಾರರು ಬಳಸಿದಾಗ ರಾಯಧನ ಶುಲ್ಕವನ್ನು ಪಾವತಿಸಲು ಗುತ್ತಿಗೆದಾರರ ಮೇಲೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ ಎಂದು ಉತ್ತರಿಸಲಾಗಿದೆ.

ಕೆಆರ್ಐಡಿಎಲ್‌ನ ಕ್ಲೇಮ್‌ಗಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಾಯಧನವನ್ನು ಕಡಿತಗೊಳಿಸಿರುವುದರಿಂದ ರಾಜ್ಯ ಸರ್ಕಾರದ ಈ ಉತ್ತರವು ಸಮರ್ಥನೀಯವಾಗಿಲ್ಲ. ಅದೇ ರೀತಿಯಾಗಿ, ಗುಂಪು ನಾಯಕರುಗಳ ಕಾಮಗಾರಿ ಬಿಲ್ಲುಗಳಲ್ಲಿ ಕೆಆರ್ಐಡಿಎಲ್ ರಾಯಧನ ಕಡಿತ ಮಾಡಿರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತು ಪಡಿಸಿದ ಕಾಮಗಾರಿಗಳಲ್ಲಿ ಗುಂಪು ನಾಯಕರುಗಳು ಮಾನ್ಯತೆ ಹೊಂದಿದ ಖನಿಜ ರವಾನೆ ಪರವಾನಗಿ ಪತ್ರ ಲಗತ್ತಿಸಿದ್ದಾರೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳುವಲ್ಲಿ ಕೆಆರ್ಐಡಿಎಲ್ ವಿಫಲವಾಗಿದೆ.

## 2.3 ಯೋಜನಾ ನಿಧಿಗಳ ಮೇಲೆ ಗಳಿಸಿದ ಬಡ್ಡಿಯನ್ನು ಜಮಾ ಮಾಡದೆ ಇರುವುದು – ₹238.89 ಕೋಟಿ

ಹಣಕಾಸು ಇಲಾಖೆಯು ದಿನಾಂಕ 01.03.2018ರ ಸುತ್ತೋಲೆಯಲ್ಲಿ ಸರ್ಕಾರಿ ನಿಧಿಯ ಮೇಲೆ ಗಳಿಸಿದ ಬಡ್ಡಿಯನ್ನು ಪ್ರತಿ ಹಣಕಾಸು ವರ್ಷದ ಅಂತ್ಯದಲ್ಲಿ ಬಡ್ಡಿ ಸ್ವೀಕೃತಿ ಲೆಕ್ಕಶೀರ್ಷಿಕೆ '0049'ಗೆ ಜಮೆ ಮಾಡಲು ನಿರ್ದೇಶಿಸಿದೆ. ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಕಾಮಗಾರಿ ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡುವ ಸರ್ಕಾರದ ನಿಧಿಯ ಬಳಕೆಯಾಗದ ಹಣವನ್ನು ಕೆಆರ್ಐಡಿಎಲ್ ಫ್ಲೆಕ್ಸಿ ಠೇವಣಿಗಳಲ್ಲಿ ಹೂಡಿಕೆ ಮಾಡುತ್ತಿದೆ. 2018–21ರ ಅವಧಿಯಲ್ಲಿ ಅಂತಹ ಫ್ಲೆಕ್ಸಿ ಠೇವಣಿಗಳ ಮೇಲೆ ಗಳಿಸಿದ ₹238.89 ಕೋಟಿ ಬಡ್ಡಿಯನ್ನು ಸರ್ಕಾರಿ ಖಾತೆಗೆ ಜಮೆ ಮಾಡಲಾಗಿಲ್ಲ.

***ಶಿಫಾರಸು 1:*** *ರಾಜ್ಯ ಸರ್ಕಾರವು ಕಾಮಗಾರಿ ವಹಿಸುವ ಸಂಸ್ಥೆಗಳು ಮತ್ತು ಕೆಆರ್ಐಡಿಎಲ್ ನಡುವೆ ನಿಧಿಗಳ ನಿಯತಕಾಲಿಕ ಸಮನ್ವಯವನ್ನು ಖಚಿತಪಡಿಸಿಕೊಳ್ಳಬೇಕು. ಕಾಮಗಾರಿಗಳ ಆರಂಭಿಸುವಲ್ಲಿನ ವಿಳಂಬಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.*

# ಅಧ್ಯಾಯ III
# ಕಾಮಗಾರಿಗಳ ವಹಿಸುವಿಕೆ, ಅಂದಾಜು ಪಟ್ಟಿಗಳು ಮತ್ತು ಮಂಜೂರಾತಿಗಳು



4(ಜಿ) ವಿನಾಯಿತಿ ಅಧಿಸೂಚನೆಗೆ ವಿರುದ್ಧವಾಗಿ, ಕಾಮಗಾರಿ ವಹಿಸುವ ಸಂಸ್ಥೆಗಳು ₹2.00 ಕೋಟಿಗಿಂತ ಹೆಚ್ಚಿನ ವೆಚ್ಚದ ಕಾಮಗಾರಿಗಳನ್ನು ವಹಿಸಿಕೊಟ್ಟಿವೆ ಮತ್ತು ಗುತ್ತಿಗೆ ಮಾನದಂಡಗಳಿಗೆ ಸರಿಕಾಣುವಂತೆ ಮತ್ತು ಆ ಮೂಲಕ ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸಲು ಅನುವಾಗುವಂತೆ ಕಾಮಗಾರಿಗಳನ್ನು ವಿಭಜಿಸಲಾಗಿದೆ. ಕಾರ್ಯಕ್ರಮ ಆಯೋಜನೆ, ತಡೆರಹಿತ ವಿದ್ಯುತ್ ಸರಬರಾಜು (ಯುಪಿಎಸ್), ಭಾರಿ ವಿದ್ಯುತ್ ಪ್ರವಹಣ ಮಾರ್ಗಗಳ ಬದಲಾವಣೆ ಮುಂತಾದ ಅನರ್ಹ ಕಾಮಗಾರಿಗಳನ್ನು ವಹಿಸಿಕೊಟ್ಟಿರುವುದು/ಕಾರ್ಯಗತಗೊಳಿಸಿರುವುದನ್ನು ಸಹ ಗಮನಿಸಲಾಗಿದೆ.

ಸರಿಯಾದ ಸಮೀಕ್ಷೆಯನ್ನು ನಡೆಸದೆಯೇ ಅಂದಾಜುಪಟ್ಟಿಗಳನ್ನು ತಯಾರಿಸಿರುವುದು, ದರಪಟ್ಟಿಯ ತಪ್ಪಾದ ಅಳವಡಿಕೆಯಿಂದಾಗಿ ಹೆಚ್ಚುವರಿ ವೆಚ್ಚ ಮುಂತಾದ ಪ್ರಕರಣಗಳೂ ಸಹ ಗಮನಕ್ಕೆ ಬಂದಿವೆ, ಇವುಗಳು ಶಿಸ್ತುಬದ್ಧ ಆರ್ಥಿಕ ವ್ಯವಸ್ಥೆಗೆ ವಿರುದ್ಧವಾಗಿರುವುದಲ್ಲದೆ ಕಾಮಗಾರಿ ವಹಿಸುವ ಸಂಸ್ಥೆಗಳ ಮೇಲೆ ತಪ್ಪಿಸಬಹುದಾದ ಆರ್ಥಿಕ ಹೊರೆಗೆ ಕಾರಣವಾಗಿದೆ.

₹1.00 ಕೋಟಿಗಿಂತ ಕಡಿಮೆ ವೆಚ್ಚದ ಅಂದಾಜುಪಟ್ಟಿಗಳನ್ನು ಕೇಂದ್ರ ಕಛೇರಿಗೆ ಬದಲಾಗಿ ಇಇ/ಎಸ್‌ಇಗಳ ಮಟ್ಟದಲ್ಲಿ ಪರಿಶೀಲಿಸಲಾಗಿದ್ದ ಕಾರಣ ಅಂದಾಜುಪಟ್ಟಿಗಳ ತಯಾರಿಕೆ ಮತ್ತು ಪರಿಶೀಲನೆಯು ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳಿಗೆ ವಿರುದ್ಧವಾಗಿರುವುದು ಕಂಡುಬಂದಿತು. ಅಂದಾಜುಪಟ್ಟಿಗಳನ್ನು ದರಪಟ್ಟಿಯ ದರಗಳಿಗೆ ಹೆಚ್ಚುವರಿಯಾಗಿ ಕಾರ್ಮಿಕ ಉಪಕರ ಮತ್ತು ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಸೇರಿಸಿ (ಈಗಾಗಲೇ ಈ ಬಾಬ್ತು ಸೇರಿಸಿದ್ದಾಗ್ಯೂ) ತಯಾರಿಸಿದ ಪರಿಣಾಮವಾಗಿ ₹1.90 ಕೋಟಿ ಹೆಚ್ಚುವರಿ ವೆಚ್ಚದಲ್ಲಿ ಮತ್ತು ಗುಂಪು ನಾಯಕರುಗಳಿಗೆ ಲಾಭ ನೀಡುವಲ್ಲಿ ಪರಿಣಮಿಸಿತು. ಆಡಳಿತಾತ್ಮಕ ಅನುಮೋದನೆ ಇಲ್ಲದೆಯೇ/ನೀಡುವ ಮೊದಲೇ ಕಾಮಗಾರಿಗಳನ್ನು ನಿರ್ವಹಿಸಿರುವುದು ಮತ್ತು ತಾಂತ್ರಿಕ ಮಂಜೂರಾತಿ ನೀಡುವಲ್ಲಿ ವಿಳಂಬದ ಅಭ್ಯಾಸಗಳನ್ನೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಸಂಬಂಧಿತ ಆಡಳಿತಾತ್ಮಕ ಇಲಾಖೆಗಳು ಆಯವ್ಯಯ ಅನುದಾನ ವ್ಯಪಗತಗೊಳ್ಳುವುದನ್ನು ತಪ್ಪಿಸಲು ಕೆಆರ್‌ಐಡಿಎಲ್‌ಗೆ ಹಣವನ್ನು ಬಿಡುಗಡೆ ಮಾಡಿದ್ದವು.

ನಿಗದಿತ ಕಾರ್ಯವಿಧಾನಗಳ ಅನುಸರಣೆಯು ಕನಿಷ್ಠತಮವಾಗಿದ್ದ ಕಾರಣ ಅಂದಾಜುಪಟ್ಟಿಗಳ ತಯಾರಿಕೆಯು ದೋಷಪೂರಿತವಾಗಿತ್ತು ಮತ್ತು ಗುಂಪು ನಾಯಕರುಗಳಿಗೆ ಅನುಚಿತ ಲಾಭ ನೀಡುವಲ್ಲಿ ಪರಿಣಮಿಸಿತು. ಅಗತ್ಯವಿದ್ದ ಆಡಳಿತಾತ್ಮಕ ಅನುಮೋದನೆಗಳು ಮತ್ತು ತಾಂತ್ರಿಕ ಮಂಜೂರಾತಿಗಳಿಲ್ಲದೆಯೇ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದು ಬಜೆಟ್ ಅನುದಾನಗಳು ವ್ಯಪಗತಗೊಳ್ಳುವುದನ್ನು ತಪ್ಪಿಸಲು ಹಣ ಸೆಳೆದಿರುವುದನ್ನು ಸೂಚಿಸುತ್ತದೆ.

ಕೆಆರ್‌ಐಡಿಎಲ್ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಅಥವಾ ಖಾಸಗಿ ಉದ್ದಿಮೆಗಳು, ಸಂಸ್ಥೆಗಳು ಮುಂತಾದವು ಸೇರಿದಂತೆ ಸರ್ಕಾರವು ವಹಿಸಿಕೊಡುವ ಎಲ್ಲಾ ರೀತಿಯ ಗ್ರಾಮೀಣ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತದೆ. ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ,

ಸಂಪೂರ್ಣ ಸಮೀಕ್ಷಿಸಿ ಯೋಜನೆಗಳು/ಅಂದಾಜುಪಟ್ಟಿಗಳನ್ನು ಸಿದ್ಧಪಡಿಸಿ ಮತ್ತು ಆಡಳಿತಾತ್ಮಕವಾಗಿ ಮತ್ತು ತಾಂತ್ರಿಕವಾಗಿ ಮಂಜೂರು ಮಾಡಲಾದ ಕಾಮಗಾರಿಗಳನ್ನು ನಿರ್ವಹಿಸುವುದು ಮಾತ್ರ ಕೆಆರ್ಐಡಿಎಲ್‌ನ ಜವಾಬ್ದಾರಿಯಾಗಿರುತ್ತದೆ. ಆದರೆ, ರಾಜ್ಯ ಸರ್ಕಾರದ ಇತರ ವಿವಿಧ ಇಲಾಖೆಗಳು ವಹಿಸಿಕೊಡುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಕೆಆರ್ಐಡಿಎಲ್ ಯೋಜನೆಗಳು ಮತ್ತು ಅಂದಾಜುಪಟ್ಟಿಗಳನ್ನು ಸಿದ್ಧಪಡಿಸುತ್ತದೆ.

ಸಂಸ್ಥೆಗಳಿಂದ ಕಾಮಗಾರಿ ವಹಿಸಿಕೊಡುವ ವಿಧಾನ, ಆಡಳಿತಾತ್ಮಕ ಅನುಮೋದನೆಗಳು, ತಾಂತ್ರಿಕ ಮಂಜೂರಾತಿಗಳು, ಹಣದ ಬಿಡುಗಡೆ, ಕಾಮಗಾರಿಯ ಚಟುವಟಿಕೆ ನಕ್ಷೆ ತಯಾರಿ, ಗುಂಪಿನ ನಾಯಕರುಗಳ ನೇಮಕ, ಕಾಮಗಾರಿ ಅನುಷ್ಠಾನ ಮತ್ತು ಲೆಕ್ಕಪತ್ರ ಇತ್ಯರ್ಥಪಡಿಸುವಿಕೆ ಮುಂತಾದ ಪ್ರಕ್ರಿಯೆಗಳ ಕಾರ್ಯಹರಿವನ್ನು ಕೆಳಗಿನ **ನಕ್ಷೆ 3.1**ರಲ್ಲಿ ಚಿತ್ರಿಸಲಾಗಿದೆ.

**ನಕ್ಷೆ 3.1– ಕಾಮಗಾರಿ ವಹಿಸುವಿಕೆ ಪ್ರಕ್ರಿಯೆಯ ಕಾರ್ಯಹರಿವು**




ಆಧಾರ: ಕೆಆರ್ಐಡಿಎಲ್ ಒದಗಿಸಿದ ಮಾಹಿತಿ

## 3.1 ಕೆಆರ್ಐಡಿಎಲ್‌ನ ಯೋಜನೆ ನಿರ್ವಹಣೆ ವ್ಯವಸ್ಥೆ (ಭೂಸಿರಿ)

ಕೆಆರ್ಐಡಿಎಲ್ ತನ್ನ ಕಾರ್ಯಚಟುವಟಿಕೆಗಳನ್ನು 'ಭೂಸಿರಿ' ಹೆಸರಿನ ಯೋಜನೆ ನಿರ್ವಹಣೆ ಸಾಫ್ಟ್‌ವೇರ್ (ಪಿಎಂಎಸ್) ಮೂಲಕ ಆಡಳಿತಾತ್ಮಕ ಅನುಮೋದನೆ/ತಾಂತ್ರಿಕ ಮಂಜೂರಾತಿಯಿಂದ ಅಂತಿಮ ಬಿಲ್‌ಗಳ ಇತ್ಯರ್ಥದವರೆಗಿನ ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳ ವಿವರಗಳನ್ನು ದಾಖಲಿಸಿ ಮೇಲ್ವಿಚಾರಣೆ ಮಾಡುತ್ತದೆ.

'ಭೂಸಿರಿ' ತಂತ್ರಾಂಶದ ಪರಿಶೀಲನೆಯಿಂದ ವಹಿಸಿಕೊಟ್ಟ ದಿನಾಂಕ, ಅಂದಾಜುಪಟ್ಟಿಗಳನ್ನು ಪರಿಶೀಲಿಸುವ ಪ್ರಾಧಿಕಾರದ ವಿವರಗಳು, ಕಾಮಗಾರಿ ಪ್ರಾರಂಭದ ನೈಜ ದಿನಾಂಕ, ಅಗತ್ಯವಿರುವ ಕೂಲಿಯಾಳುಗಳು /ಯಂತ್ರೋಪಕರಣಗಳು ಮತ್ತು ಸಾಮಾಗ್ರಿ; ಗುಣಮಟ್ಟ ನಿಯಂತ್ರಣ/ಮೂರನೇ ವ್ಯಕ್ತಿ ತಪಾಸಣಾ ವರದಿಗಳೊಂದಿಗೆ ಹಂತವಾರು ಕಾಮಗಾರಿ ಪ್ರಗತಿಯ ವಿವರಗಳು, ಭರಿಸಲಾದ ಒಟ್ಟು ವೆಚ್ಚ ಮತ್ತು ಮುಕ್ತಾಯದ ದಿನಾಂಕ ಮುಂತಾದ ವಿವರಗಳನ್ನು ದಾಖಲಿಸಲು ಅವಕಾಶ ಒದಗಿಸಿರಲಿಲ್ಲ ಎಂಬುದು ತಿಳಿದುಬಂದಿತು. ಇದಲ್ಲದೆ, ಪಿಎಂಎಸ್‌ನಲ್ಲಿ ದಾಖಲಿಸಲಾದ ಆಡಳಿತಾತ್ಮಕ ಅನುಮೋದನೆಯ ದಿನಾಂಕ, ತಾಂತ್ರಿಕ ಮಂಜೂರಾತಿ ದಿನಾಂಕಗಳ ದತ್ತಾಂಶವು ಭೌತಿಕ ದಾಖಲೆಗಳಿಗಿಂತ ಭಿನ್ನವಾಗಿದ್ದುದರಿಂದ ತಂತ್ರಾಂಶವು ವಿಶ್ವಾಸಾರ್ಹವಾಗಿರಲಿಲ್ಲ. ಮಾಹಿತಿ ತಂತ್ರಜ್ಞಾನ ತಂತ್ರಾಂಶವು, ದತ್ತಾಂಶದ ಸಮಗ್ರತೆಯನ್ನು ಕಾಪಾಡಲು ವಿವಿಧ ಹಂತಗಳ ನಿಯಂತ್ರಣಗಳನ್ನು ಹೊಂದಿರಲಿಲ್ಲ ಮತ್ತು ಆಡಳಿತ ಮಂಡಳಿಯು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುವಾಗುವಂತೆ ಸೂಕ್ಷ್ಮ ಮಾಹಿತಿ ಒದಗಿಸುವಲ್ಲಿ ವಿಫಲವಾಗಿತ್ತು. ಅಗತ್ಯ

ದತ್ತಾಂಶಗಳನ್ನು ದಾಖಲಿಸದ ಕಾರಣ, ಪ್ರತಿ ಕಾಮಗಾರಿಯಲ್ಲಿನ ಉಳಿತಾಯದ ಅಂಶವನ್ನು ಅರಿಯಲು ಪಿಎಂಎಸ್‌ನಲ್ಲಿ ಸಾಧ್ಯವಾಗದ ಕಾರಣ ತಂತ್ರಾಂಶವು ಅಪೂರ್ಣವಾಗಿದೆ.

ಕಾಮಗಾರಿಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಲು ಆಡಳಿತ ಮಂಡಳಿಗೆ ಒಂದು ಸಾಧನವಾಗಿ ಕಾರ್ಯನಿರ್ವಹಿಸುವ ಗುರಿಯನ್ನು ಹೊಂದಿದ್ದರೂ, ಪಿಎಂಎಸ್ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸ್ಥೂಲವಾದ ಮತ್ತು ವಿಶ್ವಾಸಾರ್ಹ ದತ್ತಾಂಶಗಳನ್ನು ಒದಗಿಸಲು ವಿಫಲವಾಗಿದೆ.

ಕಾಮಗಾರಿಗಳ ವಹಿಸುವಿಕೆ, ಅಂದಾಜುಪಟ್ಟಿಗಳ ತಯಾರಿಕೆ ಮತ್ತು ತಾಂತ್ರಿಕ ಮಂಜೂರಾತಿಗಳಿಗೆ ಸಂಬಂಧಿಸಿದ ವ್ಯವಸ್ಥೆಯಲ್ಲಿನ ಲೋಪಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 3.2 ಕಾಮಗಾರಿಗಳ ವಹಿಸುವಿಕೆ

ಕರ್ನಾಟಕ ಸರ್ಕಾರವು ಸರಕು ಮತ್ತು ಸೇವೆಗಳ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯನ್ನು ಖಾತ್ರಿಪಡಿಸುವ ಉದ್ದೇಶದಿಂದ ಖರೀದಿ ಸಂಸ್ಥೆಗಳಿಂದ ಗುತ್ತಿಗೆ ಅನುಷ್ಠಾನ ನಿರ್ವಹಣೆ ಮತ್ತು ಸಾರ್ವಜನಿಕ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಸೇರಿಸಿದಂತೆ ಟೆಂಡರ್‌ಗಳ ಆಹ್ವಾನ, ಪ್ರಕ್ರಿಯೆ ಮತ್ತು ಒಪ್ಪಿಕೊಳ್ಳುವಿಕೆ ಪ್ರಕ್ರಿಯೆ ಸರಳೀಕರಿಸುವ ಉದ್ದೇಶದಿಂದ ಕೆಟಿಪಿಪಿ ಕಾಯ್ದೆ 1999 ಅನ್ನು ಪರಿಚಯಿಸಿತು. ಕೆಟಿಪಿಪಿ ಕಾಯ್ದೆ 1999ರ ಸೆಕ್ಷನ್ 4, ಸರಕು ಮತ್ತು ಸೇವೆಗಳ ಸಂಗ್ರಹಣೆಗಾಗಿನ ಟೆಂಡರ್ ಪ್ರಕ್ರಿಯೆಗೆ ಕೆಲವು ವಿನಾಯಿತಿಗಳನ್ನು ನೀಡುತ್ತದೆ.

ಕೆಟಿಪಿಪಿ ಕಾಯ್ದೆ 1999ರ ಸೆಕ್ಷನ್ 4(ಜಿ), ಅಧ್ಯಾಯ IIರ (ಸಂಗ್ರಹಣೆಯ ನಿಯಂತ್ರಣ) ನಿಬಂಧನೆಗಳು ಕಾಲಕಾಲಕ್ಕೆ ಸರ್ಕಾರವು ಸೂಚಿಸಬಹುದಾದ ಕೆಲವು ನಿರ್ದಿಷ್ಟ ಸಂಗ್ರಹಣೆಗಳಿಗೆ ಸಂಬಂಧಿಸಿದಂತೆ ಸರಕು ಮತ್ತು ಸೇವೆಗಳ ಸಂಗ್ರಹಣೆಗೆ ಅನ್ವಯಿಸುವುದಿಲ್ಲ ಎಂದು ನಿಗದಿಪಡಿಸುತ್ತದೆ. ಅದರ ಅನುಸಾರವಾಗಿ, ರಾಜ್ಯ ಸರ್ಕಾರವು ಕೆಟಿಪಿಪಿ ಕಾಯ್ದೆ 1999ರ ಸೆಕ್ಷನ್ 4(ಜಿ) ಅಡಿಯಲ್ಲಿ '₹2.00 ಕೋಟಿವರೆಗಿನ ಕಾಮಗಾರಿಗಳನ್ನು ನೇರವಾಗಿ ಕೆಆರ್‌ಐಡಿಎಲ್‌ಗೆ ವಹಿಸಲು' ಸಂಗ್ರಹಣಾ ಸಂಸ್ಥೆಗಳು/ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ವಿನಾಯಿತಿ ನೀಡುವ ಸರ್ಕಾರಿ ಆದೇಶಗಳನ್ನು ವರ್ಷ ವರ್ಷವೂ ಹೊರಡಿಸಿತು. ಏಪ್ರಿಲ್ 2021ರಲ್ಲಿ ಕಾಯ್ದೆಯನ್ನು ತಿದ್ದುಪಡಿ ಮಾಡಿ ಹೊಸ ನಿಬಂಧನೆ 4ಇ(4)[5] ಅನ್ನು ಸೇರಿಸುವ ಮೂಲಕ ಸಂಗ್ರಹಣಾ ಸಂಸ್ಥೆಗಳು/ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ಕೆಆರ್‌ಐಡಿಎಲ್‌ಗೆ ಕಾಮಗಾರಿಗಳನ್ನು ವಹಿಸುವ ಅಧಿಕಾರ ನೀಡಿ ಪ್ರತಿ ವರ್ಷವೂ ವಿನಾಯಿತಿ ಆದೇಶ ನೀಡುವುದನ್ನು ತಪ್ಪಿಸಿತು.

***4(ಜಿ) ವಿನಾಯಿತಿಯ ಅನುಸಾರ ವಹಿಸುವಿಕೆಯ ಮಾನದಂಡ***

4(ಜಿ) ವಿನಾಯಿತಿ ಅಧಿಸೂಚನೆಗಳ (2016–17 ರಿಂದ 2020–21) ಅನುಸಾರ, ಸರ್ಕಾರಿ ಇಲಾಖೆಗಳು/ನಿಗಮಗಳು/ಮಂಡಳಿಗಳು

- ₹2.00 ಕೋಟಿಗಿಂತ ಕಡಿಮೆ ವೆಚ್ಚದ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸಿಕೊಡಬೇಕು
- ಕೆಆರ್‌ಐಡಿಎಲ್‌ಗೆ ವಹಿಸಿಕೊಡುವ ಮೊದಲು ಕಾಮಗಾರಿಗಳನ್ನು ವಿಭಜಿಸಬಾರದು
- ಈ ಕೆಳಗಿನ ಪ್ರಕಾರದ ಕೆಲಸಗಳನ್ನು ಮಾತ್ರ ಒಪ್ಪಿಸಬೇಕು
    - ಎಲ್ಲಾ ರೀತಿಯ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ, ಲೇಔಟ್ ರಚನೆ, ಸಂಬಂಧಿತ ವಿದ್ಯುತ್ ಕಾಮಗಾರಿಗಳು, ಬೀದಿ ದೀಪ ನಿರ್ವಹಣೆ.
    - ಮೂಲಭೂತಸೌಕರ್ಯ ಕಾಮಗಾರಿಗಳು, ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ.
    - ಗ್ರಾಮೀಣ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳು.

[5] *ಕೆಟಿಪಿಪಿ ತಿದ್ದುಪಡಿ* 2021 – *ಏಪ್ರಿಲ್* 6, 2021***ರಂದು** ಗೆಜೆಟ್‌ನಲ್ಲಿ ಪ್ರಕಟಿಸಲಾದ* 2021*ರ ಕರ್ನಾಟಕ ಕಾಯ್ದೆ ನಂ*.19.

ಕಾಯ್ದೆಗೆ ಮಾಡಲಾದ ನಂತರದ ತಿದ್ದುಪಡಿ ಮತ್ತು ಹೊಸ **ನಿಬಂಧನೆ** 4ಇ(4) ಸೇರಿಸಿ ಪ್ರತಿ ವರ್ಷವೂ ವಿನಾಯಿತಿ ನೀಡುವುದನ್ನು ತಪ್ಪಿಸಿದ್ದು ಲೆಕ್ಕಪರಿಶೋಧನಾ ಅವಲೋಕನಗಳ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ.

**4(ಜಿ) ಮತ್ತು ಟೆಂಡರ್ ಪ್ರಕ್ರಿಯೆಯ ನಡುವಿನ ತುಲನೆ**

4(ಜಿ)/4ಇ(4) ಅಡಿಯಲ್ಲಿ ಸಂಗ್ರಹಣಾ ಸಂಸ್ಥೆಗಳು/ಕಾಮಗಾರಿ ವಹಿಸುವ ಸಂಸ್ಥೆಗಳಿಂದ ನೇರ ವಹಿಸುವಿಕೆ ಮತ್ತು ಸಾಮಾನ್ಯ ಟೆಂಡರ್ ಪ್ರಕ್ರಿಯೆಯಲ್ಲಿ ಒಳಗೊಂಡ ವಿವಿಧ ಹಂತಗಳನ್ನು ಕೆಳಗಿನ **ಕೋಷ್ಟಕ 3.1**ರಲ್ಲಿ ವಿವರಿಸಲಾಗಿದೆ:

**ಕೋಷ್ಟಕ 3.1: ವಹಿಸುವಿಕೆ ಮತ್ತು ಟೆಂಡರ್ ಪ್ರಕ್ರಿಯೆಯಲ್ಲಿ ಒಳಗೊಂಡ ವಿವಿಧ ಹಂತಗಳು**

| ಕೆಟಿಪಿಪಿ ಕಾಯ್ದೆಯ 4(ಜಿ) ವಿನಾಯಿತಿ ಅಡಿಯಲ್ಲಿ ವಹಿಸುವಿಕೆ | ಟೆಂಡರ್ ಪ್ರಕ್ರಿಯೆ |
|---|---|
| **1.** ವಹಿಸಿಕೊಡುವ ಇಲಾಖೆಯಿಂದ ವಹಿಸಿಕೊಡುವ ಆದೇಶ | **1.** ಇಲಾಖೆಗಳ ಲೋಕೋಪಯೋಗಿ/ ಇಂಜಿನಿಯರಿಂಗ್ ವಿಭಾಗದಿಂದ ಅಂದಾಜುಪಟ್ಟಿಗಳ ತಯಾರಿಕೆ. |
| **2.** ಕೆಆರ್‌ಐಡಿಎಲ್‌ನಿಂದ ಅಂದಾಜುಪಟ್ಟಿಗಳ ತಯಾರಿಕೆ | **2.** ಇಲಾಖೆಗಳಿಂದ ಆಡಳಿತಾತ್ಮಕ ಅನುಮೋದನೆ ಮತ್ತು ಇಲಾಖೆಗಳ ಲೋಕೋಪಯೋಗಿ/ ಇಂಜಿನಿಯರಿಂಗ್ ವಿಭಾಗದಿಂದ ತಾಂತ್ರಿಕ ಮಂಜೂರಾತಿ. |
| **3.** ವಹಿಸಿಕೊಡುವ ಇಲಾಖೆಯಿಂದ ಆಡಳಿತಾತ್ಮಕ ಅನುಮೋದನೆ | **3.** ಟೆಂಡರ್ ಆಹ್ವಾನ |
| **4.** ಕೆಆರ್‌ಐಡಿಎಲ್‌ನಿಂದ ತಾಂತ್ರಿಕ ಮಂಜೂರಾತಿ | **4.** ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನ |
| **5.** ಕೆಆರ್‌ಐಡಿಎಲ್‌ನಿಂದ ಕಾಮಗಾರಿ ಅನುಷ್ಠಾನ | **5.** ಆರ್ಥಿಕ ಬಿಡ್‌ಗಳ ಮೌಲ್ಯಮಾಪನ |
| **6.** ಹಸ್ತಾಂತರಿಸುವಿಕೆ | **6.** ಆರ್ಥಿಕ ಬಿಡ್‌ಗಳ ಸ್ವೀಕಾರ |
| | **7.** ಯಶಸ್ವಿ ಗುತ್ತಿಗೆದಾರ/ ಬಿಡ್ಡರ್‌ನೊಂದಿಗೆ ಒಪ್ಪಂದಪತ್ರ ಮತ್ತು ಕಾರ್ಯಾದೇಶ ನೀಡಿಕೆ |
| | **8.** ಕಾಮಗಾರಿ ಅನುಷ್ಠಾನ |
| | **9.** ಹಸ್ತಾಂತರಿಸುವಿಕೆ |

ಆಧಾರ: ಆರ್‌ಐಡಿಎಲ್ ಅಧಿಸೂಚನೆ ದಿನಾಂಕ 31.8.2009, ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ, ಕೆಡಬ್ಲ್ಯೂ–4

ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, 'ಸರ್ಕಾರವು ತನ್ನ ಸ್ವೇಚ್ಛಾನುಸಾರವಾಗಿ ವರ್ತಿಸುವಂತಿಲ್ಲ, ಅದರ ಕ್ರಮವು ನಿಗದಿತ ಮಾನದಂಡಗಳಿಗೆ ಅಥವಾ ಕಟ್ಟಳೆಯುಳ್ಳ ಮಾನದಂಡಗಳಿಗೆ ಅನುಗುಣವಾಗಿರಬೇಕು. ಕೆಲಸಗಳು/ಕಾಮಗಾರಿಗಳು, ಗುತ್ತಿಗೆಗಳು ಮುಂತಾದವುಗಳ ವಹಿಸುವಿಕೆ ಸೇರಿದಂತೆ ಹೆಚ್ಚಿನ ಮೊತ್ತದ ಗುತ್ತಿಗೆಗಳನ್ನು ನೀಡುವ ವಿಷಯದಲ್ಲಿ ಸರ್ಕಾರದ ವಿವೇಚನಾ ಅಧಿಕಾರವು ಸೀಮಿತವಾಗಿರಬೇಕು ಮತ್ತು ಮಾನದಂಡ ಅಥವಾ ದಕ್ಷತೆಯಿಂದ ರೂಪುಗೊಂಡಿರಬೇಕು ಮತ್ತು ಅಂತಹ ಮಾನದಂಡ ಅಥವಾ ದಕ್ಷತೆಯಿಂದ ಸರ್ಕಾರಿ ಇಲಾಖೆಗಳು ವಿಮುಖವಾದ ಸಂದರ್ಭದಲ್ಲಿ ಸರ್ಕಾರದ ಕ್ರಮವನ್ನು ರದ್ದುಪಡಿಸಬಹುದಾಗಿರುತ್ತದೆ' ಎಂಬುದಾಗಿ ತೀರ್ಪಿತ್ತಿರುತ್ತದೆ.

ಇದಲ್ಲದೆ, ಕೇಂದ್ರ ಜಾಗೃತ ಆಯೋಗದ ಮಾರ್ಗಸೂಚಿಗಳು 'ಯಾವುದೇ ಸರ್ಕಾರಿ ಸಂಸ್ಥೆಯು ಗುತ್ತಿಗೆ ನೀಡಲು ಟೆಂಡರ್ ಪ್ರಕ್ರಿಯೆ ಅಥವಾ ಸಾರ್ವಜನಿಕ ಹರಾಜು ಮೂಲಭೂತ ಅವಶ್ಯಕತೆಯಾಗಿದೆ. ಸಾಕಷ್ಟು ಸಮರ್ಥನೆಯಿಲ್ಲದೆ ನಾಮನಿರ್ದೇಶನದ ಆಧಾರದ ಮೇಲೆ ಕೈಗೊಂಡ ಗುತ್ತಿಗೆಗಳು/ಯೋಜನೆಗಳು/ ಖರೀದಿಗಳು ಸ್ಪರ್ಧೆ, ನ್ಯಾಯಸಮ್ಮತತೆ ಮತ್ತು ಸಮಾನತೆ ಇವುಗಳನ್ನು ಹೊರತಾಗಿಸುವ ಕೆಟ್ಟ ಸಂಪ್ರದಾಯವಾಗಿದೆ. ಆದ್ದರಿಂದ, ಮುಕ್ತ ಸ್ಪರ್ಧಾತ್ಮಕ ಬಿಡ್‌ಗಳ ಮೂಲಕ ಗುತ್ತಿಗೆಗಳನ್ನು ನೀಡುವುದು ಟೆಂಡರ್ ಪ್ರಕ್ರಿಯೆಗೆ ಹೆಚ್ಚಿನ ಆದ್ಯತೆಯ ವಿಧಾನವಾಗಿ ಉಳಿಯಬೇಕು. ಆದಾಗ್ಯೂ, ಸರ್ಕಾರವು ಘೋಷಿಸಿದ

ನೈಸರ್ಗಿಕ ವಿಕೋಪಗಳು ಮತ್ತು ತುರ್ತು ಸಂದರ್ಭಗಳಂತಹ ಕೆಲವು ಅಸಾಧಾರಣ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ, ನಾಮನಿರ್ದೇಶನದ ಆಧಾರದ ಮೇಲೆ ಗುತ್ತಿಗೆಗಳನ್ನು ನೀಡಬಹುದು' ಎಂದು ಪುನರುಚ್ಚರಿಸಿದೆ.

ಮೇಲಿನ ಮಾರ್ಗಸೂಚಿಗಳು/ನ್ಯಾಯಾಂಗದ ತೀರ್ಪಿನ ದೃಷ್ಟಿಯಿಂದ, ಕಾಮಗಾರಿಗಳ ನೇರ ವಹಿಸುವಿಕೆಯು ಟೆಂಡರ್ ಪ್ರಕ್ರಿಯೆಯ ಅಲ್ಪ ಸಮಯವನ್ನು ಉಳಿಸುತ್ತದೆಯಾದರೂ, ಇದು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಗೆ ಅತ್ಯಗತ್ಯವಾದ ಸ್ಪರ್ಧಾತ್ಮಕತೆ ಮತ್ತು ಮಾರುಕಟ್ಟೆ ಬೆಲೆ ಅನ್ವೇಷಣೆಯನ್ನು ತಪ್ಪಿಸಿದಂತಾಗುತ್ತದೆ. ಕಾಮಗಾರಿಗಳ ನೇರ ವಹಿಸುವಿಕೆಯು ತುರ್ತು ಕಾಮಗಾರಿಗಳ ಸಂದರ್ಭದಲ್ಲಿ ಮಾತ್ರ ಸಮರ್ಥನೀಯವೇ ಹೊರತು ಸಾಮಾನ್ಯ ಟೆಂಡರ್ ಪ್ರಕ್ರಿಯೆಯಡಿ ನೀಡಬಹುದಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಲ್ಲವಾಗಿದೆ.

ಲೆಕ್ಕಪರಿಶೋಧನೆಯು ಗಮನಿಸಿರುವ ಕಾಮಗಾರಿ ವಹಿಸುವ ಸಂಸ್ಥೆಗಳಿಂದಾಗಿರುವ ಉಲ್ಲಂಘನೆಗಳನ್ನು ಈ ಕೆಳಗೆ ಹೇಳಲಾಗಿದೆ:

### *3.2.1 4(ಜಿ) ವಿನಾಯಿತಿಯನ್ನು ಉಲ್ಲಂಘಿಸಿ ಕಾಮಗಾರಿಗಳನ್ನು ವಹಿಸಿರುವುದು*

#### 3.2.1.1 ₹2.00 ಕೋಟಿಗಿಂತ ಹೆಚ್ಚು ಮೌಲ್ಯದ ಕಾಮಗಾರಿಗಳನ್ನು ವಹಿಸಿರುವುದು

1379 ಕಾಮಗಾರಿಗಳ ಪೈಕಿ ₹2.00 ಕೋಟಿಗಿಂತ ಕಡಿಮೆ ಮೌಲ್ಯದ 1280 ಕಾಮಗಾರಿಗಳನ್ನು 24 ಉಪ–ವಿಭಾಗಗಳು ಕಾರ್ಯಗತಗೊಳಿಸಿದ್ದರೆ ಉಳಿದ ₹2.00 ಕೋಟಿಗಿಂತ ಹೆಚ್ಚಿನ ಮೌಲ್ಯದ 99 (ಶೇಕಡ 7) ಕಾಮಗಾರಿಗಳನ್ನು 4(ಜಿ) ವಿನಾಯತಿ ಅಧಿಸೂಚನೆಗಳನ್ನು ಉಲ್ಲಂಘಿಸಿ ಪರೀಕ್ಷಾ–ತನಿಖೆ ನಡೆಸಲಾದ 24 ಉಪ–ವಿಭಾಗಗಳ ಪೈಕಿ 18 ಉಪ–ವಿಭಾಗಗಳಿಗೆ ವಹಿಸಲಾಗಿತ್ತು. ಹಾಗೆ ಕೆಆರ್‌ಐಡಿಎಲ್‌ಗೆ ವಹಿಸಲಾದ ಕಾಮಗಾರಿಗಳ ಅಂದಾಜು ಮೊತ್ತ ₹2.04 ಕೋಟಿಯಿಂದ ₹56.50 ಕೋಟಿಗಳವರೆಗಿದ್ದು, ಒಟ್ಟಾರೆ ಮೊತ್ತ ₹593.51 ಕೋಟಿಯಾಗಿತ್ತು **(ಅನುಬಂಧ–V)**.

ರಾಜ್ಯ ಸರ್ಕಾರವು ಕಾಯ್ದೆಯಡಿ ವಿಧಿಸಿರುವ ₹2.00 ಕೋಟಿಗಿಂತ ಹೆಚ್ಚು ಮೌಲ್ಯದ ಕಾಮಗಾರಿಗಳನ್ನು ಸೂಕ್ತ ಟೆಂಡರ್ ಪ್ರಕ್ರಿಯೆ ಅನುಸರಿಸಿಯೇ ಕಾರ್ಯಗತಗೊಳಿಸಬೇಕು ಎಂಬ ಷರತ್ತಿಗೆ ಕಾಮಗಾರಿ ವಹಿಸುವ ಸಂಸ್ಥೆಗಳು ಮತ್ತು ಕೆಆರ್‌ಐಡಿಎಲ್ ಎರಡೂ ಬದ್ಧವಾಗಬೇಕಿತ್ತು. ₹2.00 ಕೋಟಿಗಿಂತ ಹೆಚ್ಚು ಮೌಲ್ಯದ ಕಾಮಗಾರಿಗಳನ್ನು ಒಪ್ಪಿಕೊಂಡಿರುವುದು, ಕೆಆರ್‌ಐಡಿಎಲ್ ಅಧಿಸೂಚನೆಯನ್ನು ಸೂಕ್ತ ರೀತಿಯಲ್ಲಿ ಪಾಲಿಸಿಲ್ಲದಿರುವುದನ್ನು ಸೂಚಿಸುತ್ತದೆ.

ವಿನಾಯಿತಿ ಅಧಿಸೂಚನೆಯನ್ನು ಉಲ್ಲಂಘಿಸಿ ಕಾಮಗಾರಿಗಳನ್ನು ಒಪ್ಪಿಕೊಂಡಿರುವುದಕ್ಕೆ ಜವಾಬ್ದಾರಿಯನ್ನು ನಿಗದಿಪಡಿಸಲು ಯಾವುದೇ ಕಾರ್ಯವಿಧಾನವಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ರಾಜ್ಯ ಸರ್ಕಾರವು 14 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನೀಡಿದ್ದು, ಇದರಲ್ಲಿ ಬಿಬಿಎಂಪಿಯು ಕೆಟಿಪಿಪಿ ಕಾಯ್ದೆಯ 4(ಎ) ಅಡಿಯಲ್ಲಿ ಐದು ಕಾಮಗಾರಿಗಳಿಗೆ (ತುರ್ತು ಕಾಮಗಾರಿಗಳು) ಮತ್ತು ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಒಂಬತ್ತು ಕಾಮಗಾರಿಗಳಿಗೆ 4(ಜಿ) ಅಡಿಯಲ್ಲಿ ವಿನಾಯಿತಿ ಪಡೆದಿವೆ ಎಂದು ಹೇಳಿದೆ. ಈ ಬಗ್ಗೆ ಪರಿಶೀಲಿಸಲಾಗಿ, ಐದು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉತ್ತರವು ಕ್ರಮಬದ್ಧವಾಗಿದ್ದು ಬಿಎಂಆರ್‌ಸಿಎಲ್‌ನ ಒಂಬತ್ತು ಕಾಮಗಾರಿಗಳ ವಿನಾಯಿತಿಗಳು ವಹಿಸುವಿಕೆಯ ಮಾನದಂಡಗಳನ್ನು ಸೂಕ್ತವಾಗಿ ಪೂರೈಸದ ಕಾರಣ ಕ್ರಮಬದ್ಧವಾಗಿಲ್ಲ. ಇತರ 85 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿವಾರು ನಿರ್ದಿಷ್ಟ ವಿನಾಯಿತಿಗಳ ಸ್ಥಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿಲ್ಲ.

### 3.2.1.2 ಕಾಮಗಾರಿ ವಹಿಸುವ ಸಂಸ್ಥೆಗಳು ₹2.00 ಕೋಟಿಗಿಂತ ಹೆಚ್ಚು ಮೌಲ್ಯದ ಅಂದಾಜುಪಟ್ಟಿಗಳನ್ನು ವಿಭಜಿಸಿ ಕಾಮಗಾರಿಗಳನ್ನು ವಹಿಸಿಕೊಟ್ಟಿರುವುದು

4(ಜಿ) ಅಧಿಸೂಚನೆಯು ಕಾಮಗಾರಿ ವಹಿಸುವ ಸಂಸ್ಥೆಗಳು ಕಾಮಗಾರಿಗಳನ್ನು ವಿಭಜಿಸಿ ಕೆಆರ್‌ಐಡಿಎಲ್‌ಗೆ ವಹಿಸುವುದನ್ನು ನಿಷೇಧಿಸಿದೆ ಮತ್ತು ₹2.00 ಕೋಟಿಗಿಂತ ಹೆಚ್ಚಿನ ಮೌಲ್ಯದ ಕಾಮಗಾರಿಗಳನ್ನು ಟೆಂಡರ್ ಪ್ರಕ್ರಿಯೆ ಮೂಲಕವೇ ವಹಿಸಬೇಕು ಎಂದು ನಿಗದಿಪಡಿಸುತ್ತದೆ. ಪರೀಕ್ಷಾ–ತನಿಖೆ ಮಾಡಲಾದ 24 ಉಪ–ವಿಭಾಗಗಳ ಪೈಕಿ ಐದರಲ್ಲಿ ಕಾಮಗಾರಿ ವಹಿಸುವ ಸಂಸ್ಥೆಗಳು ಕಾಮಗಾರಿಗಳನ್ನು ವಹಿಸುವಿಕೆಯ ಮಾನದಂಡಗಳಿಗೆ ಹೊಂದಾಣಿಕೆಯಾಗುವಂತೆ ವಿಭಜಿಸಿರುವ ಪ್ರಕರಣಗಳನ್ನು ಗಮನಿಸಲಾಯಿತು. ಕಾಮಗಾರಿ ವಹಿಸುವ ಸಂಸ್ಥೆಗಳು ಪ್ರತಿಯೊಂದೂ ₹2.00 ಕೋಟಿಗಿಂತ ಹೆಚ್ಚು ಮೌಲ್ಯದ ಒಟ್ಟಾರೆ ₹92.43 ಕೋಟಿ ಮೌಲ್ಯದ 12 ಕಾಮಗಾರಿಗಳ ಅಂದಾಜುಪಟ್ಟಿಗಳನ್ನು, **ಅನುಬಂಧ–VI**ರಲ್ಲಿ ಪಟ್ಟಿ ಮಾಡಿರುವಂತೆ, 85 ಕಾಮಗಾರಿಗಳಾಗಿ ವಿಭಜಿಸಿವೆ. ಕಾಮಗಾರಿಗಳನ್ನು ವಿಭಜಿಸಿರುವುದು ಕಾಮಗಾರಿ ವಹಿಸುವ ಸಂಸ್ಥೆಗಳು ಟೆಂಡರ್ ಪ್ರಕ್ರಿಯೆ ನಡೆಸುವುದಕ್ಕಿಂತ ಕೆಆರ್‌ಐಡಿಎಲ್‌ಗೆ ಕಾಮಗಾರಿ ವಹಿಸುವುದಕ್ಕೇ ಆದ್ಯತೆ ನೀಡಿರುವುದನ್ನು ಸೂಚಿಸುತ್ತದೆ.

ರಾಜ್ಯ ಸರ್ಕಾರವು ಕೆಆರ್‌ಐಡಿಎಲ್ ಕಾಮಗಾರಿ ವಹಿಸುವ ಸಂಸ್ಥೆಗಳು ವಹಿಸಿಕೊಡುವ ಕೆಲಸಗಳನ್ನು ನಿರ್ವಹಿಸುತ್ತದೆ ಮತ್ತು ಕೆಆರ್‌ಐಡಿಎಲ್‌ನಿಂದ ಕಾಮಗಾರಿಗಳನ್ನು ವಿಭಜಿಸಲಾಗಿಲ್ಲ ಎಂದು ಉತ್ತರಿಸಿದೆ. ಸಂಯೋಜಿತ ರೂಪದ ಕಾಮಗಾರಿಗಳನ್ನು 4(ಜಿ) ವಿನಾಯಿತಿ ಮಿತಿಯ ₹2.00 ಕೋಟಿ ವ್ಯಾಪ್ತಿಯೊಳಗೆ ತರಲು ಎರಡರಿಂದ 40 ಕಾಮಗಾರಿಗಳಾಗಿ ವಿಭಜಿಸಲಾಗಿದೆಯಾದ್ದರಿಂದ ಕಾಮಗಾರಿ ವಹಿಸುವ ಸಂಸ್ಥೆಗಳು ರಾಜ್ಯ ಸರ್ಕಾರವು ನಿಗದಿಪಡಿಸಿದ 4(ಜಿ) ಅಧಿಸೂಚನೆಯ ಷರತ್ತುಗಳನ್ನು ಉಲ್ಲಂಘಿಸಿದಂತಾಗಿದೆ.

### 3.2.1.3 ಕೆಆರ್‌ಐಡಿಎಲ್‌ಗೆ ಅನರ್ಹ ಕಾಮಗಾರಿಗಳನ್ನು ವಹಿಸಿಕೊಡುವುದು

ಇಲಾಖೆಗಳು, ಕೆಟಿಪಿಪಿ ಕಾಯ್ದೆ 1999 ಮತ್ತು ಸರ್ಕಾರದ ಅಧಿಸೂಚನೆಯ ನಿಬಂಧನೆಗಳಿಗೆ ವ್ಯತಿರಿಕ್ತವಾಗಿ, ಕಾರ್ಯಕ್ರಮ ಆಯೋಜನೆ, ಯುಪಿಎಸ್ ಖರೀದಿ, ಭಾರಿ ವಿದ್ಯುತ್ ಪ್ರವಹಣ ಮಾರ್ಗಗಳ ಬದಲಾವಣೆ ಮುಂತಾದ ಅನರ್ಹ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸಿಕೊಟ್ಟಿವೆ. **ಅನುಬಂಧ–VII**ರಲ್ಲಿ ತೋರಿಸಿರುವಂತೆ, 2016–17 ರಿಂದ 2020–21ರ ಅವಧಿಯಲ್ಲಿ 24 ಉಪ–ವಿಭಾಗಗಳ ಪೈಕಿ ಆರು ಉಪ–ವಿಭಾಗಗಳಲ್ಲಿ[6] ಪರೀಕ್ಷಾ–ತನಿಖೆ ನಡೆಸಲಾದ 1,379 ಕಾಮಗಾರಿಗಳ ಪೈಕಿ ₹16.28 ಕೋಟಿ ವೆಚ್ಚದ 14 (ಶೇಕಡ ಒಂದು) ಅನರ್ಹ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದೆ.

***ನಿದರ್ಶನ***

***ಕೊಪ್ಪಳ (ನೆಲೋಗಿಪುರ) ಉಪ–ವಿಭಾಗದಿಂದ ಷಾಮಿಯಾನ/ವೇದಿಕೆ, ಧ್ವನಿವರ್ಧಕ ವ್ಯವಸ್ಥೆ, ಮೈಕ್ ಸೆಟ್, ತಡೆಗಟ್ಟೆ ಇತ್ಯಾದಿಗಳ ಅಳವಡಿಕೆ***

*ಕೆಆರ್‌ಐಡಿಎಲ್‌ನ ಕೊಪ್ಪಳ (ನೆಲೋಗಿಪುರ) ಉಪ–ವಿಭಾಗವು ಗಂಗಾವತಿ ತಾಲ್ಲೂಕಿನ ಆನೆಗುಂದಿ ಗ್ರಾಮದ ಆನೆಗುಂದಿ ಉತ್ಸವ ಮತ್ತು ಸೇನಾ ನೇಮಕಾತಿ ಶಿಬಿರಕ್ಕಾಗಿ ಷಾಮಿಯಾನ/ವೇದಿಕೆ, ಧ್ವನಿವರ್ಧಕ ವ್ಯವಸ್ಥೆ, ಮೈಕ್ ಸೆಟ್, ತಡೆಗಟ್ಟೆ ಅಳವಡಿಕೆಗೆ ಇತ್ಯಾದಿಗಳ ಮೂರು ಕಾಮಗಾರಿಗಳನ್ನು ₹82.98 ಲಕ್ಷ ವೆಚ್ಚದಲ್ಲಿ ಕಾರ್ಯಗತಗೊಳಿಸಿದೆ.*

[6] ದಾವಣಗೆರೆ, ಪೂರ್ವ–1 (ಬಿಬಿಎಂಪಿ), ಗದಗ, ಕಲಬುರಗಿ–1, ಕಲಬುರಗಿ–2 ಮತ್ತು ಕೊಪ್ಪಳ (ನೆಲೋಗಿಪುರ).

ಕಾಮಗಾರಿ ವಹಿಸುವ ಸಂಸ್ಥೆಗಳು ಸಿವಿಲ್ ನಿರ್ಮಾಣ ಕಾಮಗಾರಿಗಳನ್ನು ಹೊರತುಪಡಿಸಿ ಕಾಯ್ದೆಯ 4(ಜಿ) ವಿನಾಯತಿ ಅಡಿಯಲ್ಲಿ ಅರ್ಹವಲ್ಲದ ಕೆಲವು ಕಾಮಗಾರಿಗಳನ್ನೂ ಕೆಆರ್‌ಐಡಿಎಲ್‌ಗೆ ವಹಿಸಿವೆ ಎಂಬುದನ್ನು ಸರ್ಕಾರವು ಒಪ್ಪಿಕೊಂಡಿತು.

***ಶಿಫಾರಸು 2:*** *ಇಲಾಖೆಗಳು ಟೆಂಡರ್ ಪ್ರಕ್ರಿಯೆ ನಡೆಸದಿರಲು ಕಾರಣಗಳನ್ನು ನೀಡುವ ಜೊತೆಗೆ ಕಾಮಗಾರಿಗಳನ್ನು ನೇರವಾಗಿ ವಹಿಸಿಕೊಡಲು ವಿವರವಾದ ಸಮರ್ಥನೆಯನ್ನು ನೀಡುವುದನ್ನು ರಾಜ್ಯ ಸರ್ಕಾರವು ಕಡ್ಡಾಯಗೊಳಿಸಬೇಕು. ವಹಿಸುವಿಕೆಯ ಷರತ್ತುಗಳನ್ನು ಉಲ್ಲಂಘಿಸಿದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಬೇಕು.*

## 3.3 ಅಂದಾಜುಪಟ್ಟಿಗಳ ತಯಾರಿಕೆ

ಅಂದಾಜುಪಟ್ಟಿಯು ಮೌಲ್ಯದ ಒಂದು ಮಾಪನ ಅಥವಾ ನಿರ್ದಿಷ್ಟ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಮುಂಚಿತವಾಗಿಯೇ ಸಿದ್ಧಪಡಿಸಲಾದ ಒಂದು ಹಣದ ತಖ್ತೆಯಾಗಿದೆ. ಇದು ಸಿದ್ಧಪಡಿಸುವಿಕೆಯ ಸಮಯದಲ್ಲಿ, ಸಾಧಾರಣವಾಗಿ ಲಿಖಿತ ರೂಪದಲ್ಲಿ, ಆಯಾ ವಲಯಗಳು ಪ್ರಕಟಿಸಿದ ಇಲಾಖಾ ದರಗಳ ಆಧಾರದ ಮೇಲೆ ಗುತ್ತಿಗೆದಾರರು ನಿರ್ದಿಷ್ಟ ಕಾಮಗಾರಿಯನ್ನು ಕಾರ್ಯಗತಗೊಳಿಸಲು ನಮೂದಿಸಬಹುದಾದ ಮೊತ್ತದ ಒಂದು ಅಂದಾಜು ಅಥವಾ ಸ್ಥೂಲ ಲೆಕ್ಕಾಚಾರದ ಅಭಿಪ್ರಾಯ ಅಥವಾ ಒಂದು ತಖ್ತೆಯಾಗಿದೆ.

ಲೋಕೋಪಯೋಗಿ ಇಲಾಖಾ ಸಂಹಿತೆಯ (ಕಂಡಿಕೆ 92) ನಿಬಂಧನೆಗಳ ಪ್ರಕಾರ, ಅಂದಾಜುಪಟ್ಟಿಗಳನ್ನು, ಸಾಧ್ಯವಾದಷ್ಟು ಮಟ್ಟಿಗೆ ಪೂರಕ ಅಂದಾಜುಗಳನ್ನು ಸಿದ್ಧಪಡಿಸುವ ಅಗತ್ಯ ಬಾರದಂತೆ, ಸಂಪೂರ್ಣ ರೂಪದಲ್ಲಿ ಸಿದ್ಧಪಡಿಸಿ ಸಲ್ಲಿಸಬೇಕು. ನೀರಿನ ಪೂರೈಕೆ ಬಗೆಗಿನ ವಿವರವಾದ ಅಂದಾಜುಗಳನ್ನೂ ಮುಖ್ಯ ಅಂದಾಜುಪಟ್ಟಿಯಲ್ಲಿಯೇ ಸೇರಿಸಬೇಕು. ನೈರ್ಮಲ್ಯ, ವಿದ್ಯುತ್ ಮತ್ತು ವಿಶೇಷ ಫಿಟ್ಟಿಂಗ್ ಸರಂಜಾಮುಗಳ ಅಥವಾ ಜೋಡಣೆಗಳ ಎಲ್ಲಾ ಯೋಜನೆಗಳು ಮತ್ತು ಅಂದಾಜುಗಳನ್ನು ಸಿದ್ಧಪಡಿಸಬೇಕು ಮತ್ತು ಕಟ್ಟಡದ ನಿರ್ಮಾಣವನ್ನು ಪ್ರಾರಂಭಿಸುವ ಮೊದಲೇ ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆದಿರಬೇಕು. ಹೊಸ ರಸ್ತೆಯ ನಿರ್ಮಾಣದ ಸಂದರ್ಭದಲ್ಲಿ, ಅಗತ್ಯವಿರುವ ಕಡೆ ಸಂಚಾರ ಸಮೀಕ್ಷೆಯನ್ನು ಸಹ ಕೈಗೊಳ್ಳಬೇಕು.

ಕೆಆರ್‌ಐಡಿಎಲ್‌ನ ತಾಂತ್ರಿಕ ಅಧಿಕಾರಿಗಳು, ಬಿಬಿಎಂಪಿ ಹೊರತುಪಡಿಸಿ, ಅವರಿಗೆ ವಹಿಸಲಾದ ಎಲ್ಲಾ ಕಾಮಗಾರಿಗಳಿಗೆ ಅಂದಾಜುಪಟ್ಟಿಗಳನ್ನು ಸಿದ್ಧಪಡಿಸುತ್ತಾರೆ. ಬಿಬಿಎಂಪಿಯ ಕಾಮಗಾರಿಗಳಿಗೆ ಸ್ವತಃ ಬಿಬಿಎಂಪಿಯೇ ಅಂದಾಜುಪಟ್ಟಿಗಳನ್ನು ಮತ್ತು ತಾಂತ್ರಿಕ ಮಂಜೂರಾತಿಗಳನ್ನು ಒದಗಿಸುತ್ತದೆ.

ಲೋಕೋಪಯೋಗಿ ಇಲಾಖಾ ಸಂಹಿತೆಯ ಸೂಕ್ತ ನಿಬಂಧನೆಗಳು ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳ ಜೊತೆಗೆ ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳಲ್ಲಿನ ಹಲವಾರು ನಿಬಂಧನೆಗಳನ್ನೂ ಪರಿಗಣಿಸಿ ಅಂದಾಜುಪಟ್ಟಿಗಳನ್ನು ಸಿದ್ಧಪಡಿಸಬೇಕು. ಅಂದಾಜುಪಟ್ಟಿಗಳನ್ನು ತಯಾರಿಕೆಯಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ನ್ಯೂನತೆಗಳನ್ನು ಗಮನಿಸಿದೆ:

### *3.3.1 ಕೆಆರ್‌ಐಡಿಎಲ್‌ನಿಂದ ಅಂದಾಜುಪಟ್ಟಿಗಳ ವಿಭಜನೆ*

4(ಜಿ) ಅಧಿಸೂಚನೆಯ ಪ್ರಕಾರ, ಕಾಮಗಾರಿ ವಹಿಸುವ ಸಂಸ್ಥೆಗಳಿಂದ ₹2.00 ಕೋಟಿಗಿಂತ ಹೆಚ್ಚಿನ ವೆಚ್ಚದ ಕಾಮಗಾರಿಗಳನ್ನು ಕೆಆರ್‌ಐಡಿಎಲ್ ಸ್ವೀಕರಿಸುವಂತಿಲ್ಲ. ಪರೀಕ್ಷಾ-ತನಿಖೆ ನಡೆಸಲಾದ 24 ಉಪ-ವಿಭಾಗಗಳ ಪೈಕಿ ಏಳರಲ್ಲಿ, ಪ್ರತಿಯೊಂದೂ ₹2.00 ಕೋಟಿಗೂ ಹೆಚ್ಚು ಮೌಲ್ಯ ಹೊಂದಿದ್ದ, ₹30.86 ಕೋಟಿ ಒಟ್ಟು ಮೊತ್ತದ 12 ಕಾಮಗಾರಿಗಳ ಅಂದಾಜುಪಟ್ಟಿಗಳನ್ನು ಕೆಆರ್‌ಐಡಿಎಲ್ **ಅನುಬಂಧ–VIII**ರಲ್ಲಿ

ತೋರಿಸಿರುವಂತೆ 30 ಕಾಮಗಾರಿಗಳಾಗಿ ವಿಭಜಿಸಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಅಂತಹ ಒಂದು ಪ್ರಕರಣವನ್ನು ಕೆಳಗೆ ವಿವರಿಸಲಾಗಿದೆ:

***ನಿದರ್ಶನ***

***ಹೂವಿನಹಡಗಲಿ ಉಪ-ವಿಭಾಗದಿಂದ ಅಂದಾಜುಪಟ್ಟಿಗಳ ವಿಭಜನೆ***

*ಶ್ರೀ ಕ್ಷೇತ್ರ ಮೈಲಾರ ಕನಕ ಗುರು ಪೀಠ ಶಾಖಾ ಮಠದ ಆವರಣದ ಸುತ್ತಲಿನ ರಸ್ತೆ ಹಾಗೂ ಚರಂಡಿ ನಿರ್ಮಾಣವನ್ನು ₹3.00 ಕೋಟಿ ಅಂದಾಜು ವೆಚ್ಚದಲ್ಲಿ ಹೂವಿನಹಡಗಲಿ ಉಪ-ವಿಭಾಗಕ್ಕೆ ವಹಿಸಲಾಗಿತ್ತು. ವಹಿಸಲಾದ ಕೆಲಸವು ಒಂದೇ ಸಂಯೋಜಿತ ಕಾಮಗಾರಿಯಾಗಿತ್ತು. ಆದಾಗ್ಯೂ, ಉಪ-ವಿಭಾಗವು ಕಾಮಗಾರಿಯನ್ನು ಕೆಆರ್ಐಡಿಎಲ್‌ಗೆ ವಹಿಸಿಕೊಡುವ ಅಗತ್ಯಕ್ಕೆ ಸರಿಹೊಂದುವಂತೆ ₹2.00 ಕೋಟಿಗಿಂತ ಕಡಿಮೆಗೊಳಿಸಿ ₹0.71 ಕೋಟಿ, ₹0.52 ಕೋಟಿ, ₹0.86 ಕೋಟಿ ಮತ್ತು ₹0.91 ಕೋಟಿ ಮೌಲ್ಯದ ನಾಲ್ಕು ಪ್ರತ್ಯೇಕ ಅಂದಾಜುಗಳಾಗಿ ವಿಭಜಿಸಿತು.*

### *3.3.2 ಕಡ್ಡಾಯ ಪ್ರಮಾಣಪತ್ರಗಳನ್ನು ಲಗತ್ತಿಸದಿರುವುದು*

ಸ್ಥಾಯಿ ಆದೇಶಗಳ ಕಂಡಿಕೆ 15ರ ಅನುಸಾರ, ಎಇ/ಎಇಇಗಳು ಅಂದಾಜುಪಟ್ಟಿಗಳು ಮತ್ತು ವಿವರವಾದ ಯೋಜನೆಗಳನ್ನು ಸೂಕ್ತವಾಗಿ ಸಿದ್ಧಪಡಿಸಲು ಜವಾಬ್ದಾರರಾಗಿರುತ್ತಾರೆ ಮತ್ತು ಅವರುಗಳು ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ವಿವರವಾದ ಸಮೀಕ್ಷೆ ಕೈಗೊಂಡ ನಂತರವೇ ಅಂದಾಜುಪಟ್ಟಿಗಳನ್ನು ಸಿದ್ಧಪಡಿಸಬೇಕು. ಅಲ್ಲದೆ, ಲೋಕೋಪಯೋಗಿ ಇಲಾಖಾ ಕೈಪಿಡಿಯು (ಕಂಡಿಕೆ 101) ವಿಭಾಗಾಧಿಕಾರಿ ಮತ್ತು ಎಇಇ ಇವರುಗಳು ಈ ಬಗ್ಗೆ ಕಡ್ಡಾಯ ಪ್ರಮಾಣಪತ್ರವೊಂದನ್ನು[7] ದಾಖಲಿಸಬೇಕೆಂದು ಸೂಚಿಸುತ್ತದೆ.

ಎಇಇ/ಎಇಗಳು ತಾಂತ್ರಿಕ ಮಂಜೂರಾತಿಗಾಗಿ ಅಂದಾಜುಪಟ್ಟಿಗಳನ್ನು ಸಿದ್ಧಪಡಿಸುವ ಮತ್ತು ಪ್ರಮಾಣಪತ್ರಗಳನ್ನು ದಾಖಲಿಸಬೇಕೆಂಬ ನಿಗದಿತ ಕಾರ್ಯವಿಧಾನವನ್ನು ಲೆಕ್ಕಪರಿಶೋಧನೆಯು ಪರೀಕ್ಷಾ-ತನಿಖೆ ನಡೆಸಿದ ಕೆಆರ್ಐಡಿಎಲ್ ಉಪ-ವಿಭಾಗಗಳು ಮತ್ತು ಉಡುಪಿ ಹೊರತುಪಡಿಸಿ ಇತರ ವಿಭಾಗಗಳಲ್ಲಿ ಅನುಸರಿಸಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಉಡುಪಿ ವಿಭಾಗದಲ್ಲಿ ಪ್ರಮಾಣಪತ್ರಗಳನ್ನು ಲಗತ್ತಿಸಲಾಗಿತ್ತು. ಹಾಗಿದ್ದಾಗ್ಯೂ, ಅಂದಾಜುಪಟ್ಟಿಗಳನ್ನು ಸಿದ್ಧಪಡಿಸುವಲ್ಲಿನ ಲೋಪಗಳಿಗೆ ಸಂಬಂಧಪಟ್ಟಂತೆ ಇಂಜಿನಿಯರ್‌ಗಳ ಮೇಲೆ ಯಾವುದೇ ಹೊಣೆಗಾರಿಕೆ ನಿಗದಿಯಾಗಿಲ್ಲ ಎಂಬುದು ವಾಸ್ತವವಾಗಿ ಉಳಿದಿದೆ.

ಈ ವಿಷಯವನ್ನು ಗಮನಕ್ಕೆ ತಂದ ನಂತರ ರಾಜ್ಯ ಸರ್ಕಾರವು ಮುಂದಿನ ದಿನಗಳಲ್ಲಿ ಅಂದಾಜುಪಟ್ಟಿಗಳಲ್ಲಿ ಕೆಆರ್ಐಡಿಎಲ್‌ನ ಆಯಾ ಇಂಜಿನಿಯರ್‌ಗಳಿಂದ ಅಗತ್ಯ ಪ್ರಮಾಣಪತ್ರಗಳನ್ನು ಲಗತ್ತಿಸಲಾಗುವುದು ಎಂದು ಉತ್ತರಿಸಿದೆ.

[7] ಪ್ರಮಾಣೀಕೃತ ನಾನು……………(ಹೆಸರು ಮತ್ತು ಪದನಾಮ) (DD)/(MM)/(YY) ನಲ್ಲಿ ಸೈಟ್‌ಗೆ ವೈಯಕ್ತಿಕವಾಗಿ ಭೇಟಿ ನೀಡಿದ್ದೇನೆ ಮತ್ತು ------ ವರ್ಷದ ದರಗಳ ಅನುಮೋದಿತ ದರಪಟ್ಟಿಯನ್ನು ಅಳವಡಿಸಿಕೊಂಡು ಅಂದಾಜು ಸಿದ್ಧಪಡಿಸಿ ಮತ್ತು ಅತ್ಯಂತ ಆರ್ಥಿಕ ಮತ್ತು ಸುರಕ್ಷಿತವಾಗಿ ಕೆಲಸವನ್ನು ನಿರ್ವಹಿಸಲು ಒದಗಿಸಿದ್ದೇನೆ.

### 3.3.3 ರಸ್ತೆ ಅಂದಾಜುಗಳು

ರಸ್ತೆಗಳ ಅಂದಾಜುಪಟ್ಟಿಗಳ ತಯಾರಿಕೆಯಲ್ಲಿ ಈ ಕೆಳಗಿನವುಗಳನ್ನು ಲೆಕ್ಕಪರಿಶೋಧನೆಯು ಗಮನಿಸಿದೆ.

#### 3.3.3.1 ಸಿಮೆಂಟ್ ಕಾಂಕ್ರೀಟ್ (ಸಿಸಿ) ರಸ್ತೆಗಳ ನಿರ್ಮಾಣಕ್ಕೆ ಸಮರ್ಥನೆ ಒದಗಿಸದಿರುವುದು

ಕೆಆರ್ಐಡಿಎಲ್ ಒಂದು ಸರ್ಕಾರಿ ಕಂಪನಿಯಾಗಿರುವುದರಿಂದ ಸರ್ಕಾರದ ನಿಧಿಗಳಿಗೆ ಜವಾಬ್ದಾರರಾಗಿರುತ್ತದೆ, ಮತ್ತು ಅದು ಸಾರ್ವಜನಿಕ ಹಣ ವ್ಯಯಿಸುವಾಗ, ಸಾಮಾನ್ಯ ವಿವೇಕದ ವ್ಯಕ್ತಿಯೊಬ್ಬ ತನ್ನ ಸ್ವಂತದ ಹಣ ವ್ಯಯಿಸುವಾಗ ವಹಿಸುವಷ್ಟೇ ಜಾಗರೂಕತೆಯನ್ನು ವಹಿಸಬೇಕು.

ಜನವಸತಿ ಪ್ರದೇಶವೊಂದರ ಎರಡೂ ಕೊನೆಗಳಿಂದ 50 ಮೀಟರ್‌ಗಳವರೆಗೆ ಮಾತ್ರವೇ ಸಿಮೆಂಟ್ ಕಾಂಕ್ರೀಟ್ (ಸಿಸಿ) ರಸ್ತೆಗಳನ್ನು ನಿರ್ಮಿಸಬಹುದು ಎಂದು ಪಿಎಂಜಿಎಸ್‌ವೈ ಕಾರ್ಯಕ್ರಮದ ಮಾರ್ಗಸೂಚಿಗಳ ಕಂಡಿಕೆ 8.5(iii) ನಿಗದಿಪಡಿಸುತ್ತದೆ. ಇದಲ್ಲದೆ, ಗ್ರಾಮೀಣ ರಸ್ತೆಗಳ ಕೈಪಿಡಿಯ ಅನುಸಾರ, ಗ್ರಾಮೀಣ ರಸ್ತೆಗಳ ನಿರ್ಮಾಣವನ್ನು ಅತ್ಯಂತ ಆರ್ಥಿಕ ಮಿತವ್ಯಯಕಾರಿ ರೀತಿಯಲ್ಲಿ ಕೈಗೊಳ್ಳಬೇಕು. ಬಿಟುಮಿನಸ್ (ಬಿಟಿ) ರಸ್ತೆಗಳಿಗೆ ಹೋಲಿಸಿದರೆ ಸಿಸಿ ರಸ್ತೆಗಳ ನಿರ್ಮಾಣ ದುಬಾರಿಯಾಗುತ್ತದೆ. ಹಾಗಾಗಿ, ಕಿರಿದಾದ ರಸ್ತೆಗಳನ್ನು ಹೊಂದಿರುವ ಜನನಿಬಿಡ ಕಾಲೋನಿಗಳಲ್ಲಿ ಮಾತ್ರವೇ ಸಿಸಿ ರಸ್ತೆ ನಿರ್ಮಾಣ ಸಮರ್ಥನೀಯವಾಗುತ್ತದೆ.

ಪರೀಕ್ಷಾ–ತನಿಖೆ ಮಾಡಲಾದ 711 ರಸ್ತೆ ಕಾಮಗಾರಿಗಳಲ್ಲಿ, 444 ಕಾಮಗಾರಿಗಳಿಗೆ (ಶೇಕಡ 62), ಪಿಎಂಜಿಎಸ್‌ವೈ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದಂತಹ ಯಾವುದೇ ಸಮರ್ಥನೆ ಒದಗಿಸದೆಯೇ ಸಿಸಿ ರಸ್ತೆಗಳ ನಿರ್ಮಾಣಕ್ಕಾಗಿ ಅಂದಾಜುಪಟ್ಟಿಗಳನ್ನು ತಯಾರಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ, ಹೆಚ್ಚಿನ ಹಳ್ಳಿಗಳು ಕಿರಿದಾದ ರಸ್ತೆಗಳನ್ನು ಹೊಂದಿದ್ದು ಬಿಟಿ ರಸ್ತೆ ಹಾಕುವ ಯಂತ್ರ/ಟ್ರಕ್ ಚಲಿಸಲು ಸಾಧ್ಯವಾಗದೇ ಇರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಸಿಸಿ ರಸ್ತೆಗಳನ್ನು ಕಾರ್ಯಗತಗೊಳಿಸಲು ಕಾಮಗಾರಿ ವಹಿಸುವ ಸಂಸ್ಥೆಗಳು ಸಲಹೆ ನೀಡಿದ್ದವು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ಪಿಎಂಜಿಎಸ್‌ವೈ ಕಾರ್ಯಕ್ರಮದ ಮಾರ್ಗಸೂಚಿಗಳ ಪ್ರಕಾರ ಸಿಸಿ ರಸ್ತೆಗಳ ನಿರ್ಮಾಣವು ಜನವಸತಿ ಪ್ರದೇಶದ ಎರಡೂ ಬದಿಯಲ್ಲಿ 50 ಮೀಟರ್‌ಗಳವರೆಗೆ ಮಾತ್ರ ಸಮರ್ಥಿಸಲ್ಪಟ್ಟಿರುವುದರಿಂದ ಉತ್ತರವು ಸ್ವೀಕಾರಾರ್ಹವಾಗಿಲ್ಲ.

#### 3.3.3.2 ಪಿಆರ್ಇಡಿ ದರಪಟ್ಟಿ ಬದಲಿಗೆ ಲೋಕೋಪಯೋಗಿ ಇಲಾಖೆ ದರಪಟ್ಟಿ ಅಳವಡಿಸಿ ಕೊಂಡಿರುವುದರಿಂದ ಗ್ರಾಮೀಣ ರಸ್ತೆಗಳ ಅಂದಾಜು ವೆಚ್ಚದಲ್ಲಿ ಹೆಚ್ಚಳ

ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಸುತ್ತೋಲೆ ಸೂಚನೆಗಳು[8] ಆರ್‌ಡಿಪಿಆರ್‌ನಿಂದ ಕಾರ್ಯಗತಗೊಳ್ಳುವ ಎಲ್ಲಾ ಸಿವಿಲ್ ಮತ್ತು ಇತರ ಕಾಮಗಾರಿಗಳಿಗೆ ಪಿಆರ್ಇಡಿ ದರಪಟ್ಟಿಯಲ್ಲಿ ಒದಗಿಸಲಾದ ದರಗಳ ಪ್ರಕಾರವೇ ಅಂದಾಜುಪಟ್ಟಿಗಳನ್ನು ತಯಾರಿಸಬೇಕು ಮತ್ತು ಪಿಆರ್ಇಡಿ ದರಪಟ್ಟಿಯಲ್ಲಿ ಒದಗಿಸದ ಕೆಲಸದ ಬಾಬ್ತುಗಳಿಗೆ ಮಾತ್ರ, ಲೋಕೋಪಯೋಗಿ ಇಲಾಖೆ ದರಪಟ್ಟಿಯ ದರಗಳನ್ನು ಅಳವಡಿಸಿಕೊಳ್ಳಬಹುದು ಎಂದು ನಿಗದಿಪಡಿಸಿತ್ತು.

₹9 ಕೋಟಿ (₹ ಒಂದು ಕೋಟಿ x ಒಂಬತ್ತು ರಸ್ತೆಗಳು) ಅಂದಾಜು ಮೊತ್ತದ ಒಂಭತ್ತು ಕಾಮಗಾರಿಗಳ (2017–18 ರಿಂದ 2019–20) ಲೆಕ್ಕಪರಿಶೀಲನೆಯಿಂದ, ಆಯಾ ವರ್ಷದ ಪಿಆರ್ಇಡಿ ದರಪಟ್ಟಿಯ

[8] ಎನ್ಆರ್ಆರ್‌ಡಿಎ ಸುತ್ತೋಲೆ ಸಂಖ್ಯೆ. P17023/5/2005-P-1 ದಿನಾಂಕ 06.03.2005.
ಎನ್ಆರ್ಆರ್‌ಡಿಎ ಪತ್ರ ಸಂಖ್ಯೆ P17023/2005-P-1/122 ದಿನಾಂಕ 07.07.2005.
ಎನ್ಆರ್ಆರ್‌ಡಿಎ ಪತ್ರ F. No. P17023/5/2005/P1/ ಎನ್ಆರ್ಆರ್‌ಡಿಎ ದಿನಾಂಕ 27.04.2016

ಬದಲಿಗೆ 2018–19ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ನು ಆಧರಿಸಿ ಅಂದಾಜುಪಟ್ಟಿಗಳನ್ನು ಸಿದ್ಧಪಡಿಸಲಾಗಿರುವುದು ತಿಳಿದು ಬಂದಿತು.

ಒಂದೇ ರೀತಿಯ ಕೆಲಸದ ಬಾಬ್ತುಗಳಿಗೆ ಪಿಆರ್ಇಡಿ ದರಪಟ್ಟಿಯ ದರಕ್ಕಿಂತ ಹೆಚ್ಚಿನ ದರ ಹೊಂದಿರುವ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ನು ಅಳವಡಿಸಿಕೊಂಡು ಕೆಆರ್ಐಡಿಎಲ್ ಎಲ್ಲಾ ಒಂಬತ್ತು ಸಿಸಿ ರಸ್ತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಅನುಬಂಧ–**IX**ರಲ್ಲಿ ವಿವರಿಸಿದಂತೆ ಕೆಆರ್ಐಡಿಎಲ್‌ಗೆ ₹1.02 ಕೋಟಿ ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿತು.

ಇದಲ್ಲದೆ, ಪರೀಕ್ಷಾ–ತನಿಖೆ ಮಾಡಲಾದ 598 ಕಾಮಗಾರಿಗಳ ಪೈಕಿ 444 ಪ್ರಕರಣಗಳಲ್ಲಿ (ಶೇಕಡ 74) ಕೆಆರ್ಐಡಿಎಲ್ ಪಿಆರ್ಇಡಿ ದರಪಟ್ಟಿಯ ಬದಲಿಗೆ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ನು ಅಳವಡಿಸಿಕೊಂಡು ಗ್ರಾಮೀಣ ರಸ್ತೆಗಳ ಅಂದಾಜುಪಟ್ಟಿಗಳನ್ನು ಸಿದ್ಧಪಡಿಸಿರುವುದರಿಂದ ರಸ್ತೆ ಕಾಮಗಾರಿಗಳ ಅಂದಾಜು ವೆಚ್ಚದಲ್ಲಿ ಹೆಚ್ಚಳ ಉಂಟಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಸದರಿ ರಸ್ತೆಗಳಲ್ಲಿ ಹೆಚ್ಚಿನ ಸಂಚಾರದಟ್ಟಣೆ ಇರುವುದರಿಂದ ಕೆಆರ್ಐಡಿಎಲ್ ಹಲವು ವರ್ಷಗಳಿಂದಲೂ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ನು ಅಳವಡಿಸಿಕೊಳ್ಳುತ್ತಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನಿರ್ದೇಶನಗಳ ಪ್ರಕಾರ ಗ್ರಾಮೀಣ ರಸ್ತೆಗಳಿಗೆ ಪಿಆರ್ಇಡಿ ದರಪಟ್ಟಿಯನ್ನು ಅಳವಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ ಮತ್ತು ಲೋಕೋಪಯೋಗಿ ಇಲಾಖೆ ದರಪಟ್ಟಿಗೆ ಹೋಲಿಸಿದಾಗ ಮಿತವ್ಯಯಕರ ಆಗಿರುತ್ತದೆಯಾದ್ದರಿಂದ ಉತ್ತರವು ಒಪ್ಪಲರ್ಹವಾಗಿಲ್ಲ.

### *3.3.4 ಅಂದಾಜುಪಟ್ಟಿಗಳಲ್ಲಿ ಕಾರ್ಮಿಕ ಉಪಕರ ಮತ್ತು ವ್ಯಾಟ್ ಸೇರ್ಪಡೆ ಮತ್ತು ಗುಂಪು ನಾಯಕರುಗಳಿಗೆ ಅನುಚಿತ ಪ್ರಯೋಜನ ಒದಗಿಸಿದ ಕಾರಣ ಹೆಚ್ಚಿದ ಅಂದಾಜು ವೆಚ್ಚ – ₹1.90 ಕೋಟಿ*

ದರಪಟ್ಟಿಯ ದರಗಳು (2017–18ರ ವರೆಗೆ) ಎಲ್ಲಾ ದರಗಳು, ಸುಂಕಗಳು ಮತ್ತು ತೆರಿಗೆಗಳನ್ನು ಒಳಗೊಂಡಿದ್ದರೂ ಸಹ, ಆಯ್ಕೆಮಾಡಿದ ಉಪ–ವಿಭಾಗಗಳಲ್ಲಿ ಪರೀಕ್ಷಾ–ತನಿಖೆಗೊಳಪಟ್ಟ ಎಲ್ಲಾ ಅಂದಾಜುಪಟ್ಟಿಗಳಲ್ಲಿ, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೊಳಿಸುವ ಮೊದಲು ವ್ಯಾಟ್ ಮತ್ತು ಕಾರ್ಮಿಕ ಉಪಕರಗಳನ್ನು ಸೇರಿಸಲಾಗಿದ್ದರಿಂದ, ಅಂದಾಜು ವೆಚ್ಚಗಳು ಶೇಕಡ ಆರು (ಶೇಕಡ ಒಂದು ಕಾರ್ಮಿಕ ಉಪಕರ ಮತ್ತು ಶೇಕಡ ಐದು ವ್ಯಾಟ್) ಹೆಚ್ಚಳಗೊಂಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಸರ್ಕಾರಿ ಇಲಾಖೆಗಳಿಂದ ಹೆಚ್ಚುವರಿ ಹಣ ಸೆಳೆಯುವಲ್ಲಿ ಮತ್ತು ಕೆಆರ್ಐಡಿಎಲ್‌ನ ಗುಂಪು ನಾಯಕರುಗಳಿಗೆ ಹೆಚ್ಚುವರಿ ಪಾವತಿಗೆ ಕಾರಣವಾಯಿತು. ಆರು ಉಪ–ವಿಭಾಗಗಳಲ್ಲಿ, ಪರೀಕ್ಷಾ–ತನಿಖೆ ನಡೆಸಲಾದ ₹36.41 ಕೋಟಿ ಮೌಲ್ಯದ 45 ಅಂದಾಜುಪಟ್ಟಿಗಳಲ್ಲಿ ಕ್ರಮವಾಗಿ ₹1.78 ಕೋಟಿ ಮತ್ತು ₹0.43 ಕೋಟಿಗಳಷ್ಟು ವ್ಯಾಟ್ ಮತ್ತು ಕಾರ್ಮಿಕ ಉಪಕರಗಳನ್ನು ಸೇರಿಸುವ ಮೂಲಕ ಹೆಚ್ಚಿಸಲಾಗಿತ್ತು ಮತ್ತು ಇದರಿಂದ ಗುಂಪು ನಾಯಕರುಗಳಿಗಷ್ಟೇ ಮಾತ್ರ ಲಾಭವಾಗಿತ್ತು.

ರಾಜ್ಯ ಸರ್ಕಾರವು, ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಇತರ ವೆಚ್ಚಗಳ ಜೊತೆಗೆ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ನಿಗದಿಪಡಿಸಿರುವ ಎಲ್ಲಾ ತೆರಿಗೆಗಳನ್ನೂ ವಿಧಿಸಲು ಕಂಪನಿಗೆ ಅನುಮತಿಸಲಾಗಿದೆ ಎಂದು ಉತ್ತರಿಸಿತು. ಸರ್ಕಾರಿ ಆದೇಶವು, ಕಾಯ್ದೆಯಡಿಯಲ್ಲಿ ನಿಗದಿಪಡಿಸಿರುವ ಎಲ್ಲಾ ತೆರಿಗೆಗಳನ್ನೂ ವಿಧಿಸಲು ಕೆಆರ್ಐಡಿಎಲ್‌ಗೆ ಅನುಮತಿಸಿದೆಯಾದರೂ, ದರಪಟ್ಟಿಯ ದರವು ತೆರಿಗೆ ಬಾಧ್ಯತೆಯನ್ನೂ ಒಳಗೊಂಡಿತ್ತಾದ್ದರಿಂದ ಉತ್ತರವು ಸಮರ್ಥನೀಯವಾಗಿಲ್ಲ.

***ಶಿಫಾರಸು 3:*** *ಅಂದಾಜುಪಟ್ಟಿಗಳ ತಯಾರಿಕೆ, ಪರಿಶೀಲನೆ ಮತ್ತು ಮಂಜೂರಾತಿಯ ಪ್ರತಿ ಹಂತದಲ್ಲಿಯೂ ಜವಾಬ್ದಾರಿ ನಿಗದಿಪಡಿಸಲಾಗಿದೆ ಎಂಬುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳನ್ನು ಸೂಕ್ತವಾಗಿ ಪರಿಷ್ಕರಿಸಬೇಕು.*

#### 3.3.4.1 ಕೆಆರ್‌ಐಡಿಎಲ್ ಸಿದ್ಧಪಡಿಸಿದ ರಸ್ತೆ ಕಾಮಗಾರಿಗಳ ಅಂದಾಜುಪಟ್ಟಿಗಳಲ್ಲಿನ ಇತರ ಲೋಪಗಳು

ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ 90(8), ಅಂದಾಜುಪಟ್ಟಿಗಳು ವಿವರವಾದ ದರ ವಿಶ್ಲೇಷಣೆಯನ್ನು ಒಳಗೊಂಡಿರಬೇಕು ಮತ್ತು ಇಡುಗಂಟು ಹಣ ಒದಗಿಸುವ ಸಂಪ್ರದಾಯ ಅವಲಂಬಿಸಬಾರದು ಎಂದು ಷರತ್ತು ವಿಧಿಸುತ್ತದೆ. ಲೋಕೋಪಯೋಗಿ ಇಲಾಖಾ ಸಂಹಿತೆಯ ಪ್ರಕಾರ ಸಾಮಾನ್ಯವಾಗಿ ಅಂದಾಜುಪಟ್ಟಿಗಳ ಜೊತೆಗಿನ ಕೆಳಗಿನ ವಿವರಗಳನ್ನು ವರದಿಯಲ್ಲಿ ಒದಗಿಸಬೇಕು.

- i. ಇತಿಹಾಸ – ಕೆಲಸವನ್ನು ಕೈಗೊಳ್ಳುವ ಅಗತ್ಯಕ್ಕೆ ಕಾರಣವಾಗುವ ಸಂದರ್ಭಗಳ ಸಂಕ್ಷಿಪ್ತ ಅವಲೋಕನ.
- ii. ವ್ಯಾಪ್ತಿ– ಒಳಗೊಂಡಿರುವ ಕಾಮಗಾರಿಯ ವ್ಯಾಪ್ತಿ.
- iii. ವಿಶಿಷ್ಟತೆಗಳು – ಸಾಮಗ್ರಿಗಳಿಗೆ ವಿಶಿಷ್ಟತೆಗಳು.
- iv. ಹಣ – ಬಜೆಟ್ ಅಥವಾ ಲೆಕ್ಕಪತ್ರದ ಅಡಿಯಲ್ಲಿ ಕಾಮಗಾರಿ ಹಂಚಿಕೆಯ ವೆಚ್ಚ.
- v. ದರಪಟ್ಟಿಯಲ್ಲಿ ಇರದಂತಹ ಕಾಮಗಾರಿ ಬಾಬ್ತುಗಳ ದರ ವಿಶ್ಲೇಷಣೆ.
- vi. ಅಧಿಕಾರಯುತ ಪ್ರಾಧಿಕಾರದ ಮೇಲುರುಜು.
- vii. ಪ್ರತಿ ಭೌತಿಕ ಚಟುವಟಿಕೆ/ಪ್ರಗತಿಗೆ ಸಮಯದ ಚೌಕಟ್ಟನ್ನು ಸೂಚಿಸುವ ಅನುಷ್ಠಾನ/ ಕಾರ್ಯಹರಿವು ನಕ್ಷೆ.

ಕಂಡಿಕೆ 4.5.2ರಲ್ಲಿ ವಿವರಿಸಿರುವಂತೆ, ಅಂದಾಜುಪಟ್ಟಿಗಳನ್ನು ಸಿದ್ಧಪಡಿಸುವಾಗ ಕೆಆರ್‌ಐಡಿಎಲ್ ಇಡುಗಂಟು ಮೊತ್ತಕ್ಕೆ ಅವಕಾಶ ಮಾಡುವುದೇ ಅಲ್ಲದೆ ಗುಂಪು ನಾಯಕರುಗಳಿಗೆ ಪಾವತಿಯನ್ನೂ

ಇಡುಗಂಟು ಆಧಾರದಲ್ಲೇ ಮಾಡಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪರೀಕ್ಷಾ–ತನಿಖೆ ಮಾಡಲಾದ ಯಾವುದೇ ಉಪ–ವಿಭಾಗಗಳಲ್ಲಿಯೂ ಅಂದಾಜುಪಟ್ಟಿಯೊಂದಿಗೆ ಲಗತ್ತಿಸಬೇಕಾದ ವರದಿಯನ್ನು ಸಿದ್ಧಪಡಿಸದಿರುವುದನ್ನೂ ಸಹ ಗಮನಿಸಲಾಗಿದೆ.

## 3.4 ಆಡಳಿತಾತ್ಮಕ ಅನುಮೋದನೆ

ಆಡಳಿತಾತ್ಮಕ ಅನುಮೋದನೆಯು ಕಾಮಗಾರಿ ವಹಿಸಿದಂತಹ ಇಲಾಖೆಯ ಅಗತ್ಯತೆಗಳಿಗೆ ಸಂಬಂಧಿಸಿದಂತಹ ಅಥವಾ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಇಲಾಖೆಯಲ್ಲಿ ವ್ಯಯಿಸುವ ವೆಚ್ಚದ ಪ್ರಸ್ತಾವನೆಗಳಿಗೆ ಔಪಚಾರಿಕ ಅನುಮೋದನೆಯನ್ನು ಸೂಚಿಸುತ್ತದೆ. ಸ್ಥಾಯಿ ಆದೇಶವು (ಕಂಡಿಕೆ 16), ಕಾಮಗಾರಿಗಳನ್ನು ಆರಂಭಿಸುವ ಮುನ್ನ ಎಲ್ಲಾ ಅಂದಾಜುಪಟ್ಟಿಗಳೂ ಆಡಳಿತಾತ್ಮಕ ಅನುಮೋದನೆಯನ್ನು ಹೊಂದಿರಬೇಕು ಎಂದು ಹೇಳುತ್ತದೆ.

### *3.4.1 ಆಡಳಿತಾತ್ಮಕ ಅನುಮೋದನೆಯಿಲ್ಲದೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದು*

ಗದಗ ಉಪ–ವಿಭಾಗದಲ್ಲಿ ₹3.89 ಕೋಟಿ ಮೌಲ್ಯದ ಮೂರು ಕಾಮಗಾರಿಗಳನ್ನು ₹3.86 ಕೋಟಿ ವೆಚ್ಚದಲ್ಲಿ ಆಡಳಿತಾತ್ಮಕ ಅನುಮೋದನೆ ಇಲ್ಲದೆಯೇ ಕಾರ್ಯಗತಗೊಳಿಸಲಾಗಿದೆ. ಆಡಳಿತಾತ್ಮಕ ಅನುಮೋದನೆಯಿಲ್ಲದೆ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯು ವಹಿಸಿಕೊಡುವ ಇಲಾಖೆಗಳಿಂದ

ವೆಚ್ಚದ ಮರುಪಡೆಯುವಿಕೆಯ ಮೇಲೆ ಪರಿಣಾಮ ಬೀರುತ್ತದೆ. ಅಂತಹ ನಿದರ್ಶನವೊಂದನ್ನು ಈ ಕೆಳಗೆ ನೀಡಲಾಗಿದೆ:

***ನಿದರ್ಶನ***

***ಗದಗ ಉಪ–ವಿಭಾಗದಿಂದ ಆಡಳಿತಾತ್ಮಕ ಅನುಮೋದನೆ ಇಲ್ಲದೆಯೇ ಕಾಮಗಾರಿ ನಿರ್ವಹಣೆ:***

*ಕೇಂದ್ರ ಕಛೇರಿಯಿಂದ ಗದಗ ಉಪ–ವಿಭಾಗಕ್ಕೆ ₹3.00 ಕೋಟಿ ಬಿಡುಗಡೆ ಮಾಡಲಾಗಿತ್ತು ಮತ್ತು ಆಡಳಿತಾತ್ಮಕ ಅನುಮೋದನೆ ಇಲ್ಲದೆಯೇ ಕೆ.ಎಚ್.ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಿರ್ಮಾಣಕ್ಕಾಗಿ ₹2.95 ಕೋಟಿ ವೆಚ್ಚ ಮಾಡಲಾಗಿದೆ. ನಿರ್ಮಾಣ ಕಾರ್ಯವು ಪೂರ್ಣಗೊಂಡು (ನವೆಂಬರ್ 2019) ಹಸ್ತಾಂತರಿಸಲ್ಪಟ್ಟಿದ್ದರೂ, ಕಾಮಗಾರಿ ವಹಿಸಿದ ಸಂಸ್ಥೆಯಿಂದ ಕೆಆರ್‌ಐಡಿಎಲ್‌ಗೆ ಈವರೆಗೂ (ಆಗಸ್ಟ್ 2022) ಹಣ ಸ್ವೀಕೃತವಾಗಿಲ್ಲ. ವಿಷಯವನ್ನು ಗಮನಕ್ಕೆ ತಂದಾಗ ರಾಜ್ಯ ಸರ್ಕಾರವು, ಮಾರ್ಚ್ 2020ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು (ಘಟನೋತ್ತರವಾಗಿ) ನೀಡಲಾಗಿದೆ ಎಂದು ತಿಳಿಸಿತು. ಆದರೆ, ಆಡಳಿತಾತ್ಮಕ ಅನುಮೋದನೆಯಿಲ್ಲದೆಯೇ ಕಾಮಗಾರಿ ಪೂರ್ಣಗೊಳಿಸಲಾಗಿದೆ ಎಂಬುದು ಸ್ಪಷ್ಟವಾಗಿದೆ ಮತ್ತು ಸ್ವೀಕರಿಸಬೇಕಾದ ಹಣದ ಬಗ್ಗೆ ಉತ್ತರವು ಮೌನವಾಗಿದೆ.*

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಉಳಿದ ಎರಡು ಪ್ರಕರಣಗಳ ಬಗ್ಗೆ ಉತ್ತರವನ್ನು ಇನ್ನೂ ನೀಡಲಾಗಿಲ್ಲ

### *3.4.2 ಆಡಳಿತಾತ್ಮಕ ಅನುಮೋದನೆಗೆ ಮುನ್ನವೇ ಕೆಆರ್‌ಐಡಿಎಲ್‌ಗೆ ಹಣ ಬಿಡುಗಡೆ ಮಾಡಿರುವುದು – ₹73.31 ಕೋಟಿ*

19 ಉಪ–ವಿಭಾಗಗಳಲ್ಲಿ, 1,379 ಕಾಮಗಾರಿಗಳ ಪೈಕಿ 173ರಲ್ಲಿ (ಶೇಕಡ 13) ಆಡಳಿತಾತ್ಮಕ ಅನುಮೋದನೆಗೆ ಮುನ್ನವೇ ಕಾಮಗಾರಿ ವಹಿಸಿರುವ ಇಲಾಖೆಗಳು ₹73.31 ಕೋಟಿ ಮೊತ್ತದ ಹಣವನ್ನು ಬಿಡುಗಡೆ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ ಮತ್ತು ಅನುಬಂಧ–**X**ರಲ್ಲಿ ವಿವರಿಸಿರುವಂತೆ, ಒಂದು ತಿಂಗಳಿನಿಂದ 82 ತಿಂಗಳುಗಳವರೆಗಿನ ವಿಳಂಬದ ನಂತರ ಅಂತಹ ಅನುಮೋದನೆಗಳನ್ನು ನೀಡಲಾಗಿದೆ. ಹಣದ ಅಂತಹ ಬಿಡುಗಡೆಯು, ಆಯಾ ಆಡಳಿತ ಇಲಾಖೆಗಳು ಬಜೆಟ್ ಹಂಚಿಕೆಗಳು ವ್ಯಪಗತವಾಗುವುದನ್ನು ತಪ್ಪಿಸಲು ಕೆಆರ್‌ಐಡಿಎಲ್‌ಗೆ ಹಣ ಬಿಡುಗಡೆ ಮಾಡಿರುವುದನ್ನು ಸೂಚಿಸುತ್ತದೆ.

### *3.4.3 ಮೂಲ ಯೋಜನೆ ಬದಲಾವಣೆಗೊಂಡ ಕಾರಣ ಪರಿತ್ಯಜಿಸಲಾದ ಕಾಮಗಾರಿಗಳ ಮೇಲೆ ವ್ಯರ್ಥ ವೆಚ್ಚ – ₹99.94 ಲಕ್ಷ*

ಗದಗ ತಾಲ್ಲೂಕಿನ ಬೆಲ್ದಡಿ ಗ್ರಾಮದಲ್ಲಿ ಶ್ರೀ ಗೋಂಧಾವಳಿ ಮಹಾರಾಜ್ ಸಮುದಾಯ ಭವನಕ್ಕೆ ಆರಂಭದಲ್ಲಿ ₹100 ಲಕ್ಷ ವೆಚ್ಚದಲ್ಲಿ ನೆಲಮಹಡಿ, ಮೊದಲ ಮಹಡಿ ಮತ್ತು ಕಾಂಪೌಂಡ್ ಗೋಡೆಯ ನಿರ್ಮಾಣಕ್ಕೆ ಯೋಜಿಸಲಾಗಿತ್ತು (ಮಾರ್ಚ್ 2017). ಆದರೆ, ಕೆಆರ್‌ಐಡಿಎಲ್ ಮೂಲ ಯೋಜನೆಯನ್ನು ಬದಲಾಯಿಸಿ ನೆಲಮಾಳಿಗೆ (ಪರಿಷ್ಕೃತ ಅಂದಾಜಿನ ಪ್ರಕಾರ ನೆಲಮಾಳಿಗೆ ನಿರ್ಮಾಣದ ವೆಚ್ಚ ₹72.92 ಲಕ್ಷ), ನೆಲಮಹಡಿ ಮತ್ತು ಬೋರ್‌ವೆಲ್‌ಗೆ ಸಂಬಂಧಿಸಿದ ಕಾಮಗಾರಿಗಳನ್ನು ನಿರ್ವಹಿಸಿತು. ಅಂದಾಜುಪಟ್ಟಿಯಲ್ಲಿ ಸೇರಿರದ ಬಾಬ್ತುಗಳನ್ನು ಕಾರ್ಯಗತಗೊಳಿಸಿದ ಕಾರಣದಿಂದಾಗಿ ಒದಗಿಸಿದ ಹಣವು ಸಾಲದಂತಾಯಿತು ಮತ್ತು ಮೂಲ ಯೋಜನೆಯಲ್ಲಿ ಯೋಜಿಸಿದಂತೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ, ಇದರಿಂದಾಗಿ ಕಟ್ಟಡವು ಅಪೂರ್ಣ ಮತ್ತು ಶಿಥಿಲಾವಸ್ಥೆಯಲ್ಲಿ ಉಳಿದು (ಏಪ್ರಿಲ್ 2021) ₹99.94 ಲಕ್ಷ ವ್ಯರ್ಥ ವೆಚ್ಚದಲ್ಲಿ ಪರಿಣಮಿಸಿತು (**ಪ್ರದರ್ಶಿಕೆ 3.1**).

ಗ್ರಾಮ ಪಂಚಾಯಿತಿ ಹಾಗೂ ಗದಗ ಕ್ಷೇತ್ರದ ಮಾನ್ಯ ಶಾಸಕರ ಮನವಿ ಮೇರೆಗೆ ಮೂಲ ಯೋಜನೆಯನ್ನು ಪರಿಷ್ಕರಿಸಲಾಯಿತು ಎಂದು ಸರ್ಕಾರವು ಉತ್ತರಿಸಿತು. ಗದಗ ಜಿಲ್ಲಾ ಪಂಚಾಯಿತಿಯಿಂದ ಬಿಡುಗಡೆಯಾದ ಅನುದಾನಕ್ಕೆ ಸರಿಸಮಾನವಾಗಿ ಕಾಮಗಾರಿಯನ್ನು ಕಾರ್ಯಗತಗೊಳಿಸಲಾಗಿದ್ದು, ಅಪೂರ್ಣ ಕಾಮಗಾರಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ ಮತ್ತು ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಲಾಗಿದೆ. ಕೆಆರ್‌ಐಡಿಎಲ್ ಹೆಚ್ಚಿದ ವೆಚ್ಚಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಬೇಕಿತ್ತು ಮತ್ತು ಎಲ್ಲಾ ರೀತಿಯಲ್ಲೂ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾದ ಹೆಚ್ಚುವರಿ ಹಣದ ಅಗತ್ಯತೆಯ ಬಗ್ಗೆ ಕಾಮಗಾರಿ ವಹಿಸಿದ ಸಂಸ್ಥೆಗಳಿಗೆ ತಿಳಿಸಬೇಕಿತ್ತಾದ್ದರಿಂದ ಉತ್ತರವು ಸ್ವೀಕಾರಾರ್ಹವಾಗಿಲ್ಲ.

**ಪ್ರದರ್ಶಿಕೆ 3.1: ಪರಿತ್ಯಜಿಸಲಾದ ಸಮುದಾಯ ಭವನದ ಸ್ಥಿತಿ**





ಆಧಾರ: ಜಂಟಿ ಸ್ಥಳ ಪರಿಶೀಲನೆ ಸಮಯದಲ್ಲಿ ತೆಗೆದ ಛಾಯಾಚಿತ್ರ

## 3.5 ನಿವೇಶನ ಸಮಸ್ಯೆಗಳಿಂದ ಪರಿತ್ಯಜಿಸಲಾದ ಕಾಮಗಾರಿ ಮೇಲಿನ ವ್ಯರ್ಥ ವೆಚ್ಚ– ₹15.25 ಲಕ್ಷ

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ನಿಬಂಧನೆಗಳ ಅನುಸಾರ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ನಿವೇಶನವು ಎಲ್ಲಾ ಋಣಭಾರಗಳಿಂದ ಮುಕ್ತವಾಗಿರಬೇಕು ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಬೇಕು ಮತ್ತು ಎಲ್ಲಾ ಸಾರ್ವಜನಿಕರಿಗೂ ಪ್ರಯೋಜನಕಾರಿಯಾಗಬೇಕು. ಇದಲ್ಲದೆ, ಸ್ಥಾಯಿ ಸೂಚನೆಗಳ ಕಂಡಿಕೆ 15ರ ಅನುಸಾರ, ನಿವೇಶನದಲ್ಲಿ ಇಇ/ಎಇಇ ಕೈಗೊಂಡ ವಿವರವಾದ ಸಮೀಕ್ಷೆ ಮತ್ತು ಪರಿಶೀಲನೆಗಳ ಆಧಾರದ ಮೇಲೆ ಅಂದಾಜುಪಟ್ಟಿಗಳನ್ನು ಸಿದ್ಧಪಡಿಸಬೇಕಾಗಿತ್ತು. ಜಂಟಿ ಸ್ಥಳ ಪರಿಶೀಲನೆ ಸಮಯದಲ್ಲಿ, ಕೆಳಗೆ ವಿವರಿಸಿದಂತೆ, ನಿವೇಶನದ ಸಮಸ್ಯೆಗಳಿಂದ ಅಂಗನವಾಡಿ ಕಟ್ಟಡದ ನಿರ್ಮಾಣವನ್ನು ಪರಿತ್ಯಜಿಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ.

ಕೂಡ್ಲಿಗಿ ತಾಲ್ಲೂಕಿನ ಬಡಜನಬಂಡಿ ಮತ್ತು ಟಿಕೆ ಗೊಲ್ಲರಹಟ್ಟಿಯಲ್ಲಿ ಎರಡು ಅಂಗನವಾಡಿಗಳ ನಿರ್ಮಾಣವನ್ನು ಕ್ರಮವಾಗಿ ಪರಿತ್ಯಜಿಲಾದ ಕ್ವಾರಿ ಮತ್ತು ಖಾಸಗಿ ಜಮೀನಿನಲ್ಲಿ ಮಾಡಲಾಗಿತ್ತು. ಈ ಎರಡು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಡುಗಡೆಯಾಗಿದ್ದ ₹18.34 ಲಕ್ಷಕ್ಕೆ ಪ್ರತಿಯಾಗಿ ಕ್ರಮವಾಗಿ ₹6.95 ಲಕ್ಷ ಮತ್ತು ₹8.30 ಲಕ್ಷ ಆರ್ಥಿಕ ಪ್ರಗತಿಯಾಗಿತ್ತು (ಮಾರ್ಚ್ 2019). ಚುನಾಯಿತ ಪ್ರತಿನಿಧಿಗಳ ನಿರ್ದೇಶನದಂತೆ ಬಡಜನಬಂಡಿ ಕಾಮಗಾರಿಯನ್ನು ಪರಿತ್ಯಜಿಸಲಾದರೆ, ಖಾಸಗಿ ಜಮೀನಿನಲ್ಲಿ ಕಟ್ಟಡ ನಿರ್ಮಿಸಿದ್ದಕ್ಕೆ ಆ ಆಸ್ತಿ ಮಾಲೀಕರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಟಿಕೆ ಗೊಲ್ಲರಹಟ್ಟಿಯ ಕಾಮಗಾರಿ ಸ್ಥಗಿತಗೊಂಡಿದ್ದು ವ್ಯಯಿಸಿದ್ದ ಒಟ್ಟು ₹15.25 ಲಕ್ಷ ವ್ಯರ್ಥ ವೆಚ್ಚದಲ್ಲಿ ಪರಿಣಮಿಸಿತು. ಈ ಕಾಮಗಾರಿಗಳನ್ನು ಪ್ರಾರಂಭಿಸುವ ಮೊದಲು ಭೂಮಿಯ ಸೂಕ್ತತೆ ಮತ್ತು ಮಾಲೀಕತ್ವವನ್ನು ಖಾತ್ರಿಪಡಿಸಿಕೊಳ್ಳದ್ದಕ್ಕಾಗಿ ಕೆಆರ್‌ಐಡಿಎಲ್/ಕಾಮಗಾರಿ ವಹಿಸುವ ಸಂಸ್ಥೆಗಳು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಹೊಣೆಗಾರಿಕೆ ನಿಗದಿಪಡಿಸಲು ವಿಫಲವಾಗಿವೆ (**ಪ್ರದರ್ಶಿಕೆ 3.2**). ಸರ್ಕಾರ ಇನ್ನೂ ಅಂತಿಮ ಉತ್ತರ ನೀಡಿಲ್ಲ.

ಪ್ರದರ್ಶಿಕೆ **3.2:** ನಿರ್ಮಾಣ ಪರಿತ್ಯಜಿಸಲಾದ ಅಂಗನವಾಡಿ ಕಟ್ಟಡ

ಬಡಜನಬಂಡಿ ಟಿ.ಕೆ.ಗೊಲ್ಲರಹಟ್ಟಿ






ಆಧಾರ: ಜಂಟಿ ಸ್ಥಳ ಪರಿಶೀಲನೆ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

## 3.6 ತಾಂತ್ರಿಕ ಮಂಜೂರಾತಿ

ಲೋಕೋಪಯೋಗಿ ಇಲಾಖಾ ಸಂಹಿತೆಯಲ್ಲಿ ಹೇಳಿರುವಂತೆ, 'ತಾಂತ್ರಿಕ ಮಂಜೂರಾತಿಯು ಸಕ್ಷಮ ಪ್ರಾಧಿಕಾರದ ಆದೇಶವಾಗಿದ್ದು, ಕೈಗೊಳ್ಳಲು ಉದ್ದೇಶಿಸಲಾದ ನಿರ್ಮಾಣ ಅಥವಾ ದುರಸ್ತಿ ಕಾಮಗಾರಿಯ ವೆಚ್ಚದ ವಿವರವಾದ ಅಂದಾಜುಪಟ್ಟಿಯನ್ನು ಮಂಜೂರು ಮಾಡುತ್ತದೆ'. ಸಾಮಾನ್ಯವಾಗಿ, ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ನಂತರ ಸರ್ಕಾರವು ಅಧಿಕಾರವನ್ನು ವಹಿಸಿಕೊಟ್ಟಂತಹ ಇಲಾಖಾ ಅಧಿಕಾರಿಗಳು ಮಾತ್ರವೇ ಅಂತಹ ಮಂಜೂರಾತಿಯನ್ನು ನೀಡಬಹುದು.

ಮಂಡಳಿಯ ನಿರ್ದೇಶನಗಳ ಪ್ರಕಾರ, ಅಂದಾಜುಪಟ್ಟಿಗಳ ತಯಾರಿ, ತಾಂತ್ರಿಕ ಪರಿಶೀಲನೆ ಮತ್ತು ತಾಂತ್ರಿಕ ಮಂಜೂರಾತಿಗಾಗಿ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯನ್ನು ಕೆಳಗಿನ **ಕೋಷ್ಟಕ 3.2**ರಲ್ಲಿ ನೀಡಲಾಗಿದೆ:

**ಕೋಷ್ಟಕ 3.2: ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆ**

| ಅಂದಾಜು ವೆಚ್ಚ | ಅಂದಾಜುಪಟ್ಟಿಗಳ ತಯಾರಿಕೆ | ಅಂದಾಜುಪಟ್ಟಿಗಳ ಪರಿಶೀಲನೆ | ತಾಂತ್ರಿಕ ಮಂಜೂರಾತಿ |
|---|---|---|---|
| ₹50 ಲಕ್ಷದವರೆಗೆ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ | ಕಾರ್ಯನಿರ್ವಾಹಕ ಇಂಜಿನಿಯರ್ | ಕಾರ್ಯನಿರ್ವಾಹಕ ಇಂಜಿನಿಯರ್ |
| ₹50.00 ಲಕ್ಷದಿಂದ ₹100.00 ಲಕ್ಷದವರೆಗೆ | | ಅಧೀಕ್ಷಕ ಇಂಜಿನಿಯರ್ | ಅಧೀಕ್ಷಕ ಇಂಜಿನಿಯರ್ |
| ₹100.00 ಲಕ್ಷದಿಂದ ₹200.00 ಲಕ್ಷದವರೆಗೆ | | ಮುಖ್ಯ ಇಂಜಿನಿಯರ್ | ಮುಖ್ಯ ಇಂಜಿನಿಯರ್ |
| ₹200.00 ಲಕ್ಷಕ್ಕೆ ಮೇಲ್ಪಟ್ಟು | | ಮುಖ್ಯ ಇಂಜಿನಿಯರ್ | ಉಪ ಸಮಿತಿ |

ಆಧಾರ: ಲೋಕೋಪಯೋಗಿ ಇಲಾಖಾ ಸಂಹಿತೆ

ಜೊತೆಗೆ, ಕೆಆರ್ಐಡಿಎಲ್ ಸ್ಥಾಯಿ ಆದೇಶಗಳು ಈ ಕೆಳಗಿನಂತೆ ನಿಗದಿಪಡಿಸುತ್ತವೆ.

- ಲೋಕೋಪಯೋಗಿ ಇಲಾಖೆ ಹೊರತುಪಡಿಸಿ ಸರ್ಕಾರಿ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು ಅಥವಾ ಇತರ ಸಂಸ್ಥೆಗಳು ವಹಿಸಿಕೊಡುವ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಕೆಆರ್ಐಡಿಎಲ್ ನೀಡುತ್ತದೆ (ಕಂಡಿಕೆ 17, ವಿಭಾಗ 5).
- ಅಂದಾಜುಪಟ್ಟಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಪಡೆದ ನಂತರ ಕಾಮಗಾರಿಗಳನ್ನು ಕಾರ್ಯಗತಗೊಳಿಸಬೇಕು (ಕಂಡಿಕೆ 18 ವಿಭಾಗ 5).

ಲೆಕ್ಕಪರಿಶೋಧನೆಯು ಈ ಕೆಳಗಿನವುಗಳನ್ನು ಗಮನಿಸಿದೆ:

### *3.6.1 ಉನ್ನತ ಹಂತದ ತಾಂತ್ರಿಕ ಮಂಜೂರಾತಿ ತಪ್ಪಿಸುವ ಸಲುವಾಗಿ ಅಂದಾಜುಪಟ್ಟಿಗಳನ್ನು ವಿಭಜಿಸಿರುವುದು*

ಪರೀಕ್ಷಾ–ತನಿಖೆ ಮಾಡಲಾದ ಮೂರು ಉಪ–ವಿಭಾಗಗಳಲ್ಲಿ[9] ಆರ್ಥಿಕ ಪ್ರತ್ಯಾಯೋಜನೆ ಅಧಿಕಾರವನ್ನು ಉಲ್ಲಂಘಿಸಿ ಅಂದಾಜುಪಟ್ಟಿಗಳನ್ನು ವಿಭಜಿಸಿರುವ ಪ್ರಕರಣಗಳನ್ನು ಗಮನಿಸಲಾಗಿದೆ. ಅನುಬಂಧ–**XI** (ಎ)ನಲ್ಲಿ ವಿವರಿಸಿರುವಂತೆ, ₹71 ಲಕ್ಷದಿಂದ ₹200 ಲಕ್ಷದವರೆಗಿನ ಮೌಲ್ಯದ ಏಳು ಕಾಮಗಾರಿಗಳ ಅಂದಾಜುಪಟ್ಟಿಗಳನ್ನು ₹2 ಲಕ್ಷದಿಂದ ₹100 ಲಕ್ಷಕ್ಕಿಂತ ಕಡಿಮೆ ವೆಚ್ಚದ 32 ಕಾಮಗಾರಿಗಳಾಗಿ ವಿಭಜಿಸಿರುವುದನ್ನು ಗಮನಿಸಲಾಗಿದೆ. ಅಂದಾಜುಪಟ್ಟಿಗಳ ವಿಭಜನೆಯು ಉನ್ನತ ಅಧಿಕಾರಿಗಳ ತಾಂತ್ರಿಕ ಮಂಜೂರಾತಿಯ ಅಗತ್ಯವನ್ನು ತಪ್ಪಿಸಿತು, ಮತ್ತು ಆ ಮೂಲಕ ನಿಗದಿತ ನಿಯಂತ್ರಣಗಳನ್ನು ದುರ್ಬಲಗೊಳಿಸಿತು.

ಕೆಆರ್‌ಐಡಿಎಲ್ ಅಂದಾಜುಪಟ್ಟಿಗಳನ್ನು (ಬಸವನಬಾಗೇವಾಡಿ ಉಪ–ವಿಭಾಗ) ವಿಭಜಿಸಿಲ್ಲ ಮತ್ತು ಕಾಮಗಾರಿ ವಹಿಸಿಕೊಡುವ ಸಂಸ್ಥೆಗಳಿಂದ ಪಡೆದ ಆಡಳಿತಾತ್ಮಕ ಆದೇಶಗಳ ಆಧಾರದ ಮೇಲೆ ಅಂದಾಜುಪಟ್ಟಿಗಳನ್ನು ಸಿದ್ಧಪಡಿಸಲಾಗಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ಅಂತಹ ಆದೇಶಗಳನ್ನು ಒದಗಿಸದ ಕಾರಣ ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಗಲಿಲ್ಲ. ಇತರೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉತ್ತರ ನೀಡಿಲ್ಲ.

ಇದಲ್ಲದೆ, ಪರೀಕ್ಷಾ–ತನಿಖೆ ಮಾಡಲಾದ 14 ಉಪ–ವಿಭಾಗಗಳಲ್ಲಿ, ಅನುಬಂಧ–**XI**(ಬಿ)ನಲ್ಲಿ ತೋರಿಸಿರುವಂತೆ, ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಅನುಸಾರ ಉಪ–ಸಮಿತಿಯು ನೀಡಬೇಕಿದ್ದ ತಾಂತ್ರಿಕ ಮಂಜೂರಾತಿಯ ಬದಲಿಗೆ ಸಿಇ ನೀಡಿದ ತಾಂತ್ರಿಕ ಮಂಜೂರಾತಿಯನ್ನು ಆಧರಿಸಿ ತಲಾ ₹2.00 ಕೋಟಿಗಿಂತ ಹೆಚ್ಚು ಮೌಲ್ಯದ 49 ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದೆ ಮತ್ತು ಪೂರ್ಣಗೊಳಿಸಲಾಗಿದೆ. ₹2.00 ಕೋಟಿಗೂ ಹೆಚ್ಚು ಮೌಲ್ಯದ ಕಾಮಗಾರಿಗಳನ್ನು ಉಪ–ಕಾಮಗಾರಿಗಳಾಗಿ ವಿಭಜಿಸಿರುವ ವಿಭಾಗಗಳ ಕ್ರಮವು ಉಪ–ಸಮಿತಿ ಸೇರಿದಂತೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಪಡೆಯುವುದನ್ನು ತಪ್ಪಿಸುವಲ್ಲಿ ಪರಿಣಮಿಸಿತು.

'ಚಿಕ್ಕಬಳ್ಳಾಪುರದ ಗೋಪಿನಾಥ ಸ್ವಾಮಿ ಬೆಟ್ಟದಲ್ಲಿ ರಸ್ತೆ ನಿರ್ಮಾಣ'ಕ್ಕೆ ಸಂಬಂಧಿಸಿದ ಕಾಮಗಾರಿಗೆ ಉಪಸಮಿತಿಯು ತಾಂತ್ರಿಕ ಮಂಜೂರಾತಿ ನೀಡಿದೆ' ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ನಿಯೋಜಿತ ಉಪಸಮಿತಿಯು ಕಾಮಗಾರಿ ಪೂರ್ಣಗೊಂಡ ನಂತರ ₹2.80 ಕೋಟಿ ಅಂದಾಜು ಮೊತ್ತಕ್ಕೆ ತಾಂತ್ರಿಕ ಮಂಜೂರಾತಿ ನೀಡಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### *3.6.2 ಕಾಲಮಿತಿಯ ಅನುಪಸ್ಥಿತಿ ಮತ್ತು ಅದರಿಂದಾಗಿ ತಾಂತ್ರಿಕ ಮಂಜೂರಾತಿ ನೀಡಿಕೆಯಲ್ಲಿ ವಿಳಂಬ*

ದಿನಾಂಕ 31.08.2009ರ ಅಧಿಸೂಚನೆಯ ಪ್ರಕಾರ (ಮಾಹಿತಿ ಹಕ್ಕು ಅಡಿಯಲ್ಲಿ ಸಾರ್ವಜನಿಕ ಅಧಿಕಾರಿಗಳ ಬಾಧ್ಯತೆ), ರಾಜ್ಯ ಸರ್ಕಾರವು ಟೆಂಡರ್‌ಗಳ 'ನೀಡಿಕೆ ಮತ್ತು ಒಪ್ಪಿಗೆ' ವಿಧಾನದಲ್ಲಿ ನಷ್ಟವಾಗುವ ಅಮೂಲ್ಯ ಸಮಯವನ್ನು ಉಳಿಸುವ ಸಲುವಾಗಿ ಸರ್ಕಾರಿ ಇಲಾಖೆ, ಮಂಡಳಿಗಳು, ನಿಗಮಗಳು ಮತ್ತು ಇತರ ಸ್ವಾಯತ್ತ ಸಂಸ್ಥೆಗಳಿಂದ ಕಾಮಗಾರಿಗಳನ್ನು ನೇರವಾಗಿ ವಹಿಸಿಕೊಳ್ಳಲು ಕೆಆರ್‌ಐಡಿಎಲ್‌ಗೆ ಅಧಿಕಾರ ನೀಡಿದೆ, ಅದರಂತೆ, ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸ್ವೀಕರಿಸಿದ ನಂತರ, ಕೆಆರ್‌ಐಡಿಎಲ್ ಶೀಘ್ರ ಸಮಯದಲ್ಲಿ ತಾಂತ್ರಿಕ ಮಂಜೂರಾತಿಗಳನ್ನು ನೀಡಬೇಕು.

19 ಉಪ–ವಿಭಾಗಗಳಲ್ಲಿ ಪರೀಕ್ಷಾ–ತನಿಖೆ ನಡೆಸಲಾದ 933 ಅಂದಾಜುಪಟ್ಟಿಗಳ ಪೈಕಿ 620 ಕಾಮಗಾರಿಗಳಿಗೆ (ಶೇಕಡ 66) ತಾಂತ್ರಿಕ ಮಂಜೂರಾತಿ ನೀಡುವಲ್ಲಿ ಕೆಆರ್‌ಐಡಿಎಲ್ ಒಂದು ತಿಂಗಳಿನಿಂದ

---

[9] ಬಸವನಬಾಗೇವಾಡಿ, ಕಲಬುರಗಿ–I, ಮತ್ತು ಕೂಡ್ಲಿಗಿ.

32 ತಿಂಗಳವರೆಗೆ ವಿಳಂಬ ಮಾಡಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ವಿಳಂಬದ ವ್ಯಾಪ್ತಿಯನ್ನು ಕೆಳಗಿನ ನಕ್ಷೆ **3.2**ರಲ್ಲಿ ತೋರಿಸಲಾಗಿದೆ:

**ನಕ್ಷೆ–3.2: ತಾಂತ್ರಿಕ ಮಂಜೂರಾತಿ ನೀಡುವಲ್ಲಿ ವಿಳಂಬ**




ಆಧಾರ: ಕೆಆರ್‌ಐಡಿಎಲ್ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಸಂಕಲಿಸಿರುವುದು

ತಾಂತ್ರಿಕ ಮಂಜೂರಾತಿ ನೀಡುವಿಕೆಯಲ್ಲಿನ ವಿಳಂಬವು ಕಾಮಗಾರಿಗಳ ಆರಂಭ ಮತ್ತು ಪೂರ್ಣಗೊಳಿಸುವಿಕೆಯ ವಿಳಂಬದಲ್ಲಿ ಪರಿಣಮಿಸಿ, ಕೆಟಿಪಿಪಿ ಕಾಯ್ದೆಯ 4(ಜಿ) ಅಡಿಯಲ್ಲಿ ಕಾಮಗಾರಿಗಳನ್ನು ವಹಿಸಿಕೊಡುವ ಉದ್ದೇಶವನ್ನು ವಿಫಲಗೊಳಿಸುತ್ತದೆ.

ಇದನ್ನು ಗಮನಕ್ಕೆ ತಂದಾಗ, ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿಕೆ ಮತ್ತು ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಹಣ ಬಿಡುಗಡೆಯಾದ ನಂತರವೇ ತಾಂತ್ರಿಕ ಮಂಜೂರಾತಿ ನೀಡಲಾಗುವುದು ಎಂದು ಉತ್ತರಿಸಿದೆ. ನಿವೇಶನ ಹಸ್ತಾಂತರ/ಹಣ ಬಿಡುಗಡೆಯ ವಿಳಂಬ ಮತ್ತು ಮಣ್ಣು ಪರೀಕ್ಷಾ ವರದಿಗಳು, ರೇಖಾಚಿತ್ರಗಳ ಸಲ್ಲಿಕೆಯಲ್ಲಿನ ವಿಳಂಬ, ನಿವೇಶನ ಸಮಸ್ಯೆಗಳು ಮುಂತಾದ ಕಾರಣಗಳಿಂದ ತಾಂತ್ರಿಕ ಮಂಜೂರಾತಿಯ ನೀಡಿಕೆಯಲ್ಲಿ ವಿಳಂಬವಾಗಬಹುದು ಎಂದೂ ಹೇಳಿದೆ. ಅಂತಹ ಕಾಮಗಾರಿಗಳಿಗೆ ಅಂದಾಜುಪಟ್ಟಿಗಳನ್ನು ಸ್ವತಃ ಕೆಆರ್‌ಐಡಿಎಲ್ ನಿವೇಶನದ ನೈಜ ಸ್ಥಿತಿಗಳ ಆಧಾರದ ಮೇಲೆ ಸಿದ್ಧಪಡಿಸಿದೆಯಾದ್ದರಿಂದ ಉತ್ತರವು ಸಮರ್ಥನೀಯವಾಗಿಲ್ಲ.

### *3.6.3 ತಾಂತ್ರಿಕ ಮಂಜೂರಾತಿ ಇಲ್ಲದೆ/ಮೊದಲು ಕಾಮಗಾರಿಗಳ ಆರಂಭಿಸಿರುವುದು*

ಪರೀಕ್ಷಾ–ತನಿಖೆ ನಡೆಸಲಾದ ಒಂದು ಉಪ–ವಿಭಾಗದಲ್ಲಿ (ಗದಗ) ₹4.25 ಕೋಟಿ ಮೊತ್ತದ ನಾಲ್ಕು ಕಾಮಗಾರಿಗಳನ್ನು, ಸ್ಥಾಯಿ ಆದೇಶವನ್ನು ಉಲ್ಲಂಘಿಸಿ, ತಾಂತ್ರಿಕ ಮಂಜೂರಾತಿಯನ್ನು ಪಡೆಯದೆಯೇ ಆರಂಭಿಸಲಾಗಿತ್ತು (ಫೆಬ್ರವರಿ 2022) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಇದಲ್ಲದೆ, ಪರೀಕ್ಷಾ–ತನಿಖೆ ನಡೆಸಲಾದ 20 ಉಪ–ವಿಭಾಗಗಳಲ್ಲಿ, **ಅನುಬಂಧ–XII**ರಲ್ಲಿ ವಿವರಿಸಿರುವಂತೆ, ₹180.05 ಕೋಟಿ ಮೌಲ್ಯದ 160 ಕಾಮಗಾರಿಗಳನ್ನು ತಾಂತ್ರಿಕ ಮಂಜೂರಾತಿ ಪಡೆಯುವ ಮೊದಲೇ ಆರಂಭಿಸಿ, ಆ ನಂತರ ಮಂಜೂರಾತಿಯನ್ನು ಪಡೆಯಲಾಗಿದೆ.

ತಾಂತ್ರಿಕ ಮಂಜೂರಾತಿ ಪಡೆಯದೆಯೇ ಮತ್ತು ಪಡೆಯುವ ಮುನ್ನವೇ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದು ತಾಂತ್ರಿಕ ಪರಿಶೀಲನೆಯ ಪಾವಿತ್ರ್ಯತೆಯನ್ನು ಶೂನ್ಯಗೊಳಿಸಿತು ಮತ್ತು ಇದರಿಂದ ಅಂದಾಜುಪಟ್ಟಿಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಸಾಧ್ಯವಾಗಲಿಲ್ಲ.

ಇದನ್ನು ಗಮನಕ್ಕೆ ತಂದಾಗ, ಕ್ಷೇತ್ರಾಧಿಕಾರಿಗಳು ಸಾಮಾನ್ಯವಾಗಿ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಇಲ್ಲದೆ ಕಾಮಗಾರಿ ಆರಂಭಿಸುವುದಿಲ್ಲ ಎಂದು ಉತ್ತರಿಸಲಾಗಿದೆ. ಅನಿವಾರ್ಯ

ಸಂದರ್ಭಗಳಲ್ಲಿ ಉಪ–ವಿಭಾಗಾಧಿಕಾರಿಗಳು ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿಯ ನಿರೀಕ್ಷೆಯಲ್ಲಿ ಕಾಮಗಾರಿ ಆರಂಭಿಸಬೇಕಿದ್ದು, ಬಳಿಕ ತಾಂತ್ರಿಕ ಮಂಜೂರಾತಿ ಪಡೆಯಲಾಗಿದೆ.

ತಾಂತ್ರಿಕ ಮಂಜೂರಾತಿಗೂ ಮುನ್ನವೇ ಕಾಮಗಾರಿ ಆರಂಭಿಸಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ. ಸಂಹಿತೆಯ ನಿಯಮಗಳ ಅಂತಹ ಉಲ್ಲಂಘನೆಯಿಂದಾಗಿ ದೋಷಯುಕ್ತ ರೇಖಾಚಿತ್ರಗಳು ಮತ್ತು ವಿನ್ಯಾಸಗಳು, ರಚನಾತ್ಮಕ ಅವಶ್ಯಕತೆಗಳು ಇತ್ಯಾದಿಗಳ ಅಳವಡಿಕೆಯಿಂದ ನಿರ್ಮಾಣದಲ್ಲಿ ತಪ್ಪುಗಳುಂಟಾಗುವ ಸಂಭಾವ್ಯ ಅಪಾಯವನ್ನು ಹೊಂದಿರುವುದನ್ನು ಈ ಕೆಳಗಿನ ನಿದರ್ಶನದಿಂದ ಸ್ಪಷ್ಟವಾಗುತ್ತದೆ. ತಾಂತ್ರಿಕ ಮಂಜೂರಾತಿ ಪಡೆಯದ ನಾಲ್ಕು ಕಾಮಗಾರಿಗಳ ಬಗ್ಗೆ ಉತ್ತರಗಳು ಮೌನವಾಗಿವೆ.

**ನಿದರ್ಶನ**

ಚಿಕ್ಕಬಳ್ಳಾಪುರ ಉಪ–ವಿಭಾಗದಿಂದ ತಾಂತ್ರಿಕ ಮಂಜೂರಾತಿ ಇಲ್ಲದೆಯೇ ಕಾಮಗಾರಿ ನಿರ್ವಹಣೆ: ಚಿಕ್ಕಬಳ್ಳಾಪುರದ ಜಿಲ್ಲಾಧಿಕಾರಿ ಮತ್ತು ಕೆನರಾ ಬ್ಯಾಂಕ್ (ಪ್ರಾಯೋಜಕ ಸಂಸ್ಥೆ) ನಡುವೆ ಒಂದು ತಿಳುವಳಿಕೆ ಒಪ್ಪಂದವನ್ನು ಮಾಡಿಕೊಳ್ಳಲಾಯಿತು (ಜುಲೈ 2015), ಅದರಂತೆ ನಿರ್ಮಾಣ ಹಂತದಲ್ಲಿದ್ದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಳ್ಳಾಪುರ ಇದರ ಮೊದಲನೆಯ ಮಹಡಿಯಲ್ಲಿ ಐದು ಪ್ರಯೋಗಾಲಯಗಳು ಮತ್ತು ಒಂದು ಬಹುಪಯೋಗಿ ಸಭಾಂಗಣ ನಿರ್ಮಾಣಕ್ಕೆ ಔದ್ಯಮಿಕ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಪ್ರಾಯೋಜಕ ಸಂಸ್ಥೆಯು ₹1.44 ಕೋಟಿ ನೆರವು ನೀಡುವ ಔಪಚಾರಿಕವಾಗಿ ಒಪ್ಪಿಕೊಂಡಿತ್ತು. ಅನುಮೋದಿತ ಯೋಜನೆಗೆ ವಿರುದ್ಧವಾಗಿ, ಉಪ–ವಿಭಾಗವು ಸಂಬಂಧಪಟ್ಟ ಸಿಇ ಅವರಿಂದ ತಾಂತ್ರಿಕ ಮಂಜೂರಾತಿಯನ್ನು ಪಡೆಯದೆಯೇ ಕಾಮಗಾರಿಯನ್ನು ಆರಂಭಿಸಿತು ಮತ್ತು ₹34.65 ಲಕ್ಷ ವೆಚ್ಚ ಮಾಡಿತು (ಮಾರ್ಚ್ 2016).

ಪ್ರಾಯೋಜಕ ಸಂಸ್ಥೆಯಿಂದ ಹಣ ಬಿಡುಗಡೆಯಾಗದಿದ್ದರೂ ಮತ್ತು ತಾಂತ್ರಿಕ ಮಂಜೂರಾತಿ ಪಡೆಯದಿದ್ದರೂ ಉಪ–ವಿಭಾಗವು ಕಾಮಗಾರಿಯನ್ನು ಆರಂಭಿಸಿ, ಇತರ ಯೋಜನೆಗಳ ಕಾಮಗಾರಿಗಳಿಗಾಗಿ ಮೀಸಲಿಟ್ಟ ಹಣದಲ್ಲಿ, ಮಾರ್ಚ್ 2016ರ ವೇಳಗಾಗಲೇ ₹34.65 ಲಕ್ಷ ವೆಚ್ಚಮಾಡಿತ್ತು. ಮತ್ತು ಆ ಕಾಮಗಾರಿಯ ಬಿಲ್‌ಗಳು ಸ್ಥಾಯಿ ಆದೇಶಗಳಗೆ ವ್ಯತಿರಿಕ್ತಾಗಿದ್ದರೂ ಸಹ, ಮಾಸಿಕ ರನ್ನಿಂಗ್ ಅಕೌಂಟ್ ಮೂಲಕ ಕೇಂದ್ರ ಕಛೇರಿಯಲ್ಲಿ ಅಂಗೀಕರಿಸಲಾಗಿದೆ. ಜಿಲ್ಲಾಧಿಕಾರಿಯಿಂದ ಅನುಮೋದಿತವಾದ ಯೋಜನೆಯನ್ನು ಸಲ್ಲಿಸದ ಕಾರಣ ಪ್ರಾಯೋಜಕ ಸಂಸ್ಥೆಯು ಔದ್ಯಮಿಕ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿ ಹಣವನ್ನು ಬಿಡುಗಡೆ ಮಾಡದ ಕಾರಣ ಯೋಜನೆಯು ಸ್ಥಗಿತಗೊಂಡಿತು ಮತ್ತು ಕಾಮಗಾರಿಯಲ್ಲಿ ಐದು ವರ್ಷಗಳಿಗಿಂತ ಹೆಚ್ಚು ಕಾಲದಿಂದಲೂ ಯಾವುದೇ ಪ್ರಗತಿಯನ್ನು ಮಾಡಲಾಗಿಲ್ಲ. ಮೇಲಿನ ನ್ಯೂನತೆಗಳು ಗಮನಕ್ಕೆ ಬಂದ ನಂತರ ಕೆಆರ್‌ಐಡಿಎಲ್ ಸಂಬಂಧಿಸಿದ ಇಂಜಿನಿಯರ್‌ಗಳ ವಿರುದ್ಧ ಶಿಸ್ತು ಕ್ರಮವನ್ನು ಪ್ರಾರಂಭಿಸಿತು ಮತ್ತು ಮೇಲಿನ ವೆಚ್ಚದ ವಸೂಲಾತಿಗೆ ಆದೇಶಿಸಿತು. ಕೆಆರ್‌ಐಡಿಎಲ್ ಆ ಅಧಿಕಾರಿಗಳಿಂದ ಇದುವರೆಗೆ ₹3.00 ಲಕ್ಷ ವಸೂಲಿ ಮಾಡಿದೆ.

ಪ್ರಾಯೋಜಕ ಸಂಸ್ಥೆಯಿಂದ ಹಣ ಪಡೆಯಲು ಜಿಲ್ಲಾಧಿಕಾರಿಗಳ ಮೂಲಕ ಪ್ರಯತ್ನಿಸಲಾಗುತ್ತಿದೆ ಎಂದು ಉತ್ತರಿಸಲಾಗಿದೆ. ಐದು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಕಾಮಗಾರಿ ಪರಿತ್ಯಕ್ತ ಸ್ಥಿತಿಯಲ್ಲಿರುವುದರಿಂದ ಮತ್ತು ಕಾಮಗಾರಿಯ ಮರುಪ್ರಾರಂಭವು ಸಂದೇಹಾಸ್ಪದ ಆಗಿರುವುದರಿಂದ ಉತ್ತರವು ಅಂಗೀಕಾರಾರ್ಹವಾಗಿಲ್ಲ.

# ಅಧ್ಯಾಯ IV
# ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ



## ಅಧ್ಯಾಯ 4 – ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ

ಸ್ಥಾಯಿ ಆದೇಶಗಳ ಅನುಸಾರ ಅಗತ್ಯವಿದ್ದಂತೆ, ಉಪ–ವಿಭಾಗಗಳು ಕಾಮಗಾರಿ ಚಟುವಟಿಕೆ ನಕ್ಷೆ, ಸರಕು ಸಾಮಗ್ರಿ ಖರೀದಿಗಳನ್ನು ಸೂಕ್ತವಾಗಿ ಯೋಜಿಸದ ಕಾರಣದಿಂದಾಗಿ ಕಾಮಗಾರಿಗಳ ಅನುಷ್ಠಾನದಲ್ಲಿ ಹೆಚ್ಚಿನ ವಿಳಂಬಗಳಿದ್ದುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬಿಬಿಎಂಪಿಯಿಂದ ವಹಿಸಲಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಔಪಚಾರಿಕ ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತಾದ್ದರಿಂದ ವಿಳಂಬಗಳು ಕಡಿಮೆ ಇದ್ದವು. ಹಣದ ಲಭ್ಯತೆಯ ಹೊರತಾಗಿಯೂ ಕಾಮಗಾರಿಗಳನ್ನು ಆರಂಭಿಸುವಲ್ಲಿ ಒಂದು ತಿಂಗಳಿನಿಂದ 24 ತಿಂಗಳುಗಳವರೆಗಿನ ವಿಳಂಬಗಳಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕೆಆರ್‌ಐಡಿಎಲ್ ಯಂತ್ರೋಪಕರಣಗಳು/ಸಲಕರಣೆಗಳನ್ನು ಬಾಡಿಗೆಗೆ ಪಡೆಯದೆಯೇ ಅಥವಾ ಖರೀದಿಸದೆಯೇ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದು ಮತ್ತು ಗುಂಪು ನಾಯಕರುಗಳ ಮೇಲೆ ಅವಲಂಬಿತವಾಗಿದ್ದುದು, ಕಾಮಗಾರಿಗಳನ್ನು ಉಪ–ಗುತ್ತಿಗೆ ಕೊಟ್ಟಿರುವುದನ್ನು ಸೂಚಿಸುತ್ತದೆ. ಕಾರ್ಮಿಕರ ನೇಮಕದಲ್ಲಿ ಪಾರದರ್ಶಕತೆ ಇರಲಿಲ್ಲ ಮತ್ತು ಗ್ರಾಮೀಣ ಯುವಕರಿಗೆ ಉದ್ಯೋಗ ಒದಗಿಸುವ ಮತ್ತು ಮಧ್ಯವರ್ತಿಗಳನ್ನು ತೊಡೆದುಹಾಕುವ ಉದ್ದೇಶವನ್ನು ವಿಫಲಗೊಳಿಸಿ ಗುಂಪು ನಾಯಕರುಗಳಿಗೆ ಪಾವತಿಗಳನ್ನು ಮಾಡಲಾಗಿದೆ. ಹೊರಗುತ್ತಿಗೆ ಸಿಬ್ಬಂದಿ, ಎಇಇಗಳನ್ನು ಗುಂಪು ನಾಯಕರುಗಳು ಎಂದು ಪರಿಗಣಿಸಿ ಅವರಿಗೆ ಹಣ ಪಾವತಿ ಮಾಡಲಾಗಿದೆ. ಪರೀಕ್ಷಾ–ತನಿಖೆ ನಡೆಸಲಾದ ಗುಂಪು ನಾಯಕರುಗಳ ಜಿಎಸ್‌ಟಿ/ಟಿನ್ ಸ್ಥಾನಮಾನದಿಂದ ಅವರುಗಳ ವ್ಯವಹಾರದ ಸ್ವರೂಪವು 'ಕಾಮಗಾರಿ ಗುತ್ತಿಗೆ' ಮತ್ತು ಲೋಕೋಪಯೋಗಿ ಇಲಾಖೆಯ ವರ್ಗ–I ಗುತ್ತಿಗೆದಾರರು ಎಂಬುದು ತಿಳಿದುಬಂದಿತು. ಹೀಗಾಗಿ, ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ನಾಮನಿರ್ದೇಶನದ ಆಧಾರದ ಮೇಲೆ ಈ ಗುಂಪು ನಾಯಕರುಗಳನ್ನು ತೊಡಗಿಸಿಕೊಂಡಿರುವುದು ಉಪ–ಗುತ್ತಿಗೆಯ ಸ್ವರೂಪದಲ್ಲಿದೆ ಮತ್ತು ಸಮರ್ಥನೀಯವಾಗಿಲ್ಲ.

ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಗುಂಪು ನಾಯಕರುಗಳನ್ನು ತೊಡಗಿಸಿಕೊಂಡಿರುವುದು ಕೆಆರ್‌ಐಡಿಎಲ್‌ಗೆ ವಹಿಸಿಕೊಟ್ಟ ಕಾಮಗಾರಿಗಳು ಪಾರದರ್ಶಕತೆಯ ಕಾನೂನುಗಳಿಂದ ನುಣುಚಿಕೊಂಡಿವೆ ಎಂಬುದನ್ನು ಸೂಚಿಸುತ್ತದೆ ಮತ್ತು ಗುಂಪು ನಾಯಕರುಗಳು ನೇಮಿಸಿಕೊಂಡ ಕೂಲಿಯಾಳುಗಳಿಗೆ ಮಾಡಿದ ಪಾವತಿಗಳು ದಾಖಲೆಗಳಲ್ಲಿಲ್ಲ, ಹೀಗಾಗಿ ಕೆಆರ್‌ಐಡಿಎಲ್‌ನ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗಿಲ್ಲ

ಕೆಆರ್‌ಐಡಿಎಲ್ ವಿವಿಧ ಸರ್ಕಾರಿ ಇಲಾಖೆಗಳ ಕಾಮಗಾರಿಗಳನ್ನು ನಿರ್ವಹಿಸುತ್ತದೆ ಮತ್ತು ಅದಕ್ಕೆ ವಹಿಸಿಕೊಟ್ಟಿರುವ ಕಾಮಗಾರಿಗಳನ್ನು ಸಮರ್ಥವಾಗಿ, ಪರಿಣಾಮಕಾರಿಯಾಗಿ ಮತ್ತು ಮಿತವ್ಯಯಕರವಾಗಿ ಕಾರ್ಯಗತಗೊಳಿಸುವುದನ್ನು ಖಚಿತಪಡಿಸಿಕೊಳ್ಳುವುದು ಕೆಆರ್‌ಐಡಿಎಲ್‌ನ ಜವಾಬ್ದಾರಿಯಾಗಿದೆ.

ಕಾರ್ಯಗತಗೊಳಿಸುವಿಕೆ ಪ್ರಕ್ರಿಯೆಯ ಕಾರ್ಯಹರಿವನ್ನು **ನಕ್ಷೆ 4.1**ರಲ್ಲಿ ತೋರಿಸಲಾಗಿದೆ

**ನಕ್ಷೆ 4.1: ಕಾರ್ಯಗತಗೊಳಿಸುವಿಕೆ ಪ್ರಕ್ರಿಯೆಯ ಕಾರ್ಯಹರಿವು**




## 4.1 ಕಾಮಗಾರಿಗಳ ಯೋಜನೆ

### *4.1.1 ಕೆಆರ್ಐಡಿಎಲ್‌ನಲ್ಲಿ ಯೋಜನಾ ಕಾರ್ಯವ್ಯವಸ್ಥೆಯ ಅನುಪಸ್ಥಿತಿ*

ಸ್ಥಾಯಿ ಆದೇಶಗಳ ವಿವಿಧ ನಿಬಂಧನೆಗಳು ವ್ಯವಸ್ಥಿತವಾದ ಕಾರ್ಯವಿಧಾನವನ್ನು ರೂಪಿಸಿವೆ, ಅವುಗಳೆಂದರೆ ಕೇಂದ್ರ ಕಛೇರಿಯು ಆದ್ಯತೆಗಳು, ಕಾರ್ಯಭಾರದ ಒತ್ತಡ ಮತ್ತು ಪೂರ್ಣಗೊಳಿಸಬೇಕಾದ ದಿನಾಂಕವನ್ನು ಕ್ರಮಬದ್ಧವಾಗಿ ಸೂಚಿಸಿ ಯೋಜನೆ ರೂಪಿಸುವುದು, ಉಪ–ವಿಭಾಗೀಯ ಕಛೇರಿಗಳು ಕಾಮಗಾರಿ ಚಟುವಟಿಕೆ ನಕ್ಷೆ ಮತ್ತು ಖರೀದಿ ಯೋಜನೆ ರೂಪಿಸುವುದನ್ನು ಮತ್ತು ವಹಿಸಲಾದ ಕಾಮಗಾರಿಗಳನ್ನು ಸಮಯೋಚಿತವಾಗಿ ಕಾರ್ಯಗತಗೊಳಿಸುವುದು ಮತ್ತು ಪೂರ್ಣಗೊಳಿಸುದನ್ನು ಮೇಲ್ವಿಚಾರಣೆ ಮಾಡುವುದು.

ಲೆಕ್ಕಪರಿಶೋಧನೆಯು ಗಮನಿಸಿದಂತೆ ಕೇಂದ್ರ ಕಛೇರಿಯು ಪ್ರತಿ ಕಾಮಗಾರಿಗೂ ಆದ್ಯತೆಗಳು ಮತ್ತು ಪೂರ್ಣಗೊಳಿಸಬೇಕಾದ ದಿನಾಂಕವನ್ನು ನಿಗದಿಪಡಿಸಿಲ್ಲ. ಪರೀಕ್ಷೆ–ತನಿಖೆ ನಡೆಸಲಾದ ವಿಭಾಗಗಳು/ಉಪ–ವಿಭಾಗಗಳು ಅಗತ್ಯವಿದ್ದ ವಿವರವಾದ ಕಾಮಗಾರಿ ಕಾರ್ಯಗತ ಯೋಜನೆ, ಕಾಮಗಾರಿ ಚಟುವಟಿಕೆ ನಕ್ಷೆಗಳು ಮತ್ತು ಸಾಮಗ್ರಿ ಖರೀದಿ ಯೋಜನೆಗಳನ್ನು ತಯಾರಿಸಲು ವಿಫಲವಾಗಿದ್ದವು. ಎಲ್ಲಾ ರೀತಿಯ ಮತ್ತು ವಿಶ್ವಾಸಾರ್ಹ ದತ್ತಾಂಶವನ್ನು ಒದಗಿಸುವ ಗುರಿಯನ್ನು ಹೊಂದಿದ್ದ ಪಿಎಮ್ಎಸ್, ಮಾಹಿತಿ ದಾಖಲಿಸುವುದರಲ್ಲಿ ಅಸಮರ್ಪಕವಾಗಿರುವುದರಿಂದ ವಿವಿಧ ಹಂತಗಳ ಮೇಲ್ವಿಚಾರಣಾ ಸಾಧನವಾಗದೇ ವಿಫಲವಾಗಿದೆ.

ಆದ್ಯತೆಯ ಕಾಮಗಾರಿಗಳಿಗಾಗಿ ಕಾಮಗಾರಿ ಚಟುವಟಿಕೆ ನಕ್ಷೆಯನ್ನು ಸಿದ್ಧಪಡಿಸಲಾಗುತ್ತಿದೆ ಮತ್ತು ಸಾಮಗ್ರಿಗಳ ಅವಶ್ಯಕತೆಗಳನ್ನು ಮುಂಚಿತವಾಗಿ ಅಂದಾಜಿಸುವುದರ ಜೊತೆಗೆ ಕಾಮಗಾರಿ ಚಟುವಟಿಕೆ ನಕ್ಷೆಯ ಪ್ರಕಾರವೇ ಅಂತಹ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗುತ್ತದೆ ಎಂದು ರಾಜ್ಯ ಸರ್ಕಾರವು

ಹೇಳಿದೆ. ಪರೀಕ್ಷೆ-ತನಿಖೆ ನಡೆಸಲಾದ ಉಪ-ವಿಭಾಗಗಳು ಕಾಮಗಾರಿ ಚಟುವಟಿಕೆ ನಕ್ಷೆ ಮತ್ತು ಸಾಮಗ್ರಿಗಳ ಅಗತ್ಯತೆಯ ಪುರಾವೆಯಾಗಿ ಬೇಡಿಕೆ ಪತ್ರಗಳನ್ನು ಒದಗಿಸಲು ವಿಫಲವಾದ ಕಾರಣ ಉತ್ತರವು ಸಮರ್ಥನೀಯವಾಗಿಲ್ಲ.

### *4.1.2 ಕಾಮಗಾರಿಗಳ ಆರಂಭದಲ್ಲಿ ವಿಳಂಬ*

21 ಆಯ್ದ ಉಪ-ವಿಭಾಗಗಳಲ್ಲಿ ಪರೀಕ್ಷಾ-ತನಿಖೆ ನಡೆಸಲಾದ ಕಾಮಗಾರಿಗಳ ಲೆಕ್ಕಪರಿಶೋಧನೆಯು ಆಡಳಿತಾತ್ಮಕ ಅನುಮೋದನೆ/ತಾಂತ್ರಿಕ ಮಂಜೂರಾತಿ, ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಹಣದ ಬಿಡುಗಡೆಯ ದಿನಾಂಕ, ಮತ್ತು ಉಪ-ವಿಭಾಗಗಳು ಹಣ ಸ್ವೀಕರಿಸಿದ ದಿನಾಂಕ, ಇವುಗಳಲ್ಲಿ ಯಾವುದು ನಂತರವೋ ಆ ದಿನಾಂಕದಿಂದ, 489 ಕಾಮಗಾರಿಗಳನ್ನು ಆರಂಭ ಮಾಡುವಲ್ಲಿ ವಿಳಂಬ ಮಾಡಲಾಗಿದೆ ಎಂಬುದನ್ನು ಗಮನಿಸಿತು.

ಕೆಳಗಿನ **ನಕ್ಷೆ 4.2**ರಲ್ಲಿ ತೋರಿಸಿರುವಂತೆ, ಕಾಮಗಾರಿ ಆರಂಭಿಸುವಲ್ಲಿನ ವಿಳಂಬವು[10] ಒಂದು ತಿಂಗಳಿನಿಂದ 66 ತಿಂಗಳುಗಳ ವ್ಯಾಪ್ತಿಯಲ್ಲಿತ್ತು. ವಿವರಗಳನ್ನು **ಅನುಬಂಧ-XIII**ರಲ್ಲಿ ನೀಡಲಾಗಿದೆ.

**ನಕ್ಷೆ 4.2: ಕಾಮಗಾರಿಗಳನ್ನು ಆರಂಭಿಸುವಲ್ಲಿನ ವಿಳಂಬ**




ಆಧಾರ: ಕೆಆರ್‌ಐಡಿಎಲ್ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಸಂಕಲಿಸಿರುವುದು

ಕಾಮಗಾರಿಗಳ ಆರಂಭದಲ್ಲಿನ ವಿಳಂಬವು ಟೆಂಡರ್‌ನ 'ನೀಡಿಕೆ ಮತ್ತು ಸ್ವೀಕಾರ'ದಲ್ಲಿ ವ್ಯರ್ಥವಾಗುವ ಅಮೂಲ್ಯ ಸಮಯವನ್ನು ಉಳಿಸುವ ಸಲುವಾಗಿ ಕೆಆರ್‌ಐಡಿಎಲ್‌ಗೆ (ಕೆಟಿಪಿಪಿ ಕಾಯ್ದೆಯ 4 (ಜಿ) ವಿನಾಯಿತಿ ಅಡಿಯಲ್ಲಿ) ಕಾಮಗಾರಿಗಳನ್ನು ವಹಿಸುವ ಉದ್ದೇಶವನ್ನು ವಿಫಲಗೊಳಿಸಿತು. ಜೊತೆಗೆ, ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕಾಮಗಾರಿ ವಹಿಸಿದ ಸಂಸ್ಥೆಗಳು ಕೆಆರ್‌ಐಡಿಎಲ್‌ನೊಂದಿಗೆ ಸರಿಯಾಗಿ ವ್ಯವಹರಿಸಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಆಡಳಿತಾತ್ಮಕ ಅನುಮೋದನೆ/ತಾಂತ್ರಿಕ ಮಂಜೂರಾತಿ/ ಕಾಮಗಾರಿ ವಹಿಸಿದ ಸಂಸ್ಥೆಗಳಿಂದ ಹಣ ಬಿಡುಗಡೆ/ಹಸ್ತಾಂತರದಲ್ಲಿ ವಿಳಂಬ/ಸಾರ್ವಜನಿಕರು/ಸ್ಥಳೀಯರು ಅಡ್ಡಿಪಡಿಸಿರುವುದು ವಿಳಂಬಕ್ಕೆ ಕಾರಣಗಳು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ಮೇಲಿನ ಎಲ್ಲಾ ಪರಿಸ್ಥಿತಿಗಳನ್ನು ಪರಿಗಣಿಸಿದ ನಂತರವೇ ಲೆಕ್ಕಪರಿಶೋಧನೆಯು ವಿಳಂಬದ ಲೆಕ್ಕಾಚಾರ ಮಾಡಿರುವುದರಿಂದ ಉತ್ತರವು

[10] ಉಪವಿಭಾಗಗಳ ಮೂಲಕ ಹಣವನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳಿಗಿಂತ ಹೆಚ್ಚು ವಿಳಂಬವನ್ನು ಪರಿಗಣಿಸಲಾಗಿದೆ.

ಸಮರ್ಥನೀಯವಾಗಿಲ್ಲ. ಇದಲ್ಲದೆ, ಹಸ್ತಾಂತರದಲ್ಲಿನ ವಿಳಂಬ ಮತ್ತು ಸಾರ್ವಜನಿಕರು/ ಸ್ಥಳೀಯರಿಂದ ಅಡೆತಡೆಯ ವಿವರಗಳು ದಾಖಲೆಯಲ್ಲಿಲ್ಲ.

### *4.1.3 ಘಟಕ/ಉಪಕರಣಗಳ ಅಲಭ್ಯತೆ ಮತ್ತು ಕಾಮಗಾರಿಗಳ ಕಾರ್ಯಗತಗೊಳಿಸಲು ಕೂಲಿಯಾಳುಗಳ ನೇಮಕದಲ್ಲಿ ಪಾರದರ್ಶಕತೆ ಇಲ್ಲದಿರುವುದು – ಉಪಗುತ್ತಿಗೆ ಮೂಲಕ ಕಾಮಗಾರಿಗಳ ಸಂಭವನೀಯ ಕಾರ್ಯಗತಗೊಳಿಸಿರುವಿಕೆ*

ಸಾಮಗ್ರಿಗಳ ಪರಿಮಾಣ, ಕೂಲಿಯಾಳುಗಳು (ಕುಶಲ ಮತ್ತು ಕೌಶಲ್ಯರಹಿತ), ಇತರೆ ವೆಚ್ಚಗಳು, ಯಂತ್ರೋಪಕರಣಗಳು, ಸುಂಕಗಳು, ತೆರಿಗೆಗಳು ಮತ್ತು ಗುತ್ತಿಗೆದಾರರ ಲಾಭವನ್ನು ಒಳಗೊಂಡಿರುವ ದರಪಟ್ಟಿಗಳ ಬಾಬ್ತುಗಳ ದರವನ್ನು ಕೆಆರ್ಐಡಿಎಲ್ ಮೂಲಬೆಲೆಯಾಗಿ ಅಳವಡಿಸಿಕೊಂಡಿತ್ತು. ಮೂಲಬೆಲೆಯಿಂದ, ಕಾಮಗಾರಿಯಲ್ಲಿನ ಉಳಿತಾಯ (ಬಿಬಿಎಂಪಿಯೇತರ ಕಾಮಗಾರಿಗಳಲ್ಲಿ ಶೇಕಡಾ 10 ಮತ್ತು ಬಿಬಿಎಂಪಿಯ ಕಾಮಗಾರಿಗಳಲ್ಲಿ ಶೇಕಡಾ 5 ಕೆಆರ್ಐಡಿಎಲ್‌ನ ಲಾಭಾಂಶ) ಕಳೆದು ಗುಂಪು ನಾಯಕರನ್ನು ನೇಮಿಸಿಕೊಂಡು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ದರಗಳನ್ನು ಲೆಕ್ಕ ಹಾಕಲಾಗುತ್ತದೆ.

ಸ್ಥಾಯಿ ಆದೇಶಗಳ ಅನುಸಾರ, ಉಪ–ವಿಭಾಗಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಅವಶ್ಯವಿದ್ದ ಡೀಸೆಲ್ ರೋಡ್ ರೋಲರ್‌ಗಳು, ಕಂಪ್ರೆಸರ್‌ಗಳು, ಕಾಂಕ್ರೀಟ್ ಮಿಕ್ಸರ್‌ಗಳು, ವೈಬ್ರೇಟರ್‌ಗಳು, ನೀರಿನ ಟ್ಯಾಂಕರ್‌ಗಳು, ಲಾರಿಗಳು ಮುಂತಾದ ಉಪಕರಣ ಮತ್ತು ಸಲಕರಣೆಗಳನ್ನು ಕೇಂದ್ರ ಕಛೇರಿಯೇ ಒದಗಿಸಬೇಕಾಗಿತ್ತು.

ಮೇಲಿನವುಗಳನ್ನು ಹೊರತುಪಡಿಸಿ ಜೊತೆಗೆ, ಇಇ/ಎಇಇ ಇವರುಗಳು ಗುಂಪು ನಾಯಕರುಗಳನ್ನು ನೇಮಿಸಿಕೊಂಡು ಕಾಮಗಾರಿಯನ್ನು ಕಾರ್ಯಗತಗೊಳಿಸಲು ಅಗತ್ಯವಿದ್ದ ಕೂಲಿಯಾಳುಗಳನ್ನು ಅಂದಾಜಿಸಬೇಕಿತ್ತು ಮತ್ತು ವ್ಯವಸ್ಥೆ ಮಾಡಬೇಕಿತ್ತು ಮತ್ತು ಮಾಪನ ಪುಸ್ತಕಗಳು/ಮಾಸಿಕ ಲೆಕ್ಕದ ಬಿಲ್ಲುಗಳಲ್ಲಿ ಅಗತ್ಯವಿದ್ದ ವಿವರಗಳನ್ನು ದಾಖಲಿಸಿ ಪಾವತಿಗಳನ್ನು ಮಾಡಬೇಕಿತ್ತು. ಗ್ರಾಮೀಣ ಯುವಕರಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುವುದು ಮತ್ತು ಕಾಮಗಾರಿಗಳನ್ನು ನೇರವಾಗಿ ಮೇಲ್ವಿಚಾರಣೆ ಮಾಡುವ ಮೂಲಕ ವ್ಯಯಿಸಿದ ಹಣದ ಪೂರ್ಣ ಸೌಲಭ್ಯ ಜನರಿಗೆ ದೊರಕುವಂತೆ ಮಾಡುವುದು ಕೆಆರ್ಐಡಿಎಲ್‌ನ ಒಂದು ಉದ್ದೇಶವಾಗಿತ್ತು. ಆದ್ದರಿಂದ, ಕೂಲಿಯಾಳುಗಳ ನೇಮಕ ಮತ್ತು ಪಾವತಿಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯು ಅತ್ಯಗತ್ಯವಾಗಿದೆ.

ಉಪಕರಣ, ಯಂತ್ರೋಪಕರಣಗಳು ಮತ್ತು ಕೂಲಿಯಾಳುಗಳ ಕೊರತೆಗೆ ಸಂಬಂಧಿಸಿದಂತಹ ಲೆಕ್ಕಪರಿಶೋಧನೆಯ ಅವಲೋಕನಗಳನ್ನು ಕೆಳಗೆ ವಿವರಿಸಲಾಗಿದೆ:

#### 4.1.3.1 *ಉಪಕರಣ ಮತ್ತು ಸಲಕರಣೆಗಳು ಇಲ್ಲದಿರುವುದು*

ಲೆಕ್ಕಪರಿಶೋಧನೆಯ ಅವಧಿಯಲ್ಲಿ ಉಪ–ವಿಭಾಗಗಳು ರೋಡ್ ರೋಲರ್‌ಗಳು, ಮೆಕ್ಯಾನಿಕಲ್/ ಸೆನ್ಸರ್ ಪೇವರ್‌ಗಳು, ವೈಬ್ರೇಟರ್‌ಗಳು, ಟ್ರಕ್‌ಗಳು, ಟೆಂಪೋಗಳು, ಸಾರ್ವೆ ಕಟ್ಟುವ ಉಪಕರಣಗಳು ಮುಂತಾದ ವಿವಿಧ ರೀತಿಯ ಯಂತ್ರೋಪಕರಣಗಳ ಅಗತ್ಯವಿರುವ ರಸ್ತೆ ಕಾಮಗಾರಿಗಳನ್ನು ಮತ್ತು ಕಟ್ಟಡ ಕಾಮಗಾರಿಗಳನ್ನು ನಿರ್ವಹಿಸಿದ್ದವು.

ಆದಾಗ್ಯೂ, ಉಪ–ವಿಭಾಗಗಳು ಈ ಕಾಮಗಾರಿಗಳಿಗೆ ಬಳಸಿದ ಉಪಕರಣ ಮತ್ತು ಯಂತ್ರೋಪಕರಣಗಳು ಸ್ವಂತದ್ದು/ಗುತ್ತಿಗೆ ಪಡೆದದ್ದು ಅಥವಾ ಬಾಡಿಗೆಗೆ ಪಡೆದವುಗಳಾಗಿರಲಿಲ್ಲ. ವಿಭಾಗಗಳು/ಉಪ–ವಿಭಾಗಗಳು ಅಂತಹ ಸಲಕರಣೆಗಳ ಲಭ್ಯತೆ/ಅವಶ್ಯಕತೆಯ ಯಾವುದೇ ವಿವರಗಳನ್ನು ಒದಗಿಸಲಿಲ್ಲ. ಹೀಗಾಗಿ ಉಪಗುತ್ತಿಗೆಯ ಮೂಲಕ ಕಾಮಗಾರಿಗಳನ್ನು ನಿರ್ವಹಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ, ಇದು

ಕೆಆರ್‌ಐಡಿಎಲ್‌ಗೆ ವಹಿಸಲಾಗಿರುವ ಕಾಮಗಾರಿಗಳನ್ನು ಟೆಂಡರ್ ಪ್ರಕ್ರಿಯೆಯಿಂದ ತಪ್ಪಿಸಿರುವುದನ್ನು ಸೂಚಿಸುತ್ತದೆ.

ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ ಗುಂಪು ನಾಯಕರುಗಳು ಕಾಮಗಾರಿಗಳನ್ನು ನಿರ್ವಹಿಸಲು ಅಗತ್ಯವಿರುವ ಆಳುಗಳು ಮತ್ತು ಯಂತ್ರೋಪಕರಣಗಳನ್ನು ವ್ಯವಸ್ಥೆ ಮಾಡುತ್ತಾರೆ ಎಂದು ಹೇಳಿದೆ. ಸ್ಥಾಯಿ ಆದೇಶಗಳನ್ನು 1974ರಲ್ಲಿ ನೀಡಲಾಗಿದ್ದು ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಇಂದಿನ ಅಗತ್ಯತೆಯೊಂದಿಗೆ ತಿದ್ದುಪಡಿ ಮಾಡಬೇಕಾಗಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ.

ಗುಂಪು ನಾಯಕರುಗಳು ತಮ್ಮ ಸ್ವಂತ ಆಳುಗಳು ಮತ್ತು ಯಂತ್ರೋಪಕರಣಗಳೊಂದಿಗೆ ಕಾಮಗಾರಿಗಳನ್ನು ನಿರ್ವಹಿಸುವುದು ಕೆಲಸಗಳ ಉಪ–ಗುತ್ತಿಗೆಯನ್ನು ಸೂಚಿಸುತ್ತದೆ ಎಂಬುದು ಉತ್ತರದಿಂದ ಸ್ಪಷ್ಟವಾಗಿದೆ.

#### 4.1.3.2 *ಕೂಲಿಯಾಳುಗಳ ನೇಮಕದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಕೊರತೆ*

ಲೆಕ್ಕಪರಿಶೋಧನೆಯ ಅವಧಿಯಲ್ಲಿ ಉಪ–ವಿಭಾಗಗಳು ಕುಶಲ/ಕೌಶಲ್ಯರಹಿತ ಕೂಲಿಯಾಳುಗಳ ಅಗತ್ಯವಿರುವ ರಸ್ತೆ ಕಾಮಗಾರಿಗಳು, ಕಟ್ಟಡ ಕಾಮಗಾರಿಗಳನ್ನು ನಿರ್ವಹಿಸಿದ್ದವು. ನಿಯಂತ್ರಣ ದಾಖಲೆಗಳಾದ ಮಾಪನ ಪುಸ್ತಕಗಳು/ಕಾಮಗಾರಿ ಬಿಲ್‌ಗಳು ಮತ್ತು ಸಂಬಂಧಿತ ಮಾಸಿಕ ಲೆಕ್ಕ ಬಿಲ್‌ಗಳನ್ನು ನಿರ್ವಹಿಸಲಾಗಿದ್ದರೂ ಸಹ ಉಪ–ವಿಭಾಗಗಳಿಂದ ಕಾರ್ಯಗತಗೊಳಿಸಲಾದ ಪ್ರತಿ ಕೆಲಸದ ಕಾಮಗಾರಿಯಲ್ಲಿ ತೊಡಗಿದ್ದ ಕೂಲಿಯಾಳುಗಳ ವಿವರಗಳನ್ನು ದಾಖಲಿಸಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಕೆಆರ್‌ಐಡಿಎಲ್‌ನ ಯಾವುದೇ ಕಾಮಗಾರಿಯ ದಾಖಲೆಗಳು ಕಾರ್ಯಗತಗೊಳಿಸಿದ ಕೆಲಸದ ಪರಿಮಾಣ ಮತ್ತು ಕೂಲಿಯಾಳುಗಳಿಗೆ ಪಾವತಿಗಳನ್ನು ಮಾಡಿದ ದರಗಳನ್ನು ದಾಖಲಿಸಿಲ್ಲ, ಬದಲಿಗೆ ಗುಂಪು ನಾಯಕರುಗಳಿಗೆ ಇಡುಗಂಟು ಪಾವತಿಗಳನ್ನು ಮಾಡಲಾಗಿದೆ.

ಮೇಲಿನ ವಿವರಗಳ ಕೊರತೆಯಿಂದಾಗಿ, ಚಾಲ್ತಿಯಲ್ಲಿರುವ ಕಾರ್ಮಿಕ ಕಾನೂನುಗಳಿಗೆ ಅನುಗುಣವಾಗಿ ಕೂಲಿಯಾಳುಗಳಿಗೆ ಪಾವತಿಗಳನ್ನು ಮಾಡಲಾಗಿತ್ತು ಎಂಬುದನ್ನು ಪರಿಶೀಲಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ. ಕೆಆರ್‌ಐಡಿಎಲ್ ಅಳವಡಿಸಿಕೊಂಡ ಕಾರ್ಯವಿಧಾನವು ಕಾಮಗಾರಿಯಲ್ಲಿ ತೊಡಗಿಸಿಕೊಂಡಿರುವ ಕೂಲಿಯಾಳುಗಳ ವೆಚ್ಚದ ವಿವರಗಳು ಮತ್ತು ಬಳಸಿದ ಸಾಮಗ್ರಿಗಳ ವಿವರಗಳನ್ನು ಯಾವುದೇ ಕಾಮಗಾರಿಯಲ್ಲಿ ಪರಿಗಣಿಸದಿರುವುದು ಕಾಮಗಾರಿಗಳನ್ನು ಉಪ–ಗುತ್ತಿಗೆ ನೀಡಲಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಪ್ರತ್ಯುತ್ತರವಾಗಿ, ಅನುಮೋದಿತ ಕೆಲಸದ ದರದ ಆಧಾರದ ಮೇಲೆ ಕೂಲಿಯ ದರ ಲೆಕ್ಕ ಮಾಡಲಾಗಿದೆ ಮತ್ತು ಗುಂಪು ನಾಯಕರುಗಳಿಗೆ ಪಾವತಿಸಲಾಗುತ್ತದೆ, ಅವರು ಎಲ್ಲಾ ಕೂಲಿಯಾಳುಗಳಿಗೆ ಪಾವತಿ ಮಾಡುತ್ತಾರೆ ಮತ್ತು ಅಂತಹ ಪಾವತಿಗಳ ವಿವರಗಳನ್ನು ಗುಂಪು ನಾಯಕರುಗಳೇ ನಿರ್ವಹಿಸುತ್ತಾರೆ ಎಂದು ಹೇಳಲಾಗಿದೆ. ಕಾಮಗಾರಿಯನ್ನು ಪರಿಮಾಣದ ಆಧಾರದ ಮೇಲೆ ಕಾರ್ಯಗತಗೊಳಿಸಬೇಕಾಗಿತ್ತು ಮತ್ತು ಕಾರ್ಯಗತಗೊಳಿಸಿದ ಪ್ರತಿ ಪರಿಮಾಣದ ಕೆಲಸದಲ್ಲಿ ಒಳಗೊಂಡಿರುವ ಶ್ರಮದ ಆಧಾರದಲ್ಲಿ ಕೆಲಸದ ದರವನ್ನು ಲೆಕ್ಕ ಹಾಕಬೇಕಿತ್ತಾದ್ದರಿಂದ ಉತ್ತರವು ಸ್ವೀಕಾರಾರ್ಹವಾಗಿಲ್ಲ. ನಿಯೋಜಿಸಲಾದ ಕೂಲಿಯಾಳುಗಳ ವಿವರಗಳನ್ನು ಕಾಮಗಾರಿ ಬಿಲ್‌ಗಳಲ್ಲಿ ಮತ್ತು ಮಾಪನ ಪುಸ್ತಕದಲ್ಲಿ ದಾಖಲಿಸಬೇಕು.

***ಶಿಫಾರಸು 4:*** *ರಾಜ್ಯ ಸರ್ಕಾರವು ಕೆಆರ್‌ಐಡಿಎಲ್ ಕಾಮಗಾರಿಗಳನ್ನು ಸ್ವತಃ ನಿರ್ವಹಿಸುತ್ತದೆ ಮತ್ತು ಗುಂಪು ನಾಯಕರುಗಳಿಗೆ ವಹಿಸುವುದಿಲ್ಲ ಎಂಬುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ಟೆಂಡರ್ ಪ್ರಕ್ರಿಯೆ ಅನುಸರಿಸದೆಯೇ ಕಾಮಗಾರಿಗಳನ್ನು ಉಪ–ಗುತ್ತಿಗೆ ನೀಡುವುದಕ್ಕೆ ಹೊಣೆಗಾರಿಕೆ ನಿಗದಿಪಡಿಸಬೇಕು ಹಾಗು ರಾಜ್ಯ ಸರ್ಕಾರವು ಪ್ರತಿ ಕಾಮಗಾರಿಯಲ್ಲಿ ನೇಮಿಸಿಕೊಂಡ ಕೂಲಿಯಾಳುಗಳಿಗೆ ಪಾವತಿಗಳ ವಿವರಗಳನ್ನು ಕೆಆರ್‌ಐಡಿಎಲ್ ಡಿಜಿಟಲ್ ದತ್ತಾಂಶವಾಗಿ ನಿರ್ವಹಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.*

## 4.2 ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬ

2016–17ರಿಂದ 2020–21ರ ಅವಧಿಯಲ್ಲಿ ಒಟ್ಟು 84,574 ಕಾಮಗಾರಿಗಳನ್ನು ವಹಿಸಲಾಗಿದ್ದು, ಅದರಲ್ಲಿ 24,014 ಕಾಮಗಾರಿಗಳನ್ನು ಮಾತ್ರ (ಶೇಕಡ 28) ಪೂರ್ಣಗೊಳಿಸಲು ಕೆಆರ್‌ಐಡಿಎಲ್‌ಗೆ ಸಾಧ್ಯವಾಯಿತು. ಈ ಅವಧಿಯಲ್ಲಿ ಪೂರ್ಣಗೊಂಡ ಕಾಮಗಾರಿಗಳ ಶೇಕಡಾವಾರು 14ರಿಂದ ಶೇಕಡ 39ರ ವ್ಯಾಪ್ತಿಯಲ್ಲಿತ್ತು. ಪರೀಕ್ಷಾ–ತನಿಖೆ ನಡೆಸಲಾದ ಆಯ್ದ 21 ಉಪ–ವಿಭಾಗಗಳಲ್ಲಿನ 814 ಕಾಮಗಾರಿಗಳ ಅನುಷ್ಠಾನದಲ್ಲಿ ತೀವ್ರ ವಿಳಂಬದ ಪ್ರಕರಣಗಳನ್ನು (ಲೆಕ್ಕಪರಿಶೋಧನೆಯು ಕಾಮಗಾರಿಗಳ ಮುಕ್ತಾಯಕ್ಕೆ 11 ತಿಂಗಳ[11] ಅವಧಿಯನ್ನು ಪರಿಗಣಿಸಿದ್ದು, 11 ತಿಂಗಳಿಗಿಂತ ಹೆಚ್ಚಾದ ಅವಧಿಯನ್ನು ವಿಳಂಬ ಎಂದು ಪರಿಗಣಿಸಿದೆ) ಗಮನಿಸಿದ್ದು, ವಿವರಗಳನ್ನು **ಅನುಬಂಧ–XIV**ರಲ್ಲಿ ನೀಡಲಾಗಿದೆ, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬದ ವ್ಯಾಪ್ತಿಯನ್ನು ಕೆಳಗಿನ **ಕೋಷ್ಟಕ 4.1**ರಲ್ಲಿ ಚಿತ್ರಿಸಲಾಗಿದೆ:

**ಕೋಷ್ಟಕ 4.1: ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬದ ವ್ಯಾಪ್ತಿ**

| ವಿಳಂಬದ ಅವಧಿ | ಕಾಮಗಾರಿಗಳ ಸಂಖ್ಯೆ |
|---|---|
| 1ರಿಂದ 4 ತಿಂಗಳುಗಳು | 124 |
| 5ರಿಂದ 9 ತಿಂಗಳುಗಳು | 95 |
| 10ರಿಂದ 19 ತಿಂಗಳುಗಳು | 224 |
| 20ರಿಂದ 29 ತಿಂಗಳುಗಳು | 136 |
| 29 ತಿಂಗಳುಗಳಿಗೂ ಅಧಿಕ | 235 |

ಆಧಾರ:ಕೆಆರ್‌ಐಡಿಎಲ್ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಸಂಕಲಿಸಿರುವುದು

ಕೆಆರ್‌ಐಡಿಎಲ್‌ಗೆ ಕಾಮಗಾರಿಗಳನ್ನು ವಹಿಸಿಕೊಡುವುದರಲ್ಲಿ 2016–19 ವರ್ಷಗಳಲ್ಲಿ ಏರಿಕೆ ಪ್ರವೃತ್ತಿಯನ್ನು ತೋರಿಸುತ್ತಿದ್ದರೆ, 2019–21 ವರ್ಷಗಳಲ್ಲಿ ತೀವ್ರ ಇಳಿಕೆಯ ಪ್ರವೃತ್ತಿಯನ್ನು ತೋರಿಸುತ್ತಿದೆ. ಐದು ವರ್ಷಗಳಲ್ಲಿ ವಹಿಸಿಕೊಟ್ಟ ಕಾಮಗಾರಿಗಳ ಪೂರ್ಣಗೊಳಿಸುವಿಕೆಯ ಪ್ರಮಾಣವು ಶೇಕಡ 28 ಮಾತ್ರವಾಗಿತ್ತು. ಹೀಗಾಗಿ, ಅತಿಯಾದ ವಿಳಂಬವು 4(ಜಿ) ವಿನಾಯತಿ ಅಡಿಯಲ್ಲಿ ಕೆಆರ್‌ಐಡಿಎಲ್‌ಗೆ ನೇರವಾಗಿ ಕಾಮಗಾರಿಗಳನ್ನು ವಹಿಸಿಕೊಡುವ ಉದ್ದೇಶವನ್ನು ವಿಫಲಗೊಳಿಸಿತು.

ಲೆಕ್ಕಪರಿಶೋಧನೆಯ ಅವಲೋಕನಗಳಿಗೆ ಉತ್ತರವಾಗಿ ರಾಜ್ಯ ಸರ್ಕಾರವು, ಕೆಆರ್‌ಐಡಿಎಲ್ ಭೌತಿಕವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದರೂ, ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಬಾಕಿ ಹಣ ಮತ್ತು ಮೂಲ ತೆರಿಗೆ ಕಡಿತ ಪ್ರಮಾಣಪತ್ರಗಳು ಸ್ವೀಕೃತಿಯಾಗದ ಕಾರಣ ಹಾಗು ಕಾಮಗಾರಿ ಹಸ್ತಾಂತರ ಪತ್ರಗಳನ್ನು ಉಪ–ವಿಭಾಗಗಳು ಕೇಂದ್ರ ಕಛೇರಿಗೆ ಸಲ್ಲಿಸದ ಕಾರಣ ಲೆಕ್ಕಪತ್ರಗಳಲ್ಲಿ ದಾಖಲಾಗಿಲ್ಲ ಎಂದು ಉತ್ತರಿಸಿದೆ. ಆದರೆ, ಉತ್ತರದ ಜೊತೆಗೆ ಪೂರ್ಣತಾ ಪ್ರಮಾಣಪತ್ರಗಳನ್ನು ಒದಗಿಸಿಲ್ಲ, ಹಾಗಾಗಿ ಲೆಕ್ಕಪರಿಶೋಧನೆಯು ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ಖಚಿತಪಡಿಸಲು ಸಾಧ್ಯವಾಗಲಿಲ್ಲ.

ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಶೀಘ್ರವಾಗಿ ಲೆಕ್ಕಪತ್ರ ಇತ್ಯರ್ಥಕ್ಕಾಗಿ ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ಹೆಚ್ಚುವರಿ/ಉಳಿತಾಯ ತಖ್ತೆ ಸಂವಹನ ಮಾಡುವಂತಹ ನಿಯೋಜಿತ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮಂಜೂರಾದ ಸಿಬ್ಬಂದಿ ಸಾಮರ್ಥ್ಯಕ್ಕೆ ಪ್ರತಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಕೊರತೆಯನ್ನು ಉತ್ತರವು ತೋರಿಸುತ್ತದೆ.

[11] 12 ತಿಂಗಳುಗಳಿಗಿಂತ ಹೆಚ್ಚಿನ ಅವಧಿಯ ಕಾಮಗಾರಿಗಳಿಗೆ ಟೆಂಡರ್/ಕಾರ್ಯಾದೇಶಗಳಲ್ಲಿ ಬೆಲೆ ವ್ಯತ್ಯಾಸದ ಷರತ್ತು ಸೇರಿಸುವ ಅಗತ್ಯವಿದೆ ಮತ್ತು ಅಂತಹ ಯಾವುದೇ ಷರತ್ತು ಜಾರಿಗೊಳಿಸಲಾಗಿಲ್ಲ.

## 4.3 ಔಪಚಾರಿಕ ಒಪ್ಪಂದ ಮಾಡಿಕೊಳ್ಳದೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದು

ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ 135 (1), ಎಲ್ಲಾ ಕಾಮಗಾರಿಗಳನ್ನೂ ಸಕ್ಷಮ ಪ್ರಾಧಿಕಾರ ಕಾರ್ಯಾದೇಶಗಳನ್ನು ನೀಡಿದ ನಂತರ ಮತ್ತು ಒಪ್ಪಂದಕ್ಕೆ ಸಹಿ ಹಾಕಿ ಋಣಭಾರಮುಕ್ತ ನಿವೇಶನ ಹಸ್ತಾಂತರಿಸಿದ ನಂತರ ಮಾತ್ರವೇ ಆರಂಭಿಸಬೇಕು ಎಂದು ನಿಗದಿಪಡಿಸುತ್ತದೆ.

ಬಿಬಿಎಂಪಿಯಿಂದ ಕೆಆರ್‌ಐಡಿಎಲ್‌ಗೆ ವಹಿಸಲಾದ ಕಾಮಗಾರಿಗಳಿಗೆ ಔಪಚಾರಿಕ ಒಪ್ಪಂದ ಮಾಡಿಕೊಳ್ಳುವ ಸದಭ್ಯಾಸ ಇರುವುದನ್ನು ಗಮನಿಸಲಾಯಿತು, ಇದರಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕಾದ ನಿಗದಿತ ದಿನಾಂಕವನ್ನು ನಮೂದಿಸಲಾಗುತ್ತಿದೆ ಮತ್ತು ಅನುಸರಿಸಲಾಗುತ್ತಿದೆ. ಒಪ್ಪಂದದ ಷರತ್ತುಗಳು ಬಿಬಿಎಂಪಿ ಮತ್ತು ಕೆಆರ್‌ಐಡಿಎಲ್ ಎರಡಕ್ಕೂ ಬದ್ಧವಾಗಿರುವುದರಿಂದ ಈ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬ ಕಡಿಮೆ ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕೆಆರ್‌ಐಡಿಎಲ್ ಮತ್ತು ಕಾಮಗಾರಿ ವಹಿಸುವ ಸಂಸ್ಥೆಗಳ (ಬಿಬಿಎಂಪಿ ಹೊರತು ಪಡಿಸಿ) ನಡುವೆ ಔಪಚಾರಿಕ ಒಪ್ಪಂದಗಳನ್ನು ಮಾಡಿಕೊಳ್ಳದೇ ಇರುವುದು ಕಾಮಗಾರಿಗಳ ಆರಂಭದಲ್ಲಿ ಮಾತ್ರವಲ್ಲದೆ ಪೂರ್ಣಗೊಳಿಸುವಲ್ಲಿಯೂ ವಿಳಂಬವಾಯಿತು.

ಬಿಎಮ್‌ಆರ್‌ಸಿಎಲ್/ ಬಿಬಿಎಂಪಿ, ಪ್ರವಾಸೋದ್ಯಮ ಇಲಾಖೆ ಮತ್ತು ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ ಇತ್ಯಾದಿಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಕೆಆರ್‌ಐಡಿಎಲ್ ಉತ್ತರಿಸಿದೆ. ಹೆಚ್ಚಿನ ಕಾಮಗಾರಿಗಳನ್ನು ವಹಿಸಿಕೊಡುವ ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ/ಗ್ರಾಮ ಪಂಚಾಯತಿಗಳು, ಜಿಲ್ಲಾಧಿಕಾರಿ ಕಚೇರಿ, ಶಿಕ್ಷಣ ಇಲಾಖೆ ಮುಂತಾದವುಗಳೊಂದಿಗೆ ಔಪಚಾರಿಕ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿಲ್ಲವಾದ್ದರಿಂದ ಉತ್ತರವು ಸ್ವೀಕಾರಾರ್ಹವಾಗಿಲ್ಲ.

***ಶಿಫಾರಸ್ಸು 5:*** *ಸಕಾಲದಲ್ಲಿ ಹಣ ಬಿಡುಗಡೆ ಮತ್ತು ಸಕಾಲದಲ್ಲಿ ಕಾಮಗಾರಿಗಳನ್ನು ಪೂರೈಸುವುದನ್ನು ಖಚಿತಪಡಿಸಿಕೊಳ್ಳಲು, ಬಿಬಿಎಂಪಿಯು ರೂಢಿಸಿಕೊಂಡಿರುವಂತೆ, ಇತರ ಇಲಾಖೆಗಳೂ ಕೆಆರ್‌ಐಡಿಎಲ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವುದನ್ನು, ರಾಜ್ಯ ಸರ್ಕಾರವು ಕಡ್ಡಾಯಗೊಳಿಸಬೇಕು.*

## 4.4 ಕೋಲಾರ ಉಪ–ವಿಭಾಗದಿಂದ ಕಳಪೆ ಕಾಮಗಾರಿ ಅನುಷ್ಠಾನ

2016–17ನೇ ಸಾಲಿನಲ್ಲಿ ಬಂಗಾರಪೇಟೆ ತಾಲ್ಲೂಕಿನ ಬ್ಯಾಟರಾಯನ ಹಳ್ಳಿಯ ಬೆಟ್ಟದ ತಪ್ಪಲಿನಿಂದ ಬ್ಯಾಟರಾಯಸ್ವಾಮಿ ದೇವಸ್ಥಾನದವರೆಗೆ ಸಂಪರ್ಕ ರಸ್ತೆ ನಿರ್ಮಾಣ ಕಾಮಗಾರಿಯನ್ನು ಪ್ರವಾಸೋದ್ಯಮ ಇಲಾಖೆಯಿಂದ ಕೆಆರ್‌ಐಡಿಎಲ್‌ಗೆ ವಹಿಸಲಾಗಿತ್ತು. ಕೋಲಾರ ಉಪ–ವಿಭಾಗವು ಈ ಹಳ್ಳಿ ರಸ್ತೆಗೆ ಬಿಟುಮಿನಸ್ ಮೆಕಾಡಮ್ (ಬಿಎಂ) ಮತ್ತು ಸೆಮಿ ಡೆನ್ಸ್ ಬಿಟುಮಿನಸ್ ಕಾಂಕ್ರೀಟ್ (ಎಸ್‌ಡಿಬಿಸಿ) (ಹೆದ್ದಾರಿ ರಸ್ತೆಗಳಿಗೆ ಬಳಸುವ ವಿಶಿಷ್ಟತೆಗಳು) ಬಳಸಿ 2.277 ಕಿ.ಮೀ ಉದ್ದದ ರಸ್ತೆಗೆ ₹2.00 ಕೋಟಿಯ ಅಂದಾಜುಗಳನ್ನು ಸಿದ್ಧಪಡಿಸಿತ್ತು. ಡಾಂಬರು ಹಾಕಿದ ರಸ್ತೆಯ ನಿಗದಿತ ಜೀವಿತಾವಧಿ 10 ವರ್ಷಗಳಾಗಿರುತ್ತದೆ. ಆಗಸ್ಟ್ 2021ರ ಮಾಸಿಕ ಕಾಮಗಾರಿ ಬಿಲ್ ಪ್ರಕಾರ ಉಪ–ವಿಭಾಗವು ರಸ್ತೆಬದಿಯ ಕಾಂಕ್ರೀಟ್ ಚರಂಡಿ ನಿರ್ಮಾಣ ಸೇರಿದಂತೆ ₹1.82 ಕೋಟಿ ವೆಚ್ಚವನ್ನು ಮಾಡಿತ್ತು. ಲೆಕ್ಕಪರಿಶೋಧನೆಯು ಜಂಟಿ ಭೌತಿಕ ಪರಿಶೀಲನೆ ಕೈಗೊಂಡ ಸಮಯದಲ್ಲಿ (03 ಸೆಪ್ಟೆಂಬರ್ 2021), ಹೆದ್ದಾರಿ ರಸ್ತೆಗಳಿಗೆ ಬಳಸುವ ವಿಶಿಷ್ಟತೆಗಳನ್ನು (ಬಿಎಂ ಮತ್ತು ಎಸ್‌ಡಿಬಿಸಿ) ಅಳವಡಿಸಿಕೊಂಡಿದ್ದಾಗ್ಯೂ ರಸ್ತೆಯ ಹಲವಾರು ಭಾಗಗಳಲ್ಲಿ ಹದಗೆಟ್ಟಿರುವುದನ್ನು ಗಮನಿಸಿತು, ಇದು ನಿರ್ಮಾಣದ ಕಳಪೆ ಗುಣಮಟ್ಟವನ್ನು ಸೂಚಿಸುತ್ತದೆ. ಇದಲ್ಲದೆ, ರಸ್ತೆಬದಿಯ ಕಾಂಕ್ರೀಟ್ ಚರಂಡಿ ಮತ್ತು ಅಂದಾಜುಪಟ್ಟಿಗಳಲ್ಲಿ ಅಳವಡಿಸಿಕೊಂಡಷ್ಟು ಸಂಖ್ಯೆಯ ಅಡ್ಡಚರಂಡಿಗಳನ್ನು ಹಾಕಲಾಗಿಲ್ಲ, ಹೀಗಾಗಿ, ಪಾವತಿಸಿರುವ ವೆಚ್ಚವು ಅಕ್ರಮವಾಗಿದೆ (ಪ್ರದರ್ಶಿಕೆ **4.1**).

ಪ್ರದರ್ಶಿಕೆ **4.1:** ಹೊಸದಾಗಿ ನಿರ್ಮಿಸಲಾದ ಡಾಂಬರು ರಸ್ತೆಯು ಮಳೆಯಿಂದ ಗುಂಡಿಬಿದ್ದು ಹದಗೆಟ್ಟಿರುವುದು ಮತ್ತು ಕಾಂಕ್ರೀಟ್ ಚರಂಡಿಗಳನ್ನು ಸಹ ನಿರ್ಮಿಸಲಾಗಿಲ್ಲ





ಆಧಾರ: ಜಂಟಿ ಭೌತಿಕ ಪರಿಶೀಲನೆ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

## 4.5 ಗುಂಪು ನಾಯಕರುಗಳ ಮೂಲಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದು

ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳ ಅನುಸಾರ, ಕಾಮಗಾರಿ ಬಿಲ್‌ಗೆ ಲಗತ್ತಿಸಲಾದ ಪ್ರಪತ್ರದಲ್ಲಿ ಗುಂಪಿನ ಎಲ್ಲಾ ಕೂಲಿಯಾಳುಗಳ ಹೆಸರು, ಕೆಲಸ ಮಾಡಿದ ದಿನಗಳು, ಪ್ರತಿಯೊಬ್ಬರೂ ಮಾಡಿದ ಕೆಲಸದ ನಿಜವಾದ ಪರಿಮಾಣ ಮತ್ತು ಪ್ರತಿ ಕೂಲಿಯಾಳಿಗೆ ಪಾವತಿಸಬೇಕಾದ ಮೊತ್ತದ ವಿವರಗಳನ್ನು ನಮೂದಿಸಬೇಕು. ಗುಂಪಿನ ಇತರ ಕೂಲಿಯಾಳುಗಳ (ಪ್ಯಾರಾ 41) ಸಮ್ಮುಖದಲ್ಲಿ ಅವರ ಸ್ವೀಕೃತಿಯನ್ನು ಪಡೆದ ನಂತರ, ಅನುಕೂಲಕ್ಕೆ ತಕ್ಕಂತೆ, ಮೊತ್ತವನ್ನು ವ್ಯಕ್ತಿಗಳಿಗೆ ಅಥವಾ ಗುಂಪು ನಾಯಕರುಗಳಿಗೆ ಪಾವತಿಸಬೇಕು. ಲೆಕ್ಕಪರಿಶೋಧನೆಯು ಈ ಕೆಳಗಿನ ನ್ಯೂನತೆಗಳನ್ನು ಗಮನಿಸಿದೆ:

### *4.5.1 ಗುಂಪು ನಾಯಕರುಗಳ ಹೆಸರಿನಲ್ಲಿ ಉಪಗುತ್ತಿಗೆ ಮೂಲಕ ಕಾಮಗಾರಿಗಳನ್ನ ನಿರ್ವಹಿಸಿರುವುದು*

ಕಾಮಗಾರಿಯ ಉಸ್ತುವಾರಿ ಹೊಂದಿದ ಎಇಇಗಳು ಕಾಮಗಾರಿಯನ್ನು ಸುಗಮವಾಗಿ ನಿರ್ವಹಿಸಲು ಕಾಮಗಾರಿಯ ಪರಿಮಾಣದ ಆಧಾರದ ಮೇಲೆ ಅವಶ್ಯವಿರುವ ಕೂಲಿಯಾಳುಗಳ, ಸಾಮಗ್ರಿಗಳು/ಯಂತ್ರೋಪಕರಣಗಳನ್ನು ಅಂದಾಜಿಸಲು ಜವಾಬ್ದಾರರಾಗಿರುತ್ತಾರೆ.

ವರದಿಯಲ್ಲಿ ಈಗಾಗಲೇ ಕಂಡಿಕೆ 4.1.3ರಲ್ಲಿ ತಿಳಿಸಿರುವಂತೆ, ಉಪ–ವಿಭಾಗಗಳು ಯಾವುದೇ ಯಂತ್ರೋಪಕರಣಗಳ ಮಾಲೀಕತ್ವವನ್ನು ಹೊಂದಿರಲಿಲ್ಲ ಅಥವಾ ಬಾಡಿಗೆಗೆ ಪಡೆದಿರಲಿಲ್ಲ ಮತ್ತು ಕೂಲಿಯಾಳುಗಳ, ಅವರಿಗೆ ಮಾಡಿದ ಪಾವತಿಗಳ ವಿವರಗಳನ್ನು ಮಾಪನ ಪುಸ್ತಕದಲ್ಲಿ ಅಥವಾ ಮಾಸಿಕ ಕಾಮಗಾರಿ ಬಿಲ್‌ಗಳಲ್ಲಿ ದಾಖಲಿಸಿಲ್ಲ. ಬದಲಾಗಿ, ಗುಂಪು ನಾಯಕರುಗಳಿಗೆ ಇಡುಗಂಟು ಆಧಾರದ ಮೇಲೆ ಪಾವತಿ ಮಾಡಿರುವುದನ್ನು ಗಮನಿಸಲಾಗಿದೆ.

ಇದಕ್ಕೆ ಉತ್ತರವಾಗಿ ಗುಂಪು ನಾಯಕರುಗಳು ಕಾಮಗಾರಿ ಕಾರ್ಯಗತಗೊಳಿಸಲು ಅಗತ್ಯವಿರುವ ಕೂಲಿಯಾಳುಗಳನ್ನು ಮತ್ತು ಯಂತ್ರೋಪಕರಣಗಳನ್ನು ತರುತ್ತಾರೆ ಎಂದು ಹೇಳಲಾಗಿದೆ. ಮುಂದುವರೆದು, ಕಂಪನಿಯು ಸ್ವಂತ ಘಟಕ ಮತ್ತು ಯಂತ್ರೋಪಕರಣಗಳನ್ನು ಹೊಂದಲು ಅಥವಾ ಸೀಮಿತ ಅವಧಿಗೆ/ಸಣ್ಣ ಕೆಲಸಗಳಿಗೆ ಸ್ಥಳೀಯವಾಗಿ ಬಾಡಿಗೆಗೆ ಪಡೆಯಲು ಸಾಧ್ಯವಾಗುವುದಿಲ್ಲ ಎಂದು ಹೇಳಲಾಗಿದೆ. ಈ ಉತ್ತರವು ಕೆಆರ್‌ಐಡಿಎಲ್ ಕೂಲಿಯಾಳುಗಳನ್ನು ನೇಮಿಸಿಕೊಳ್ಳುತ್ತಿಲ್ಲ ಮತ್ತು ಕಾಮಗಾರಿಯನ್ನು ಕಾರ್ಯಗತಗೊಳಿಸಲು ಗುಂಪು ನಾಯಕರುಗಳನ್ನು ಅವಲಂಬಿಸಿದೆ ಎಂಬುದನ್ನು ದೃಢಪಡಿಸುತ್ತದೆ.

ಸಿವಿಲ್, ಎಲೆಕ್ಟ್ರಿಕಲ್, ಗುಣಮಟ್ಟ ನಿಯಂತ್ರಣ, ಮಳೆ ನೀರು ನಿರ್ವಹಣೆ, ಬೃಹತ್ ನೀರುಗಾಲುವೆ ಇತ್ಯಾದಿಗಳಿಗೆ ಪ್ರತ್ಯೇಕ ಎಂಜಿನಿಯರಿಂಗ್ ವಿಭಾಗಗಳನ್ನು ಹೊಂದಿದ್ದರೂ ಸಹ, ಬಿಬಿಎಂಪಿಯು ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ವಹಿಸುತ್ತಿದೆ ಎಂಬ ಅಂಶವು ಬಿಬಿಎಂಪಿಯು 4(ಜಿ) ವಿನಾಯಿತಿ ನಿಬಂಧನೆಗಳ ದುರ್ಲಾಭ ಪಡೆದುಕೊಳ್ಳುತ್ತಿದೆ ಮತ್ತು ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸುತ್ತಿದೆ ಎಂಬುದನ್ನು ಸೂಚಿಸುತ್ತದೆ.

ಪರೀಕ್ಷಾ–ತನಿಖೆ ಮಾಡಲಾದ ಗುಂಪು ನಾಯಕರುಗಳ ಜಿಎಸ್‌ಟಿ/ಟಿನ್ ಸ್ಥಾನಮಾನವು ಬಿಬಿಎಂಪಿ ದಾಖಲೆಗಳಲ್ಲಿ ಮರುಪರಿಶೀಲನೆಯಿಂದ ಅವರ ಚಟುವಟಿಕೆಯು ಗುತ್ತಿಗೆಕಾರ್ಯ[12] ಎಂಬುದು ತಿಳಿದುಬಂದಿತು. ಈ ರೀತಿ ಗುಂಪು ನಾಯಕರುಗಳು/ಸಂಸ್ಥೆಗಳನ್ನು (ಅವರದೇ ಕೂಲಿಯಾಳು ಮತ್ತು ಯಂತ್ರೋಪಕರಣಗಳೊಂದಿಗೆ ಕಾಮಗಾರಿಗಳನ್ನು ಕೈಗೊಳ್ಳುವ) ತೊಡಗಿಸಿಕೊಳ್ಳುವುದು 4(ಜಿ) ಅಧಿಸೂಚನೆಯಡಿ ನಿಷೇಧಿಸಲಾದ ಉಪ–ಗುತ್ತಿಗೆಗೆ ಸಮಾನವಾಗಿರುತ್ತದೆ.

ಪ್ರತ್ಯುತ್ತರವಾಗಿ, ತಮ್ಮ ಎಇಇಗಳು ಅಗತ್ಯಕ್ಕೆ ತಕ್ಕಂತೆ ಆಯಾ ಪ್ರದೇಶದಲ್ಲಿ ಲಭ್ಯವಿರುವ ಕೂಲಿಯಾಳುಗಳನ್ನು ಅಂದಾಜಿಸಿ, ಅವರಲ್ಲಿ ಅಗತ್ಯ ಸಂಖ್ಯೆಯ ಕೂಲಿಯಾಳುಗಳನ್ನು ಸಜ್ಜುಗೊಳಿಸುವ ಸಾಮರ್ಥ್ಯ ಹೊಂದಿರುವಂತಹ ಒಬ್ಬನನ್ನು ಗುಂಪು ನಾಯಕನಾಗಿ ಗುರುತಿಸುತ್ತಾರೆ ಎಂದು ಕೆಆರ್‌ಐಡಿಎಲ್ ವಿವರಿಸಿದೆ. ಬಿಬಿಎಂಪಿಯು ವಹಿಸಿಕೊಟ್ಟ ಕಾಮಗಾರಿಗಳಿಗೆ ಯಾವುದೇ ಹಣವನ್ನು ಮುಂಗಡವಾಗಿ ನೀಡದ ಕಾರಣ ಮತ್ತು ಕೆಆರ್‌ಐಡಿಎಲ್ ಸಾಕಷ್ಟು ಬಂಡವಾಳವನ್ನು ಹೊಂದಿಲ್ಲದ ಕಾರಣ, ಪ್ಯಾನ್ ಸಂಖ್ಯೆಯ ಜೊತೆಗೆ ಆಳುಗಳು ಮತ್ತು ಸಾಮಗ್ರಿಗಳ ಮೇಲೆ ಹಣ ಹೂಡಿ ಪಾವತಿಯಾಗುವರೆಗೆ ಕಾಯುವಷ್ಟು ಆರ್ಥಿಕ ಸಾಮರ್ಥ್ಯ ಮತ್ತು ಸ್ಥಿರತೆ ಹೊಂದಿರುವಂತಹ ಗುಂಪು ನಾಯಕರುಗಳಿಗೆ ಆದ್ಯತೆ ನೀಡಲಾಗುತ್ತದೆ. ಜಿಎಸ್‌ಟಿಯಡಿ ನೋಂದಾಯಿಸಿರುವ ಮತ್ತು ಪ್ಯಾನ್ ಸಂಖ್ಯೆ ಹೊಂದಿರುವಂತಹ ಗುಂಪು ನಾಯಕರುಗಳ ಪಟ್ಟಿ ತಯಾರಿಕೆಗೆ ಕಂಪೆನಿಯು ಅಗತ್ಯ ಕ್ರಮ ಪ್ರಾರಂಭಿಸಿದೆ ಎಂದು ಸಹ ಹೇಳಲಾಗಿದೆ.

ಉತ್ತರವು, ಗುಂಪು ನಾಯಕರುಗಳು ಹೆಚ್ಚು ಸಂಪನ್ಮೂಲಗಳನ್ನು ಹೊಂದಿದ್ದಾರೆ ಮತ್ತು ಅವರನ್ನು ಕೂಲಿಯಾಳುಗಳಲ್ಲಿ ಒಬ್ಬನಾಗಿ ಪರಿಗಣಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಸಾಕ್ಷೀಕರಿಸುತ್ತದೆ. ವಾಸ್ತವವಾಗಿ, ಕಾಮಗಾರಿಗಳನ್ನು ವಹಿಸಲಾಗುತ್ತಿರುವ ಮತ್ತು ಬಿಬಿಎಂಪಿಯ ಕಾಮಗಾರಿಗಳಲ್ಲಿ ತೊಡಗಿರುವ ಎಲ್ಲಾ ಗುಂಪು ನಾಯಕರುಗಳೂ ಜಿಎಸ್‌ಟಿ/ಟಿನ್ ಪರಿಶೀಲನೆಯಿಂದ **ವರ್ಗ–I**ಕ್ಕೆ ಸೇರಿದ ಲೋಕೋಪಯೋಗಿ ಇಲಾಖೆ/ ಕಾಮಗಾರಿ ಗುತ್ತಿಗೆದಾರರು ಎಂಬುದು ತಿಳಿದುಬಂದಿದೆ. ಹೀಗಾಗಿ, ಕೆಆರ್‌ಐಡಿಎಲ್ ಅಳವಡಿಸಿಕೊಂಡಿರುವ ಕಾರ್ಯವಿಧಾನವು ಉಪಗುತ್ತಿಗೆಯ ಸ್ವರೂಪದಲ್ಲಿದೆ ಮತ್ತು ಕೆಟಿಪಿಪಿ ಕಾಯ್ದೆ ಮತ್ತು ಕೇಂದ್ರ ವಿಚಕ್ಷಣ ಆಯೋಗದ ಮಾರ್ಗಸೂಚಿಗಳನ್ನು ಉಲ್ಲಂಘಿಸಿದಂತಾಗಿದೆ.

### *4.5.2 ಹೊರಗುತ್ತಿಗೆ ಸಿಬ್ಬಂದಿಯನ್ನು ಗುಂಪು ನಾಯಕರಾಗಿ ನಿಯೋಜಿಸಿರುವುದು*

ದಾಖಲೆಗಳ ಪರೀಕ್ಷಾ–ತನಿಖೆ ಮಾಡಲಾದ ಒಂಬತ್ತು ಉಪ–ವಿಭಾಗಗಳಲ್ಲಿ[13] 32 ಹೊರಗುತ್ತಿಗೆ ಇಂಜಿನಿಯರ್‌ಗಳು/ಕಾಮಗಾರಿ ನಿರೀಕ್ಷಣಾಧಿಕಾರಿಗಳನ್ನು ಗುಂಪು ನಾಯಕರುಗಳಾಗಿ ಪರಿಗಣಿಸಲಾಗಿದೆ ಮತ್ತು ₹28.22 ಕೋಟಿ ಹಣವನ್ನು ಸೆಳೆದು ಕೂಲಿಯಾಳುಗಳು ಮತ್ತು ಸಾಮಗ್ರಿ ಪೂರೈಕೆಗಾಗಿ ಪಾವತಿಸಲಾಗಿದೆ ಎಂಬುದು ಲೆಕ್ಕಪರಿಶೋಧನೆಯಿಂದ ತಿಳಿದು ಬಂದಿತು. ಮೇಲ್ಕಂಡ ಸಿಬ್ಬಂದಿಗಳು ಎಇಇಗಳಿಗೆ ಅಂದಾಜುಪಟ್ಟಿಗಳ ತಯಾರಿಕೆಯಲ್ಲಿ, ಸ್ಥಳಕ್ಕೆ ತಂದ ಸಾಮಗ್ರಿಗಳ ಗುಣಮಟ್ಟವನ್ನು

[12] ಜಿಎಸ್‌ಟಿ ನೋಂದಣಿ ಸ್ಥಾನಮಾನದ ಅನುಸಾರ.

[13] ದಾವಣಗೆರೆ, ಗದಗ, ಹೂವಿನಹಡಗಲಿ, ಕಲಬುರಗಿ–I, ಕಲಬುರಗಿ–II, ಕೂಡ್ಲಿಗಿ, ಮೈಸೂರು, ಶಿವಮೊಗ್ಗ ಮತ್ತು ಶಿರಸಿ.

ಪರೀಕ್ಷಿಸುವಲ್ಲಿ, ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳ ಅಳತೆಗಳನ್ನು ದಾಖಲಿಸುವಲ್ಲಿ ಸಹಾಯ ಮಾಡುವವರಾಗಿದ್ದರು. ಕೆಆರ್‌ಐಡಿಎಲ್‌ನ ಈ ರೀತಿಯ ಕಾರ್ಯ ವ್ಯವಸ್ಥೆಯು ಅಂದಾಜು ತಯಾರಿಕೆ, ಅಳತೆಗಳನ್ನು ದಾಖಲಿಸುವುದು ಇವುಗಳಲ್ಲಿ ಅಕ್ರಮ ಎಸಗಬಹುದಾದ ಅಪಾಯದಿಂದ ಕೂಡಿದೆ ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳಲ್ಲಿ ಗುಣಮಟ್ಟದೊಂದಿಗೆ ರಾಜಿ ಮಾಡಿಕೊಳ್ಳಬಹದಾಗಿದೆ, ಇದು ವಿವಿಧ ಹಂತಗಳಲ್ಲಿ ಆಂತರಿಕ ನಿಯಂತ್ರಣದ ಕೊರತೆಯನ್ನು ಸೂಚಿಸುತ್ತದೆ.

ಕಂಪೆನಿಯ ಅಧಿಕಾರಿಗಳಿಗೆ ಸಹಾಯ ಮಾಡಲು ಮಾತ್ರವೇ ಹೊರಗುತ್ತಿಗೆ ಇಂಜಿನಿಯರ್‌ಗಳು/ ಕಾಮಗಾರಿ ನಿರೀಕ್ಷಣಾಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ಕೆಆರ್‌ಐಡಿಎಲ್ ಹೇಳಿದೆ. ಹೊರಗುತ್ತಿಗೆ ಸಿಬ್ಬಂದಿಗಳನ್ನು ಅಂದಾಜುಪಟ್ಟಿಗಳ ತಯಾರಿಕೆಯಲ್ಲಿ ತೊಡಗಿಸಿಕೊಳ್ಳುತ್ತಿಲ್ಲ ಮತ್ತು ಉಪ–ವಿಭಾಗಗಳು ಗುಣಮಟ್ಟದ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿವೆ. ಪರೀಕ್ಷಾ–ತನಿಖೆ ನಡೆಸಲಾದ ವಿಭಾಗಗಳು/ಉಪ–ವಿಭಾಗಗಳಲ್ಲಿ ಎಇಇ ಹೊರತುಪಡಿಸಿ ಉಳಿದೆಲ್ಲರೂ ಹೊರಗುತ್ತಿಗೆ ಸಿಬ್ಬಂದಿಗಳಾಗಿರುವುದನ್ನು ಮತ್ತು ಈ ಹೊರಗುತ್ತಿಗೆ ಸಿಬ್ಬಂದಿಯನ್ನೇ ಗುಂಪು ನಾಯಕರುಗಳಾಗಿ ಪರಿಗಣಿಸಿ ಪಾವತಿಗಳನ್ನು ಮಾಡಲಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿರುವ ಕಾರಣ ಉತ್ತರವು ಸಮರ್ಥನೀಯವಾಗಿಲ್ಲ.

## 4.6 ಕಾಮಗಾರಿಗಳ ಅನುಷ್ಠಾನದಲ್ಲಿ ಮಿತವ್ಯಯ ಮತ್ತು ಪರಿಣಾಮಕಾರಿತ್ವ

ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ 114(2)ರ ಪ್ರಕಾರ, ನಿರ್ಮಾಣ ನಿರ್ವಹಣೆಯು ಪೂರ್ವ–ನಿರ್ಧರಿತ ವ್ಯಾಪ್ತಿಯ ಉದ್ದೇಶಗಳಾದ ಕಾರ್ಯವಿಧಾನ, ವೆಚ್ಚ, ಸಮಯ, ಗುಣಮಟ್ಟ ಮತ್ತು ಭಾಗವಹಿಸುವಿಕೆಯ ತೃಪ್ತಿಯೊಂದಿಗೆ ಸಮಯ ಮತ್ತು ಹಣದ ಯೋಜನಾಧ್ಯೇಯಗಳ ಉದ್ದೇಶವನ್ನು ಸಾಧಿಸಲು ಆಧುನಿಕ ನಿರ್ವಹಣಾ ತಂತ್ರಗಳನ್ನು ಬಳಸಿಕೊಂಡು ಯೋಜನೆಯ ಸಮಯದುದ್ದಕ್ಕೂ ಆಳುಗಳು ಮತ್ತು ಸಾಮಗ್ರಿಗಳನ್ನು (ಸಂಪನ್ಮೂಲಗಳನ್ನು) ನಿರ್ದೇಶಿಸುವ ಮತ್ತು ಸಂಯೋಜಿಸುವ ಕಲೆ ಎಂದು ವ್ಯಾಖ್ಯಾನಿಸಲಾಗಿದೆ. ವಿಶಾಲ ಅರ್ಥದಲ್ಲಿ, ಯೋಜನೆಯನ್ನು ಎಚ್ಚರಿಕೆಯಿಂದ ಆಲೋಚಿಸಲಾಗಿದೆ ಮತ್ತು ಯೋಜಿಸಲಾಗಿದೆ, ಸಂಪನ್ಮೂಲಗಳು ಮತ್ತು ವೆಚ್ಚಗಳನ್ನು ವಿವರವಾಗಿ ಲೆಕ್ಕಹಾಕಲಾಗಿದೆ, ಅಗತ್ಯ ಮಾನದಂಡಗಳಿಗೆ ಅನುಗುಣವಾಗಿ ವಿನ್ಯಾಸಗಳನ್ನು ಮಿತವ್ಯಯಕರವಾಗಿ ಮತ್ತು ನಿಖರವಾಗಿ ತಯಾರಿಸಲಾಗುತ್ತದೆ, ಉತ್ತಮ ಗುಣಮಟ್ಟವನ್ನು ಸಾಧಿಸಲು ಕನಿಷ್ಠ ವೆಚ್ಚ ಮತ್ತು ಸಮಯದೊಂದಿಗೆ ಯೋಜನೆಯನ್ನು ಕಡಿಮೆ ಸಮಯದಲ್ಲಿ ಕಾರ್ಯಗತಗೊಳಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿರುವುದನ್ನು ಖಚಿತಪಡಿಸಿಕೊಳ್ಳುವುದಾಗಿದೆ.

ಲೆಕ್ಕಪರಿಶೋಧನೆಯು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೆಳಗಿನ ನ್ಯೂನತೆಗಳನ್ನು ಗಮನಿಸಿದೆ.

### *4.6.1 ಇಡುಗಂಟಿನ ಆಧಾರದ ಮೇಲೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದು*

ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ 90(8)ರ ಪ್ರಕಾರ, ಅಂದಾಜುಪಟ್ಟಿಯು ಅನುಮೋದಿತ ದರಪಟ್ಟಿಗೆ ಅನುಗುಣವಾಗಿ ವಿವರವಾದ ದರ ವಿಶ್ಲೇಷಣೆಯನ್ನು ಒಳಗೊಂಡಿರಬೇಕು ಮತ್ತು ನೀರು ಸರಬರಾಜು, ವಿದ್ಯುದೀಕರಣ ಮುಂತಾದ ಕಾಮಗಾರಿಗಳಿಗೆ ಇಡುಗಂಟು ಒದಗಿಸುವ ವಿಧಾನ ಅನುಸರಿಸಬಾರದು. ಇದಲ್ಲದೆ, ತಾಂತ್ರಿಕ ಮಂಜೂರಾತಿ ನೀಡುವಾಗ ಇಇ/ಎಸ್‌ಇ/ಸಿಇ ಅವರುಗಳು ವಿವರವಾದ ಅಂದಾಜನ್ನು ಸಿದ್ಧಪಡಿಸುವವರೆಗೆ ಮತ್ತು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವವರೆಗೆ ಅಂದಾಜಿನಲ್ಲಿ ಮಾಡಲಾದ ಇಡುಗಂಟು ಬಳಸಬಾರದು ಎಂದು ಸೂಚನೆ ನೀಡಿದ್ದರು.

ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಉಪ–ವಿಭಾಗಗಳ ಎಇಇಗಳು ಸಿದ್ಧಪಡಿಸಿದ ಅಂದಾಜುಪಟ್ಟಿಗಳು ವಿದ್ಯುತ್, ಕೊಳಾಯಿ ವ್ಯವಸ್ಥೆ, ನೀರು ಮತ್ತು ನೈರ್ಮಲ್ಯ ಕಾರ್ಯಗಳಿಗೆ ಇಡುಗಂಟು

ನಿಬಂಧನೆಗಳನ್ನು ಒಳಗೊಂಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಓರ್ವ ಎಇಇ (ವಿದ್ಯುತ್) ವಿದ್ಯುತ್ ಅಂದಾಜುಪಟ್ಟಿಗಳನ್ನು ಇನ್ನೂ ಪರಿಶೀಲಿಸುತ್ತಿದ್ದರೂ ಸಹ, ಆ ಅಂದಾಜುಪಟ್ಟಿಗಳನ್ನು ತಾಂತ್ರಿಕ ಮಂಜೂರಾತಿಗಾಗಿ ಸಂಬಂಧಿತ ವಿಭಾಗಗಳಿಗೆ ರವಾನಿಸಲಾಗಿತ್ತು. ತಾಂತ್ರಿಕ ಮಂಜೂರಾತಿ ಷರತ್ತುಗಳಿಗೆ ವಿರುದ್ಧವಾಗಿ, ಉಪ–ವಿಭಾಗಗಳು ಇಡುಗಂಟು ನಿಬಂಧನೆಗಳನ್ನು ನಿರ್ವಹಿಸಿದ್ದವು ಮತ್ತು ಅನುಗುಣವಾಗಿ ಗುಂಪು ನಾಯಕರುಗಳಿಗೆ ಪಾವತಿ ಮಾಡಿದವು. ಎಂಟು ಉಪ–ವಿಭಾಗಗಳಲ್ಲಿ[14] (42 ಕಾಮಗಾರಿಗಳು) ವಿವರವಾದ ಅಂದಾಜುಪಟ್ಟಿಗಳ ಅನುಪಸ್ಥಿತಿಯಲ್ಲಿ ₹7.92 ಕೋಟಿ (**ಅನುಬಂಧ XV**) ಮೊತ್ತದ ಪಾವತಿಗಳನ್ನು ಮಾಡಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಹೀಗಾಗಿ, ಈ ನಿಟ್ಟಿನಲ್ಲಿ ಕೆಆರ್‌ಐಡಿಎಲ್‌ಗೆ ಕಾಮಗಾರಿವಾರು ಉಳಿತಾಯವನ್ನು ಲೆಕ್ಕಹಾಕಲು ಸಾಧ್ಯವಾಗಲಿಲ್ಲ.

ಲೆಕ್ಕಪರಿಶೋಧನೆಯ ಅವಲೋಕನಗಳನ್ನು ಒಪ್ಪಿಕೊಳ್ಳುತ್ತಾ ಸರ್ಕಾರವು, ಪಾವತಿಗಳನ್ನು ಮಾಡುವ ಮೊದಲು ಉಪಅಂದಾಜುಗಳನ್ನು ತಯಾರಿಸಿ ಅನುಮೋದಿಸಲಾಗುವುದು ಮತ್ತು ಉಪ–ವಿಭಾಗಗಳಿಗೆ ಸೂಕ್ತವಾಗಿ ಸೂಚನೆ ನೀಡಲಾಗುವುದು ಎಂದು ಹೇಳಿದೆ.

### *4.6.2 ಅಧಿಕಾರವ್ಯಾಪ್ತಿಗೆ ಒಳಪಡದ ಪ್ರದೇಶದಲ್ಲಿ ಕೆಲಸಗಳ ಕಾರ್ಯಗತಗೊಳಿಸಿರುವುದು*

ಕೆಆರ್‌ಐಡಿಎಲ್ ರಾಜ್ಯಾದ್ಯಂತ ಪೂರ್ವ–ನಿರ್ಧರಿತ ಅಧಿಕಾರವ್ಯಾಪ್ತಿಗಳೊಂದಿಗೆ ಕಾರ್ಯನಿರ್ವಹಿಸುವ ವಿಭಾಗಗಳು ಮತ್ತು ಉಪ–ವಿಭಾಗಗಳನ್ನು ಹೊಂದಿದೆ. ವಿವಿಧ ಇಲಾಖೆಗಳು ವಹಿಸಿಕೊಡುವ ಕಾಮಗಾರಿಗಳನ್ನು ಅಧಿಕಾರವ್ಯಾಪ್ತಿ ಹೊಂದಿರುವ ಸಂಬಂಧಪಟ್ಟ ಉಪ–ವಿಭಾಗಗಳು ಕಾರ್ಯಗತಗೊಳಿಸುತ್ತವೆ. ಪರೀಕ್ಷಾ–ತನಿಖೆ ಮಾಡಲಾದ 348 ಕಾಮಗಾರಿಗಳಲ್ಲಿ ₹26.52 ಕೋಟಿ ವೆಚ್ಚದ 46 (ಶೇಕಡ 13) ಕಾಮಗಾರಿಗಳನ್ನು ಮೂರು ಕೆಆರ್‌ಐಡಿಎಲ್ ಬಿಬಿಎಮ್‌ಪಿ ಉಪ–ವಿಭಾಗಗಳಿಗೆ,[15] ಅವುಗಳ ವ್ಯಾಪ್ತಿಯೊಳಗಿನ ಕಾಮಗಾರಿಗಳ ಜೊತೆಗೆ, ಅಧಿಕಾರವ್ಯಾಪ್ತಿ ಮೀರಿ (143ರಿಂದ 475 ಕಿಮೀ) ಬೆಂಗಳೂರಿನಿಂದ ಬಹುದೂರದ ಮೈಸೂರು (143 ಕಿಮೀ), ಚಿತ್ರದುರ್ಗ (202 ಕಿಮೀ), ಶಿವಮೊಗ್ಗ (302 ಕಿಮೀ) ಮತ್ತು ಬಾಗಲಕೋಟೆ (475 ಕಿಮೀ) ಜಿಲ್ಲೆಗಳಲ್ಲಿ ವಹಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಅಂತಹ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೂಲಿಯಾಳುಗಳು, ಸಾಮಗ್ರಿ ಮತ್ತು ಯಂತ್ರೋಪಕರಣಗಳ ಖರೀದಿ, ಅಂದಾಜುಪಟ್ಟಿಗಳ ತಯಾರಿಕೆಗಾಗಿ ಅಥವಾ ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆಗಾಗಿ ಯೋಜನಾ ಅಧಿಕಾರಿಗಳ ಪ್ರವಾಸ ಕಾರ್ಯಕ್ರಮ, ಸಂಬಂಧಿತ ಮಾಪನ ಪುಸ್ತಕಗಳನ್ನು ಪರಿಶೋಧನೆಗೆ ಒದಗಿಸಲು ಕೆಆರ್‌ಐಡಿಎಲ್ ವಿಫಲವಾಗಿದೆ.

ಈ ಉಪ–ವಿಭಾಗಗಳ ಮೂಲಕ ಕಾರ್ಯಗತಗೊಳಿಸಿರುವುದು ಸಮರ್ಥನೀಯವಾಗಿಲ್ಲ ಮತ್ತು ಆಯಾ ಪ್ರದೇಶಗಳಲ್ಲೇ ಕೆಆರ್‌ಐಡಿಎಲ್ ಉಪ–ವಿಭಾಗಗಳು ಅಸ್ತಿತ್ವದಲ್ಲಿರುವುದರಿಂದ ವಾಸ್ತವವಾಗಿ ಈ ಉಪ–ವಿಭಾಗಗಳಿಂದ (ಬಿಬಿಎಮ್‌ಪಿ–ಕೆಆರ್‌ಐಡಿಎಲ್) ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಖಚಿತಪಡಿಸಲು ಸಾಧ್ಯವಾಗಲಿಲ್ಲ.

ಪ್ರತ್ಯುತ್ತರವಾಗಿ, ಅನಿವಾರ್ಯ ಸಂದರ್ಭಗಳಿಂದಾಗಿ ಮತ್ತು ಕಾಮಗಾರಿ ವಹಿಸುವ ಸಂಸ್ಥೆಗಳ ಸೂಚನೆಗಳ ಅನುಸಾರ ಕೆಲವು ವಿಭಾಗಗಳು/ಉಪ–ವಿಭಾಗಗಳು ತಮ್ಮ ಅಧಿಕಾರವ್ಯಾಪ್ತಿಯನ್ನು ಮೀರಿ ಕಾಮಗಾರಿಗಳನ್ನು ನಿರ್ವಹಿಸುವ ಅಗತ್ಯವಿದೆ ಎಂದು ಉತ್ತರಿಸಲಾಗಿದೆ. ಎಲ್ಲಾ ವಿಭಾಗಗಳು ಮತ್ತು ಉಪ–ವಿಭಾಗಗಳು ತಮ್ಮ ವ್ಯಾಪ್ತಿಯಲ್ಲಿ ಮಾತ್ರ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸುತ್ತೋಲೆ ಸೂಚನೆಗಳನ್ನು ನೀಡಲಾಗಿದೆ ಎಂದೂ ಹೇಳಿದೆ.

[14] ಬಸವನ ಬಾಗೇವಾಡಿ, ಕಲಬುರ್ಗಿ–1, ಕೋಲಾರ, ಕೊಳ್ಳೇಗಾಲ, ಕೊಪ್ಪಳ, ಕೂಡ್ಲಿಗಿ, ಮೈಸೂರು ಮತ್ತು ವಿಜಯಪುರ.

[15] ದಾಸರಹಳ್ಳಿ, ಪೂರ್ವ–I ಮತ್ತು ಆರ್‌ಆರ್ ನಗರ.

ಕೆಆರ್‌ಐಡಿಎಲ್ ವಿಭಾಗಗಳು ಆಯಾ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿರುವುದರಿಂದ ಮತ್ತು ಕಾಮಗಾರಿಯ ಸ್ಥಳದಿಂದ ದೂರದಲ್ಲಿರುವ ಕೆಆರ್‌ಐಡಿಎಲ್–ಬಿಬಿಎಮ್‌ಪಿ ಉಪ–ವಿಭಾಗಗಳಿಗೆ ಕಾಮಗಾರಿಗಳನ್ನು ವಹಿಸಿಕೊಟ್ಟಿರುವುದಕ್ಕೆ ಯಾವುದೇ ಸಮರ್ಥನೆ ಇಲ್ಲದಿರುವುದರಿಂದ ಉತ್ತರವು ಸ್ವೀಕಾರಾರ್ಹವಾಗಿಲ್ಲ.

## 4.7 ಬಿಬಿಎಂಪಿ ವಹಿಸಿರುವ ಕಾಮಗಾರಿಗಳ ನಿರ್ವಹಣೆ

ಬಿಬಿಎಮ್‌ಪಿಯ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಕೆಆರ್‌ಐಡಿಎಲ್, ಸಿಇ ಮತ್ತು ಎಸ್‌ಇ ಇವರುಗಳ ಉಸ್ತುವಾರಿಯಲ್ಲಿ, ಒಂದು ಪ್ರತ್ಯೇಕ ವಿಭಾಗವನ್ನು ಹೊಂದಿದೆ. ಕಾಮಗಾರಿ ವಹಿಸುವ ಇತರ ಸಂಸ್ಥೆಗಳಿಗಿಂತ ಭಿನ್ನವಾಗಿ, ಬಿಬಿಎಮ್‌ಪಿಯು ನಿರ್ದಿಷ್ಟ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಕೆಆರ್‌ಐಡಿಎಲ್‌ಗೆ ಕಾಮಗಾರಿಗಳನ್ನು ವಹಿಸಿಕೊಡುತ್ತದೆ. ಬಿಬಿಎಮ್‌ಪಿಯಿಂದ ವಹಿಸಲ್ಪಟ್ಟ ಮತ್ತು ಕೆಆರ್‌ಐಡಿಎಲ್‌ನಿಂದ ಕಾರ್ಯಗತಗೊಂಡ ಕಾಮಗಾರಿಗಳ ಪ್ರಮುಖ ಲಕ್ಷಣಗಳು ಕೆಳಕಂಡಂತಿವೆ:

- ❖ ಬಿಬಿಎಂಪಿ ಇಂಜಿನಿಯರ್‌ಗಳು ಲೋಕೋಪಯೋಗಿ ಇಲಾಖೆಯ ದರಪಟ್ಟಿಯನ್ನು ಅಳವಡಿಸಿಕೊಂಡು ಅಂದಾಜುಪಟ್ಟಿಗಳನ್ನು ಸಿದ್ಧಪಡಿಸಿದ್ದಾರೆ, ತಾಂತ್ರಿಕ ಮಂಜೂರಾತಿ ಮತ್ತು ಆಡಳಿತಾತ್ಮಕ ಅನುಮೋದನೆಯನ್ನೂ ಸಹಾ ಬಿಬಿಎಂಪಿಯೇ ನೀಡಿದೆ. ಕೆಆರ್‌ಐಡಿಎಲ್‌ಗೆ ವಹಿಸಲಾದ ಕಾಮಗಾರಿಗಳ ಮೇಲೆ, ಬಿಬಿಎಮ್‌ಪಿಯು ಕೆಆರ್‌ಐಡಿಎಲ್ ಸೇವಾ ಶುಲ್ಕಗಳು, ಜಿಎಸ್‌ಟಿ, ಕಾರ್ಮಿಕ ಕಲ್ಯಾಣ ಉಪಕರಗಳಿಗೆ ಹೆಚ್ಚುವರಿ ವೆಚ್ಚವನ್ನು ಭರಿಸುತ್ತದೆ ಮತ್ತು ವಾಸ್ತವ ವೆಚ್ಚ ಕಾಮಗಾರಿ ಮಂಜೂರಾದ ಅಂದಾಜು ಮೌಲ್ಯಕ್ಕಿಂತ ಹೆಚ್ಚಾಗುತ್ತದೆ.
- ❖ ಬಿಬಿಎಂಪಿಯು ವಹಿಸಿರುವ ಕಾಮಗಾರಿಗಳಿಗೆ ನಿರ್ದಿಷ್ಟ ಕಾಲಮಿತಿಗಳನ್ನು ರೂಪಿಸಲಾಗಿದೆ.
- ❖ ಬಿಬಿಎಮ್‌ಪಿ ಅಳತೆಗಳನ್ನು ಮಾಪನ ಪುಸ್ತಕಗಳಲ್ಲಿ ದಾಖಲಿಸುತ್ತದೆ ಮತ್ತು ಮೂರನೇ ವ್ಯಕ್ತಿಯ ಪರಿಶೋಧನೆ ಮೂಲಕ ಕಾಮಗಾರಿಗಳ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡುತ್ತದೆ.
- ❖ ಬಿಬಿಎಮ್‌ಪಿ ಚಾಲ್ತಿ ಕಾಮಗಾರಿ ಬಿಲ್‌ಗಳನ್ನು ಸಿದ್ಧಪಡಿಸುತ್ತದೆ ಮತ್ತು ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಪಾವತಿಗಳನ್ನು ಮಾಡಲಾಗುತ್ತದೆ.
- ❖ ಚಾಲ್ತಿ ಕಾಮಗಾರಿ ಬಿಲ್‌ಗಳಿಂದ ರಾಯಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ಉಪಕರ, ಜಿಎಸ್‌ಟಿ ಮತ್ತು ಹೆಚ್ಚಿನ ಭದ್ರತಾ ಠೇವಣಿ ಸೇರಿದಂತೆ ಎಲ್ಲಾ ಶಾಸನಬದ್ಧ ಶುಲ್ಕಗಳನ್ನು ಕಡಿತಗೊಳಿಸಲಾಗುತ್ತದೆ ಮತ್ತು ಬಿಬಿಎಂಪಿಯೇ ಸಂಬಂಧಿತ ಪ್ರಾಧಿಕಾರಕ್ಕೆ ಜಮೆ ಮಾಡುತ್ತದೆ.
- ❖ ದೋಷದ ಹೊಣೆಗಾರಿಕೆ ಅವಧಿಯನ್ನು ಪೂರ್ಣಗೊಳಿಸಿದ ನಂತರ ಹೆಚ್ಚಿನ ಭದ್ರತಾ ಠೇವಣಿಗಳನ್ನು ಕೆಆರ್‌ಐಡಿಎಲ್‌ಗೆ ಬಿಡುಗಡೆ ಮಾಡಲಾಗುತ್ತದೆ.

**ಬಿಬಿಎಮ್‌ಪಿ–ಕೆಆರ್‌ಐಡಿಎಲ್ ವಿಭಾಗಗಳಿಗೆ ವಹಿಸಲಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಮುಖ ಲೆಕ್ಕಪರಿಶೋಧನೆ ಸಂಶೋಧನೆಗಳು:**

### *4.7.1 ತಪ್ಪಿಸಬಹುದಾದ ಹೆಚ್ಚುವರಿ ವೆಚ್ಚಕ್ಕೆ ಕಾರಣವಾದ ಪರಿಷ್ಕರಣ–ಪೂರ್ವ ದರದ ಅಳವಡಿಕೆ*

ಪೂರ್ವ–II (ಬಿಬಿಎಮ್‌ಪಿ) ಉಪ–ವಿಭಾಗದಲ್ಲಿ ಆಯ್ದ ಕಾಮಗಾರಿಗಳಿಗೆ ಸಂಬಂಧಿಸಿದ ಅಂದಾಜುಪಟ್ಟಿಗಳು, ಮಾಸಿಕ ಕಾಮಗಾರಿ ಬಿಲ್‌ಗಳು ಮತ್ತು 2016–17ರ ಬೆಂಗಳೂರು ವೃತ್ತದ ದರಪಟ್ಟಿ ಮುಂತಾದ ದಾಖಲೆಗಳ ಪರೀಕ್ಷಾ–ತನಿಖೆಯಿಂದ ರಸ್ತೆ ಕಾಮಗಾರಿಗಳಿಗೆ ಒದಗಿಸಿದ ಮತ್ತು ಕಾರ್ಯಗತಗೊಳಿಸಿದ ಬಾಬ್ತುಗಳಲ್ಲಿ ಇತರವುಗಳ ಜೊತೆಗೆ 'ಡೆನ್ಸ್ ಗ್ರೇಡೆಡ್ ಬಿಟುಮಿನಸ್ ಮಕಾಡಮ್' ಮತ್ತು 'ಬಿಟುಮಿನಸ್ ಕಾಂಕ್ರೀಟ್' ಸೇರಿದ್ದವು ಎಂಬುದು ತಿಳಿದು ಬಂದಿತು. ದರಪಟ್ಟಿಯಲ್ಲಿ ನಿಗದಿಪಡಿಸಿದ್ದ ಬಾಬ್ತುಗಳ ದರಗಳು ಬಿಟುಮೆನ್ ಮತ್ತು ಕಾಂಕ್ರೀಟ್ ದರಗಳಲ್ಲಿನ ಬದಲಾವಣೆಗಳಿಗೆ ಒಳಪಡುತ್ತವೆ ಹಾಗೂ ಲೋಕೋಪಯೋಗಿ ಇಲಾಖೆಯು ಪರಿಷ್ಕೃತ ದರಗಳನ್ನು ನೀಡಿತ್ತಾದ್ದರಿಂದ, ಅಂದಾಜುಪಟ್ಟಿಗಳನ್ನು ತಯಾರಿಸಲು ಮತ್ತು ನಂತರದ ಪಾವತಿಗಳಿಗೆ ಪರಿಷ್ಕೃತ ದರಗಳನ್ನು ಪರಿಗಣಿಸಬೇಕಾಗಿತ್ತು.

ಹಾಗಿದ್ದಾಗ್ಯೂ, ಉಪ–ವಿಭಾಗಗಳು ಪರಿಷ್ಕೃತ ದರ ಅಳವಡಿಸಿಕೊಳ್ಳದೇ ಇರುವುದನ್ನು ಗಮನಿಸಲಾಯಿತು. ಹೀಗಾಗಿ, ಆರು ಪ್ರಕರಣಗಳಲ್ಲಿ ಪರಿಷ್ಕರಣ–ಪೂರ್ವ ದರದ ಅಳವಡಿಕೆಯು ₹67.67 ಲಕ್ಷದಷ್ಟು ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿದೆ.

**ಕೋಷ್ಟಕ 4.2: ಪರಿಷ್ಕರಣ–ಪೂರ್ವ ದರದ ಅಳವಡಿಕೆಯಿಂದಾಗಿ ಹೆಚ್ಚುವರಿ ವೆಚ್ಚ**

(₹ ಗಳಲ್ಲಿ)

| ವಿವರಗಳು | ಅಳವಡಿಸಿಕೊಂಡ ದರ | ಅಳವಡಿಸಿಕೊಳ್ಳಬೇಕಿದ್ದ ದರ | ಕಾರ್ಯಗತಗೊಳಿಸಿದ ಪರಿಮಾಣ | ಅಧಿಕ ವೆಚ್ಚ |
|---|---|---|---|---|
| ಎ | ಬಿ | ಸಿ | ಡಿ | ಇ=(ಬಿ–ಸಿ) *ಡಿ |
| ಡೆನ್ಸ್ ಗ್ರೇಡ್ ಬಿಟುಮಿನಸ್ ಮಕಾಡಮ್ | 7,120.02 | 6,279.44 | 4,057 | 34,09,956 |
| ಬಿಟುಮಿನಸ್ ಕಾಂಕ್ರೀಟ್ | 8,118.54 | 7,083.98 | 3,245 | 33,57,478 |
| ಒಟ್ಟು ಅಧಿಕ ವೆಚ್ಚ | | | | 67,67,434 |

ಆಧಾರ: ದರಪಟ್ಟಿ/ನೀಡಿಕೆ ದರ ಮತ್ತು ಅಂತಿಮ ಕಾಮಗಾರಿ ಬಿಲ್‌ಗಳು

ಇದಕ್ಕೆ ಉತ್ತರವಾಗಿ, ಅಂದಾಜುಪಟ್ಟಿಗಳನ್ನು ಸಿದ್ಧಗಳಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ ಮತ್ತು ಪ್ರತಿ ಬಾಬ್ತಿಗೆ ಮಾಡಲಾಗುವ ಪಾವತಿಗಳನ್ನು ಬಿಬಿಎಂಪಿಯಲ್ಲಿಯ ತಾಂತ್ರಿಕ ವಿಚಕ್ಷಣ ನಿಯಂತ್ರಣ ಕೋಶವು ಪರಿಶೀಲಿಸುತ್ತದೆ ಮತ್ತು ಅದರಂತೆ ಕಾಮಗಾರಿಗಳನ್ನು ನಿರ್ವಹಿಸುತ್ತಿದೆ ಎಂದು ತಿಳಿಸಲಾಗಿದೆ. ಗುಂಪು ನಾಯಕರುಗಳಿಗೆ ಕೂಲಿ ಮತ್ತು ಯಂತ್ರೋಪಕರಣಗಳ ಸಂಗ್ರಹಣೆಗಾಗಿ ಪಾವತಿಗಳನ್ನು ಕೆಆರ್‌ಐಡಿಎಲ್ ಮಾಡಿರುವುದರಿಂದ ಉತ್ತರವು ಸಮರ್ಥನೀಯವಾಗಿಲ್ಲ, ಪರಿಷ್ಕರಣೆಗೆ ಅನುಗುಣವಾಗಿ ಪಾವತಿಗಳನ್ನು ನಿಯಂತ್ರಿಸಲು ಕೆಆರ್‌ಐಡಿಎಲ್ ವಿಫಲವಾಗಿದೆ.

### *4.7.2 ಬಿಬಿಎಮ್‌ಪಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆಲಸದ ಉಳಿತಾಯದ ನಷ್ಟ*

ಕೇಂದ್ರ ಕಛೇರಿಯ ಸೂಚನೆಗಳು ಮತ್ತು ಮಂಡಳಿ ಸಭೆಗಳ ನಿರ್ಧಾರಗಳ ಅನುಸಾರ, ಕಾಮಗಾರಿಯ ಪ್ರತಿ ಬಾಬ್ತಿನ ಕೆಲಸದ ದರವನ್ನು[16] ಶೇಕಡ 90 ದರಪಟ್ಟಿಯ ದರ ಮತ್ತು ಶೇಕಡ 10 ಕೆಆರ್‌ಐಡಿಎಲ್ ಕೆಲಸದ ಉಳಿತಾಯ[17] ಪರಿಗಣಿಸಿ ಲೆಕ್ಕಹಾಕಬೇಕು. ಪರೀಕ್ಷಾ–ತನಿಖೆ ನಡೆಸಲಾದ ಎಲ್ಲಾ ನಾಲ್ಕು ಉಪ–ವಿಭಾಗಗಳಲ್ಲಿ ಬಿಬಿಎಮ್‌ಪಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಡಿಮೆ ಉದ್ಯೋಗ ಉಳಿತಾಯದ ನಿದರ್ಶನಗಳನ್ನು ಗಮನಿಸಲಾಗಿದೆ, ಇದು ಕೆಆರ್‌ಐಡಿಎಲ್ ನಿಗದಿತ ಶೇಕಡಾ 10ಕ್ಕೆ ಪ್ರತಿಯಾಗಿ ಶೇಕಡಾ 5 ಕೆಲಸದ ಉಳಿತಾಯವನ್ನು ವರದಿ ಮಾಡಿದ್ದರಿಂದಾಗಿ ಉಂಟಾಗಿದೆ. ಇದು ಕೂಲಿ ಮತ್ತು ಸಾಮಗ್ರಿಗಳಿಗಾಗಿನ ಪಾವತಿಯ ರೂಪದಲ್ಲಿ ಬಿಬಿಎಮ್‌ಪಿ/ಗುಂಪು ನಾಯಕರುಗಳಿಗೆ ಅನುಚಿತ ಲಾಭ ಮಾಡಿಕೊಡುವಲ್ಲಿ ಪರಿಣಮಿಸಿದೆ.

ಪ್ರತ್ಯುತ್ತರವಾಗಿ, ಬಿಬಿಎಂಪಿ ಉಪ–ವಿಭಾಗಗಳು ವಿಜೆಎನ್‌ಎಲ್, ಅಲ್ಪಸಂಖ್ಯಾತರ ಇಲಾಖೆ ಮುಂತಾದ ಇತರ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ವಹಿಸಲ್ಪಟ್ಟ ಕಾರ್ಯಗಳನ್ನು ಸಹ ನಿರ್ವಹಿಸುತ್ತಿವೆ, ಇದಕ್ಕಾಗಿ ಕಂಪನಿಯು ಕೆಲಸದ ಉಳಿತಾಯವನ್ನು ಶೇಕಡಾ 10ರಷ್ಟು ವಸೂಲು ಮಾಡುತ್ತಿದೆ ಎಂದು ಉತ್ತರಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ವೆಚ್ಚದ ಏರಿಕೆಯನ್ನು ಕಾಮಗಾರಿಗಳನ್ನು ರಾತ್ರಿ ವೇಳೆಯಲ್ಲಿ, ನಿರ್ಬಂಧಿತ ಪ್ರದೇಶಗಳಲ್ಲಿ, ಕಿರಿದಾದ ಲೇನ್‌ಗಳಲ್ಲಿ, ಹೆಚ್ಚಿನ ಟ್ರಾಫಿಕ್ ದಟ್ಟಣೆಯ ಪ್ರದೇಶಗಳಲ್ಲಿ ನಿರ್ವಹಿಸುವುದಕ್ಕೆ ಅಧ್ಯಾರೋಪಿಸಲಾಗಿದೆ, ಮತ್ತು ಬಿಬಿಎಂಪಿ

[16] ಕೆಲಸದ ದರವು ಇಇ/ಕೆಆರ್‌ಐಡಿಎಲ್ ಲೆಕ್ಕ ಹಾಕಿದ ದರವಾಗಿದ್ದು ಕಾರ್ಮಿಕ ಪಾವತಿಗಳಿಗೆ ಅಳವಡಿಸಿಕೊಳ್ಳಬೇಕಾದ ದರವಾಗಿದೆ.

[17] ದರಪಟ್ಟಿಯ ಬಾಬ್ತಿನ ದರದಲ್ಲಿ ಕೆಲಸದ ದರ ಕಳೆದಾಗ ಕೆಲಸದ ಉಳಿತಾಯ ದೊರಕುತ್ತದೆ.

ಕಾಮಗಾರಿಗಳಲ್ಲಿನ ಕೆಲಸದ ಉಳಿತಾಯವನ್ನು ಪ್ರಧಾನ ಕಚೇರಿಗೆ  ಪೂರ್ವಭಾವಿಯಾಗಿ ತಿಳಿಸಿ ಶೇಕಡಾ 5ಕ್ಕೆ ಸೀಮಿತಗೊಳಿಸಲಾಗಿದೆ ಹಾಗೂ ಇದು ಮಂಡಳಿಯ ನಿರ್ದೇಶನಗಳಿಗೆ (07 ಮಾರ್ಚ್ 2019ರಂದು ನಡೆದ ನಿರ್ದೇಶಕರ ಮಂಡಳಿಯ 193ನೇ ಸಭೆ) ಅನುಗುಣವಾಗಿಯೇ ಇದೆ. ನಿರ್ದೇಶಕರ ಮಂಡಳಿಯು ತನ್ನ 194ನೇ ಸಭೆಯಲ್ಲಿ ಶೇಕಡಾ 10ರಷ್ಟು ಕೆಲಸದ ಉಳಿತಾಯವನ್ನೇ ಪುನಸ್ಥಾಪಿಸಲು ನಿರ್ಧರಿಸಿದ ಕಾರಣ ಉತ್ತರವು ಸ್ವೀಕಾರಾರ್ಹವಾಗಿಲ್ಲ.

# ಅಧ್ಯಾಯ V
# ಲೆಕ್ಕಪತ್ರ ನಿರ್ವಹಣೆ, ಆಂತರಿಕ ನಿಯಂತ್ರಣಗಳು ಮತ್ತು ಮೇಲ್ವಿಚಾರಣೆ



## ಅಧ್ಯಾಯ 5 – ಲೆಕ್ಕಪತ್ರ ನಿರ್ವಹಣೆ, ಆಂತರಿಕ ನಿಯಂತ್ರಣಗಳು ಮತ್ತು ಮೇಲ್ವಿಚಾರಣೆ

ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳ ಅಧ್ಯಾಯ–4, ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳು, ಲೆಕ್ಕಪತ್ರ ವ್ಯವಸ್ಥೆ, ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮತ್ತು ಸಮರ್ಪಕವಾದ ಲೆಕ್ಕಪತ್ರ ನಿರ್ವಹಣೆಗಾಗಿ ನಿರ್ವಹಿಸಬೇಕಾದ ದಾಖಲೆಗಳನ್ನು ನಿಗದಿಪಡಿಸುತ್ತದೆ.

ಲೆಕ್ಕಪತ್ರ ನಿರ್ವಹಣೆ, ಆಂತರಿಕ ನಿಯಂತ್ರಣ ವ್ಯವಸ್ಥೆಗಳಲ್ಲಿನ ಸಮಸ್ಯೆಗಳ ಮೌಲ್ಯಮಾಪನ ಮತ್ತು ಜಾರಿಯಲ್ಲಿರುವ ಸಂಹಿತೆಯ ನಿಬಂಧನೆಗಳು ಮತ್ತು ಸ್ಥಾಯಿ ಆದೇಶಗಳ ಮೇಲ್ವಿಚಾರಣೆಯು ಮಂಡಳಿಯ ಸಭೆಗಳನ್ನು ಅಗತ್ಯತೆಗೆ ತಕ್ಕಷ್ಟು ನಡೆಸದಿರುವುದು ಮತ್ತು ಲೆಕ್ಕಪರಿಶೋಧನಾ ಸಮಿತಿಯ ನಿಷ್ಪರಿಣಾಮಕಾರಿ ಕಾರ್ಯನಿರ್ವಹಣೆ ಮುಂತಾದ ಹಲವಾರು ನ್ಯೂನತೆಗಳನ್ನು ತಿಳಿಯಪಡಿಸಿತು. ಇಲಾಖೆಗಳಿಂದ ಹಣ ಬಿಡುಗಡೆಯಾಗಿದ್ದರೂ ಕಾಮಗಾರಿಗಳಿಗೆ ಕಾಲಮಿತಿ ನಿಗದಿಪಡಿಸದ ಕಾರಣ ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬಗಳಿದ್ದವು.

ಕರ್ನಾಟಕ ಸರ್ಕಾರದ ಆದೇಶಗಳ ಅನ್ವಯ, ಕೆಆರ್‌ಐಡಿಎಲ್ ಕಾರ್ಯಗತಗೊಳಿಸಿದ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವ ಅಗತ್ಯತೆಯನ್ನು ಪಾಲಿಸಲಾಗಿಲ್ಲ ಮತ್ತು ಕಾರ್ಯಗತಗೊಳಿಸಿಲ್ಲ.

ಸ್ಥಾಯಿ ಆದೇಶಗಳಲ್ಲಿ ನಿಗದಿಪಡಿಸಿದ ಖರೀದಿಗಳ, ಸ್ವೀಕೃತಿಗಳ, ನೀಡಿಕೆಗಳ ಮತ್ತು ಲೆಕ್ಕಪತ್ರದ ಮೇಲಿನ ನಿಯಂತ್ರಣಗಳನ್ನು ಅನುಸರಿಸಿಲ್ಲ. ಖಾಯಂ ಉಗ್ರಾಣಪಾಲಕರ ಮಂಜೂರಾದ ಹುದ್ದೆ ಇರಲಿಲ್ಲ ಮತ್ತು ಉಗ್ರಾಣಪಾಲಕರ/ ಖಾಯಂ ಲೆಕ್ಕಗುಮಾಸ್ತರ ಅನುಪಸ್ಥಿತಿಯಲ್ಲಿ, ಹೆಚ್ಚಿನ ಮೌಲ್ಯದ ಸಾಮಗ್ರಿಗಳನ್ನು ಸ್ವೀಕೃತಿಗಳ ಮತ್ತು ನೀಡಿಕೆಗಳ ಮಾನ್ಯತಾ ಪ್ರಮಾಣೀಕರಣವಿಲ್ಲದೆ ಹೊರಗುತ್ತಿಗೆ ಸಿಬ್ಬಂದಿಗಳು ನಿರ್ವಹಿಸುತ್ತಿದ್ದರು.

ಕಾರ್ಯಗತಗೊಳಿಸಿದ ಕಾಮಗಾರಿಗಳ ಗುಣಮಟ್ಟವನ್ನು ಸಮರ್ಪಕವಾಗಿ ಮೇಲ್ವಿಚಾರಣೆ ಮಾಡಲಾಗಿಲ್ಲ ಮತ್ತು ಕಾಮಗಾರಿಗಳ ಪೂರ್ಣಗೊಳಿಸುವಿಕೆಯ ಬಗ್ಗೆ ಮೂರನೇ ವ್ಯಕ್ತಿಯ ತಪಾಸಣಾ ವರದಿಗಳು ಲಭ್ಯವಿರಲಿಲ್ಲ.

ಸಾಕಷ್ಟು ಲೆಕ್ಕಪತ್ರ ನಿಯಂತ್ರಣಗಳನ್ನು ಕಾರ್ಯರೂಪಿಸದಿದ್ದುದು ಮತ್ತು ಜಾರಿಗೊಳಿಸದಿದ್ದುದು ಮಾಸಿಕ ವರದಿಗಳನ್ನು ಸಲ್ಲಿಸದಿರುವಲ್ಲಿ ಪರಿಣಮಿಸಿತು, ಇದು ಸ್ಥಾಯಿ ಆದೇಶಗಳಡಿಯಲ್ಲಿ ಅಗತ್ಯವಿರುವಂತೆ ಮಂಡಳಿಯಿಂದ ಮಾಸಿಕ ಲೆಕ್ಕಪತ್ರಗಳು ಮತ್ತು ತ್ರೈಮಾಸಿಕ ಹಣಕಾಸು ತ:ಖ್ತೆಗಳನ್ನು ಮೌಲ್ಯಮಾಪನ ಮಾಡದಿರುವಲ್ಲಿ ಪರಿಣಮಿಸಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

## 5.1 ಕೆಆರ್‌ಐಡಿಎಲ್‌ನಲ್ಲಿ ಲೆಕ್ಕಪತ್ರ ನಿರ್ವಹಣಾ ವ್ಯವಸ್ಥೆ

ವಿವಿಧ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಕೆಆರ್‌ಐಡಿಎಲ್ ಸ್ವೀಕರಿಸಿದ ಹಣವನ್ನು ಕಾಮಗಾರಿ ಖಾತೆಯಲ್ಲಿ (ಕೇಂದ್ರ ಕಛೇರಿಯಲ್ಲಿ ನಿರ್ವಹಿಸಲಾದ ಬ್ಯಾಂಕ್ ಖಾತೆ) ಠೇವಣಿ ಮಾಡಲಾಗುತ್ತದೆ. ನಮೂನೆ–9ರಲ್ಲಿ[18] ಹಣಕ್ಕಾಗಿ ಉಪ–ವಿಭಾಗಗಳಿಂದ ವಿನಂತಿಯನ್ನು ಸ್ವೀಕರಿಸಿದ ನಂತರ, ಪ್ರತಿ ಕಾಮಗಾರಿಗೆ ಒಂದು ವಿಶಿಷ್ಟವಾದ ವರ್ಕ್ ಕೋಡ್ ರಚಿಸಲಾಗುತ್ತದೆ ಮತ್ತು ಉಪ–ವಿಭಾಗಗಳಿಗೆ ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆ.

ಉಪ–ವಿಭಾಗಗಳು ಕಾಮಗಾರಿ ಬಿಲ್ ಮತ್ತು ಮಾಸಿಕ ರನ್ನಿಂಗ್ ಅಕೌಂಟ್ ಬಿಲ್ ತಯಾರಿಸುತ್ತವೆ, ವಿಭಾಗೀಯ ಕಚೇರಿಯಲ್ಲಿ ಎಇ ಮತ್ತು ಎಇಇ (ತಾಂತ್ರಿಕ) ಇವರುಗಳು ಅಂದಾಜುಪಟ್ಟಿಗಳೊಂದಿಗೆ ಪರಿಶೀಲಿಸುತ್ತಾರೆ. ಪರಿಶೀಲಿಸಲಾದ ಮಾಸಿಕ ಲೆಕ್ಕಪತ್ರಗಳನ್ನು ಕೆಆರ್‌ಐಡಿಎಲ್ ಕೇಂದ್ರ ಕಛೇರಿಯ ಲೆಕ್ಕಪತ್ರ ವಿಭಾಗಕ್ಕೆ ರವಾನಿಸಲಾಗುತ್ತದೆ. ಪರಿಶೀಲನೆಯ ನಂತರ ಅಂತಿಮ ಬಿಲ್ ಅನ್ನು ಒಪ್ಪಿಗೆ ಮತ್ತು ಹೊಂದಾಣಿಕೆಗಳಿಗಾಗಿ ಸಂಬಂಧಿಸಿದ ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ರವಾನಿಸಲಾಗುತ್ತದೆ. ಲೆಕ್ಕಪತ್ರ ವಿಭಾಗವು ಎಲ್ಲಾ ವಹಿವಾಟುಗಳನ್ನು ಸಂಕಲಿಸುತ್ತದೆ, ಮಾಸಿಕ ಕ್ರೋಢೀಕೃತ ಲೆಕ್ಕಪತ್ರವನ್ನು ತಯಾರಿಸುತ್ತದೆ, ತ್ರೈಮಾಸಿಕ ಮತ್ತು ಅರ್ಧ–ವಾರ್ಷಿಕ ಬ್ಯಾಲೆನ್ಸ್ ಶೀಟ್ ಹಾಗೂ ಲಾಭ ಮತ್ತು ನಷ್ಟದ ಲೆಕ್ಕವನ್ನು ತಯಾರಿಸುತ್ತದೆ ಮತ್ತು ಅದನ್ನು ನಿಗದಿತ ದಿನಾಂಕಗಳೊಳಗೆ ವ್ಯವಸ್ಥಾಪಕ ನಿರ್ದೇಶಕರು ಮತ್ತು ನಿರ್ದೇಶಕ ಮಂಡಳಿಗೆ ಸಲ್ಲಿಸಲಾಗುತ್ತದೆ. ಆಂತರಿಕ ಲೆಕ್ಕಪರಿಶೋಧಕರು ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರು ಕೆಆರ್‌ಐಡಿಎಲ್‌ನ ವಾರ್ಷಿಕ ಲೆಕ್ಕಪತ್ರಗಳ ವಿವರವಾದ ಲೆಕ್ಕಪರಿಶೋಧನೆ ನಡೆಸುತ್ತಾರೆ ಮತ್ತು ಟಿಪ್ಪಣಿ ನೀಡುತ್ತಾರೆ.

ಲೆಕ್ಕಪತ್ರ ವ್ಯವಸ್ಥೆಯನ್ನು ತೋರಿಸುವ ಚಿತ್ರಾತ್ಮಕ ರೇಖಾಚಿತ್ರವನ್ನು ಕೆಳಗಿನ **ನಕ್ಷೆ–5.1**ರಲ್ಲಿ ನೀಡಲಾಗಿದೆ:

[18] ಫಾರ್ಮ್ 9 ಎನ್ನುವುದು ಉಪ–ವಿಭಾಗಗಳು ನಿಧಿಯ ಬಿಡುಗಡೆಗಾಗಿ ಕೇಂದ್ರ ಕಚೇರಿಗೆ ಕಳುಹಿಸುವ ವಿನಂತಿಯಾಗಿದೆ ಮತ್ತು ಆಡಳಿತಾತ್ಮಕವಾಗಿ ಅನುಮೋದಿಸಲಾದ ಮತ್ತು ಇಎಯಿಂದ ಪಡೆದ ಹಣವನ್ನು ಕಾರ್ಯಗತಗೊಳಿಸಲು ಅನುಮತಿ ನೀಡುತ್ತದೆ.

**ನಕ್ಷೆ–5.1: ಕೆಆರ್‌ಐಡಿಎಲ್‌ನಲ್ಲಿನ ಲೆಕ್ಕಪತ್ರ ವ್ಯವಸ್ಥೆ**




ಆಧಾರ: ಸ್ಥಾಯಿ ಆದೇಶಗಳಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನ

### *5.1.1 ಮಾಸಿಕ ಲೆಕ್ಕಪತ್ರಗಳಲ್ಲಿ ಗಮನಿಸಲಾದ ವ್ಯತ್ಯಾಸಗಳು*

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ನಿಯಮಗಳ ಪ್ರಕಾರ ಮಾಸಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಬೇಕು ಮತ್ತು ನಿರ್ವಹಿಸಬೇಕು.

ಆಯ್ದ ತಿಂಗಳುಗಳಿಗೆ ಆಯ್ದ ಉಪ–ವಿಭಾಗಗಳು/ವಿಭಾಗಗಳಲ್ಲಿನ ವೋಚರ್‌ಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಯಿತು ಮತ್ತು ಬ್ಯಾಂಕ್ ಪಾಸ್ ಶೀಟ್‌ಗಳು, ಪಾವತಿ ಬಿಲ್‌ಗಳು/ಪಾವತಿ ವೋಚರ್‌ಗಳು, ಮಾಪನ ಪುಸ್ತಕಗಳು, ಕಾಮಗಾರಿ ಬಿಲ್‌ಗಳು, ಸಾಮಗ್ರಿ ಸರಬರಾಜು ಬಿಲ್‌ಗಳು, ಮಾಸಿಕ ಲೆಕ್ಕದ ತ:ಖ್ತೆಗಳು, ದಾಸ್ತಾನು ಮತ್ತು ನೀಡಿಕೆ ರಿಜಿಸ್ಟರ್, ಶಾಸನಬದ್ಧ ಕಡಿತಗಳು ಇತ್ಯಾದಿಗಳಿಗೆ ಪ್ರತಿಯಾಗಿ ನಗದು ಪುಸ್ತಕದಲ್ಲಿನ ನಮೂದುಗಳನ್ನು ಪರಿಶೀಲಿಸಲಾಯಿತು. ಲೆಕ್ಕಪರಿಶೋಧನೆಯ ಸಮಯದಲ್ಲಿ ಗಮನಿಸಲಾದ ಪ್ರಮುಖ ಅಂಶಗಳನ್ನು ಕೆಳಗೆ ನೀಡಲಾಗಿದೆ:

- ಪಾವತಿ ವೋಚರ್‌ಗಳು ಮಾಪನ ಪುಸ್ತಕದಲ್ಲಿನ ಸೂಕ್ತ ನಮೂದುಗಳು/ಪರೀಕ್ಷಾ ಮಾಪನ/ನೇಮಿಸಿಕೊಂಡ ಕೂಲಿಯಾಳುಗಳ ವಿವರ ಹೊಂದಿರಲಿಲ್ಲ, ಎಇ/ಎಇಇ ದೃಢೀಕರಿಸಿರಲಿಲ್ಲ, ಗುಣಮಟ್ಟ ನಿಯಂತ್ರಣ ವರದಿಗಳು ಮತ್ತು ಅಧಿಕೃತ ಸಹಿ (ಲೆಕ್ಕ ಗುಮಾಸ್ತ) ಇವುಗಳನ್ನು ಹೊಂದಿರಲಿಲ್ಲ.
- ಸರಬರಾಜು ಮತ್ತು ಕೂಲಿ ಬಿಲ್‌ಗಳಿಂದ ಯಾವುದೇ ಶಾಸನಬದ್ಧ ತೆರಿಗೆ ಕಡಿತವನ್ನು ಮಾಡಿರಲಿಲ್ಲ.
- ಖರೀದಿಸಿದ ಸಾಮಗ್ರಿಗಳಿಗೆ (ಮರಳು, ಜೆಲ್ಲಿ, ಮಣ್ಣು, ಕಲ್ಲು, ಇಟ್ಟಿಗೆಗಳು ಇತ್ಯಾದಿ) ದಾಸ್ತಾನು ಒಳತರುವ/ಹೊರಗೆ ಕಳಿಸುವ ರಿಜಿಸ್ಟರ್ ನಿರ್ವಹಿಸಿರಲಿಲ್ಲ.
- ಲೆಕ್ಕಪತ್ರ ನಿರ್ವಹಣೆ ಮತ್ತು ತಾಂತ್ರಿಕ ಕೆಲಸದ ಪ್ರಮುಖ ಕಾರ್ಯಗಳನ್ನು ಹೊರಗುತ್ತಿಗೆ ಸಿಬ್ಬಂದಿ ನಿರ್ವಹಿಸುತ್ತಿದ್ದರು.
- ವೋಚರ್‌ನಲ್ಲಿನ ನಮೂದುಗಳ ಪ್ರಾಮಾಣಿಕತೆಗಾಗಿ ಯಾವುದೇ ಉಪವೋಚರ್‌ಗಳನ್ನು ಎಇ ಮತ್ತು ಎಇಇ (ತಾಂತ್ರಿಕ) ದೃಢೀಕರಿಸಿರಲಿಲ್ಲ. ಅಂತಿಮ ಬಿಲ್‌ಗಳನ್ನು ಸರಿಯಾಗಿ ಪರಿಶೀಲಿಸದಿರುವ ನಿದರ್ಶನಗಳು ಗಮನಕ್ಕೆ ಬಂದವು, ಇದು, ಕೆಳಗೆ ವಿವರಿಸಿದಂತೆ, ಗುಂಪು ನಾಯಕರುಗಳಿಗೆ ಹೆಚ್ಚುವರಿ/ತಪ್ಪಾದ ಪಾವತಿಯಲ್ಲಿ ಪರಿಣಮಿಸಿತು:

***ನಿದರ್ಶನ***

***ವಿಭಾಗ ಮತ್ತು ಕೇಂದ್ರ ಕಛೇರಿಯಲ್ಲಿ ಸಮರ್ಪಕ ತಪಾಸಣೆ ಮಾಡದ ಕಾರಣ ಗುಂಪು ನಾಯಕರುಗಳಿಗೆ ಹೆಚ್ಚುವರಿ ಪಾವತಿ***

ಪೂರ್ವ–II (ಬಿಬಿಎಮ್‌ಪಿ) ಉಪ–ವಿಭಾಗದಲ್ಲಿ, ಅಂತಿಮ ಬಿಲ್‌ನಲ್ಲಿ ಕ್ಲೈಮ್ ಮಾಡಲಾದ ಪರಿಮಾಣವು, ಮಾಪನ ಪುಸ್ತಕದಲ್ಲಿ ನಮೂದು ಮಾಡಿದ ಕಾರ್ಯಗತ ಪ್ರಮಾಣಕ್ಕಿಂತ ಅಧಿಕವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಬಿಲ್ಲನ್ನು ಪರಿಶೀಲಿಸದೆಯೇ ಪಾವತಿಯನ್ನು ಮಾಡಲಾಗಿದೆ, ಇದು ಪರಿಮಾಣವನ್ನು ಹೆಚ್ಚಾಗಿ ಕ್ಲೈಮ್ ಮಾಡುವಲ್ಲಿ ತತ್ಪರಿಣಾಮವಾಗಿ ಗುಂಪು ನಾಯಕರುಗಳಿಗೆ ₹57.82 ಲಕ್ಷ ಮೊತ್ತದ ಅನುಚಿತ ಲಾಭವಾಗುವಲ್ಲಿ ಪರಿಣಮಿಸಿತು.

ಯಾವುದೇ ಹೆಚ್ಚುವರಿ ಪಾವತಿ ಮಾಡಲಾಗಿಲ್ಲ ಮತ್ತು ಮಾಪನ ಪುಸ್ತಕದಲ್ಲಿ ಮತ್ತು ಮಾಸಿಕ ಕಾಮಗಾರಿ ಬಿಲ್‌ಗಳಲ್ಲಿ ದಾಖಲಾದ ಪ್ರಮಾಣಗಳು ಒಂದೇ ಆಗಿವೆ ಎಂದು ಉತ್ತರಿಸಲಾಗಿದೆ. ಆದರೆ, ಯಾವುದೇ ಸಂಬಂಧಿತ ದಾಖಲೆಗಳನ್ನು ಒದಗಿಸಲಿಲ್ಲವಾಗಿ ಉತ್ತರವನ್ನು ಪರಿಶೀಲಿಸಲಾಗಲಿಲ್ಲ.

### *5.1.2 ಹೆಚ್ಚುವರಿ ಮತ್ತು ಉಳಿತಾಯದ ತ:ಖ್ತೆಯನ್ನು ಸಿದ್ಧಪಡಿಸದಿರುವುದು*

ಕಾಮಗಾರಿಗಳನ್ನು ನಿರ್ವಹಿಸುವ ಪ್ರತಿಯೊಂದು ಉಪ–ವಿಭಾಗವು ಸ್ಥಾಯಿ ಆದೇಶಗಳಡಿಯಲ್ಲಿ ಅಗತ್ಯವಿರುವಂತೆ ಪ್ರತಿ ಕಾಮಗಾರಿಗೆ ಹೆಚ್ಚುವರಿ/ಉಳಿತಾಯದ ತ:ಖ್ತೆಯನ್ನು ತಯಾರಿಸಬೇಕು. ಉಪ–ವಿಭಾಗಗಳು ಅವುಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲಿಲ್ಲ. ಪೂರ್ಣಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ವಿವರಗಳೊಂದಿಗೆ ತ:ಖ್ತೆಗಳನ್ನು ತಯಾರಿಸಲು ಲೆಕ್ಕಪರಿಶೋಧನೆಯು ಪ್ರಯತ್ನಿಸಿತು, ಅದರಿಂದ ಈ ಕೆಳಗಿನವುಗಳು ಕಂಡುಬಂದವು.

#### *5.1.2.1 ಅಧಿಕ ವೆಚ್ಚದ ವರದಿ ಮಾಡದಿರುವುದು*

ಪರೀಕ್ಷಾ–ತನಿಖೆ ನಡೆಸಿದ 1379 ಕಾಮಗಾರಿಗಳಲ್ಲಿ 231 ಕಾಮಗಾರಿಗಳು (ಶೇಕಡಾ 17) ಎಲ್ಲಾ ರೀತಿಯಲ್ಲೂ ಪೂರ್ಣಗೊಂಡಿದ್ದವು ಮತ್ತು ಅಂತಿಮ ಬಿಲ್‌ಗಳನ್ನು ಕೆಆರ್‌ಐಡಿಎಲ್‌ನ ಕೇಂದ್ರ ಕಛೇರಿಗೆ ಸಲ್ಲಿಸಲಾಗಿತ್ತು. **ಅನುಬಂಧ–XVI**ರಲ್ಲಿ ವಿವರಿಸಿದಂತೆ, 231 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿ ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡಿದ ಹಣಕ್ಕಿಂತ ₹18.86 ಕೋಟಿಗಳಷ್ಟು ಅಧಿಕ ವೆಚ್ಚವನ್ನು ಭರಿಸಲಾಗಿತ್ತು. ಕೇಂದ್ರ ಕಛೇರಿಯು ಅಂತಹ ಅಧಿಕ ವೆಚ್ಚವನ್ನು ಮೇಲ್ವಿಚಾರಣೆ ಮಾಡಲಿಲ್ಲ ಅಥವಾ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಹೆಚ್ಚುವರಿ ಹಣವನ್ನು ಕೇಳಲಿಲ್ಲ. ತತ್ಪರಿಣಾಮವಾಗಿ, ಕಾಮಗಾರಿಗಳ ಲೆಕ್ಕವನ್ನು ಅಂತಿಮಗೊಳಿಸಿರಲಿಲ್ಲ ಮತ್ತು ಕಾಮಗಾರಿ ವಹಿಸುವ ಇಲಾಖೆಯೊಂದಿಗಿನ ಲೆಕ್ಕಗಳು ಇತ್ಯರ್ಥವಾಗದೆ ಉಳಿದಿದ್ದವು.

#### 5.1.2.2 ಪೂರ್ಣಗೊಂಡಿರುವುದನ್ನು ವರದಿ ಮಾಡದಿರುವುದು ಮತ್ತು ಉಳಿತಾಯವನ್ನು ಅಧ್ಯರ್ಪಣೆ ಮಾಡದಿರುವುದು

ಅದೇ ರೀತಿಯಾಗಿ, ಪೂರ್ಣಗೊಂಡ 47 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನೆಯಲ್ಲಿ ಲೆಕ್ಕ ಹಾಕಿದಂತೆ, ₹0.98 ಕೋಟಿ ಉಳಿತಾಯವಾಗಿದೆ (**ಅನುಬಂಧ–XVII**). ವರದಿ ಮಾಡಿದ ಉಳಿತಾಯದ ವಿವರಗಳು ಮತ್ತು ಕಾಮಗಾರಿ ವಹಿಸುವ ಇಲಾಖೆಗೆ ಮರುಪಾವತಿಗಳ ವಿವರಗಳನ್ನು ಕೇಂದ್ರ ಕಛೇರಿಯು ಒದಗಿಸಲಿಲ್ಲ.

ಕಾರ್ಯಗತಗೊಳಿಸಿದ ಕಾಮಗಾರಿಯ ವೆಚ್ಚ ಮತ್ತು ಅಂತಿಮ ಬಿಲ್ ಮೌಲ್ಯದ ನಡುವಿನ ವ್ಯತ್ಯಾಸವನ್ನು ನಿವ್ವಳ ಉಳಿತಾಯ ಎಂದು ಪರಿಗಣಿಸಲಾಗುತ್ತದೆ ಎಂದು ರಾಜ್ಯ ಸರ್ಕಾರ ತಿಳಿಸಿತು. ಲೆಕ್ಕಪರಿಶೋಧನಾ ಆಕ್ಷೇಪಣೆಯು ಅಂತಿಮ ವೆಚ್ಚ, ಕೆಆರ್‌ಐಡಿಎಲ್ ಶುಲ್ಕಗಳು, ಕಾರ್ಮಿಕ ಉಪಕರ ಮತ್ತು ಜಿಎಸ್‌ಟಿ/ವ್ಯಾಟ್ ಎಲ್ಲವನ್ನೂ ಕಡಿತಗೊಳಿಸಿದ ನಂತರ ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ಉಳಿತಾಯದ ವರದಿ ಮಾಡದಿರುವ ಬಗ್ಗೆ ಸಂಬಂಧಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಪ್ರತಿ ಉಪ–ವಿಭಾಗದ ಮಾಹೆವಾರು ಹೆಚ್ಚುವರಿ/ಉಳಿತಾಯ ತ:ಖ್ತೆಗಳನ್ನು ತಯಾರಿಸಿ ಕೆಆರ್‌ಐಡಿಎಲ್‌ನ ಕೇಂದ್ರ ಕಛೇರಿಗೆ ಸಲ್ಲಿಸಲಾಗುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತಾದರೂ ಅದನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ.

### *5.1.3 ಅಂತಿಮ ಬಿಲ್ಲನ್ನು ಸಲ್ಲಿಸದಿರುವುದು*

16 ಉಪ–ವಿಭಾಗಗಳಲ್ಲಿ ಪರೀಕ್ಷಾ–ತನಿಖೆ ನಡೆಸಿದ 794 ಕಾಮಗಾರಿಗಳ ಪೈಕಿ 102 (ಶೇಕಡಾ 13) ಕಾಮಗಾರಿಗಳು ಎಲ್ಲ ರೀತಿಯಲ್ಲೂ ಪೂರ್ಣಗೊಂಡಿದ್ದವಾದರೂ ಮಾಸಿಕ ಕಾಮಗಾರಿ ಬಿಲ್‌ಗಳನ್ನು ಅಪ್‌ಲೋಡ್ ಮಾಡಲಾಗಿಲ್ಲ ಎಂಬ ಕಾರಣಕ್ಕೆ ಅಂತಿಮ ಬಿಲ್‌ಗಳನ್ನು ಸಲ್ಲಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಪ್‌ಲೋಡ್ ಮಾಡುವಲ್ಲಿನ ವಿಳಂಬವು ಕೊನೆಯ ಮಾಸಿಕ ಕಾಮಗಾರಿ ಬಿಲ್‌ಗಳನ್ನು ಸಲ್ಲಿಸಿದ ದಿನಾಂಕದಿಂದ ಮೂರು ತಿಂಗಳಿಂದ 70 ತಿಂಗಳುಗಳವರೆಗಿನ ವ್ಯಾಪ್ತಿಯಲ್ಲಿದ್ದಿತು. ಅಂತಿಮ ಮಾಸಿಕ ಕಾಮಗಾರಿ ಬಿಲ್‌ಗಳನ್ನು ಅಪ್‌ಲೋಡ್ ಮಾಡದಿರುವುದಕ್ಕೆ

ಕಾರಣಗಳು ಮತ್ತು ಲೆಕ್ಕಗಳನ್ನು ಅಂತಿಮಗೊಳಿಸಿದ್ದಕ್ಕೆ ಕಾರಣಗಳು ದಾಖಲೆಗಳಲ್ಲಿರಲಿಲ್ಲ ಮತ್ತು ಇದು ಸ್ಥಾಯಿ ಆದೇಶಗಳಡಿಯಲ್ಲಿ ಅಗತ್ಯವಿರುವ ಮಾಸಿಕ ವರದಿಗಳನ್ನು ಸಲ್ಲಿಸದಿರುವುದನ್ನು ಸೂಚಿಸುತ್ತದೆ.

ಆರ್ಥಿಕವಾಗಿ ಮತ್ತು ಭೌತಿಕವಾಗಿ ಸಂಪೂರ್ಣಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಂಪನಿಯು ಅಂತಿಮ ಬಿಲ್‌ಗಳನ್ನು ಸಿದ್ಧಪಡಿಸುತ್ತದೆ ಮತ್ತು ಇತ್ಯರ್ಥಗೊಳಿಸುತ್ತದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿತು. ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಬಾಕಿ ಹಣ/ಮೂಲ ತೆರಿಗೆ ಕಡಿತ ಪ್ರಮಾಣಪತ್ರ ಬಾರದಿರುವುದು, ಪೂರ್ಣಗೊಂಡ ಕಾಮಗಾರಿಗಳ ಹಸ್ತಾಂತರ ಪತ್ರ ಲಭ್ಯತೆವಿಲ್ಲದಿರುವುದು ಅಂತಿಮ ಬಿಲ್‌ಗಳನ್ನು ಸಲ್ಲಿಸದಿರುವುದಕ್ಕೆ/ವಿಳಂಬ ಸಲ್ಲಿಕೆಗೆ ಕಾರಣಗಳಾಗಿವೆ. ಇದಲ್ಲದೇ ಶೇಕಡಾ 95ರಷ್ಟು ಹಣ ಬಂದಿರುವ ಮತ್ತು ಭೌತಿಕವಾಗಿ ಪೂರ್ಣಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂತಿಮ ಬಿಲ್ ಹೊಂದಾಣಿಕೆಗೆ ಸುತ್ತೋಲೆ ಸೂಚನೆಗಳನ್ನು ನೀಡಲಾಗಿದೆ.

ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಪೂರ್ಣ ಹಣ ಪಡೆದ ಕಾಮಗಾರಿಗಳಲ್ಲಿಯೂ ಅಂತಿಮ ಲೆಕ್ಕಗಳನ್ನು ಇತ್ಯರ್ಥಪಡಿಸದೇ ಇರುವ ನಿದರ್ಶನಗಳು ಗಮನಕ್ಕೆ ಬಂದಿವೆಯಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಭೌತಿಕವಾಗಿ ಪೂರ್ಣಗೊಂಡ ಮತ್ತು ಬಾಕಿ ಹಣ ಬರಬೇಕಿರುವ ಕಾಮಗಾರಿಗಳ ಸಂದರ್ಭದಲ್ಲಿ, ಅಂತಹ ಕಾಮಗಾರಿಗಳನ್ನು 'ಪ್ರಗತಿಯಲ್ಲಿರುವ ಕಾಮಗಾರಿಗಳ' ಪಟ್ಟಿಯಿಂದ ತೆಗೆದುಹಾಕಬೇಕಾಗಿತ್ತು ಮತ್ತು ಲೆಕ್ಕಗಳ ಶೀಘ್ರ ಇತ್ಯರ್ಥಕ್ಕಾಗಿ ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ತಿಳಿಸಬೇಕಾಗಿತ್ತು.

### *5.1.4 ಕಾಮಗಾರಿಯ ಅಂತಿಮ ಬಿಲ್‌ಗಳ ಇತ್ಯರ್ಥಮಾಡದಿರುವುದು – ₹4.37 ಕೋಟಿ*

ಪೂರ್ಣಗೊಂಡ 25 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉಪ–ವಿಭಾಗಗಳು ಸಲ್ಲಿಸಿದ ಅಂತಿಮ ಬಿಲ್‌ಗಳನ್ನು ಕೇಂದ್ರ ಕಛೇರಿಯು ತಿರಸ್ಕರಿಸಿತ್ತು. ನಿರಾಕರಣೆಗೆ ಕಾರಣಗಳು ಮತ್ತು ಅಂತಿಮ ಬಿಲ್ ಶಾಖೆಯ ಆಕ್ಷೇಪಣೆಗಳನ್ನು ತೆರವುಗೊಳಿಸಲು ತೆಗೆದುಕೊಂಡ ಪರಿಹಾರ ಕ್ರಮಗಳು ದಾಖಲೆಯಲ್ಲಿಲ್ಲ.

ಆರು ಉಪ–ವಿಭಾಗಗಳಿಗೆ ಸಂಬಂಧಿಸಿದಂತೆ ₹4.37 ಕೋಟಿ ವೆಚ್ಚದಲ್ಲಿ ಉಪ–ವಿಭಾಗಗಳ ಅಂದಾಜು ವೆಚ್ಚ, ಕಾಮಗಾರಿ ವಹಿಸುವ ಸಂಸ್ಥೆಗಳು ಮತ್ತು ಕೇಂದ್ರ ಕಛೇರಿಯು ಬಿಡುಗಡೆ ಮಾಡಿದ ಹಣ ಸರಿಯಿದ್ದರೂ ಸಹ 25 ಕಾಮಗಾರಿಗಳ ಅಂತಿಮ ಬಿಲ್ ತಿರಸ್ಕೃತವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ನಿರಾಕರಣೆಗೆ ಕಾರಣಗಳು ದಾಖಲೆಯಲ್ಲಿರಲಿಲ್ಲ. ಮಾರ್ಚ್ 2022ರವರೆಗಿನ ಕೊನೆಯ ಮಾಸಿಕ ಕಾಮಗಾರಿ ಬಿಲ್ ಸಲ್ಲಿಕೆಯು 8 ತಿಂಗಳಿನಿಂದ 53 ತಿಂಗಳುಗಳವರೆಗಿನ ವ್ಯಾಪ್ತಿಯಲ್ಲಿದ್ದಿತು.

ಬಿಲ್ ತಿರಸ್ಕರಿಸಲು ಕಾರಣವೆಂದರೆ ಕೊನೆಯ ಮಾಸಿಕ ಕಾಮಗಾರಿ ಬಿಲ್ ವಿವರಗಳು ಕಾಮಗಾರಿಯ ಪ್ರಗತಿ ಮತ್ತು ಅಂತಿಮ ಬಿಲ್, ಅಂದಾಜುಪಟ್ಟಿಯ ಮೇಲಿನ ಹೆಚ್ಚುವರಿ ವೆಚ್ಚ ಮತ್ತು ನಿಧಿ ಬಿಡುಗಡೆ ಇತ್ಯಾದಿಗಳೊಂದಿಗೆ ಹೊಂದಿಕೆಯಾಗದಿರುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ಆದರೆ, ಅಂತಿಮ ಬಿಲ್‌ಗಳ ಇತ್ಯರ್ಥಕ್ಕಾಗಿ ಆಕ್ಷೇಪಣೆಗಳನ್ನು ತೆರವುಗೊಳಿಸಲು ಮತ್ತು ಸಂಬಂಧಿತ ಕಾಮಗಾರಿ ವಹಿಸಿದ ಸಂಸ್ಥೆಗೆ ಕಾಮಗಾರಿ ಪೂರ್ಣಗೊಂಡಿರುವುದನ್ನು ತಿಳಿಸುವ ಬಗ್ಗೆ ಉಪ–ವಿಭಾಗಗಳೊಂದಿಗೆ ಕೇಂದ್ರ ಕಛೇರಿಯು ಯಾವುದೇ ಅನುಸರಣೆ ಕೈಗೊಂಡಿಲ್ಲದ ಕಾರಣ ಉತ್ತರವು ಸ್ವೀಕಾರಾರ್ಹವಾಗಿಲ್ಲ.

### *5.1.5 ಅಗೆತ ಮಾಡಲಾದ ಬಂಡೆಕಲ್ಲಿನ ಲೆಕ್ಕ ಇಟ್ಟಿಲ್ಲದಿರುವುದು*

ಕೆಆರ್‌ಐಡಿಎಲ್ ಸ್ಥಾಯಿ ಆದೇಶಗಳು (ಕಂಡಿಕೆ 78) ಇಲಾಖೆಯಲ್ಲಿರುವ ಕಾರ್ಮಿಕರನ್ನು ಅಥವಾ ದಿನಗೂಲಿ ನೌಕರರನ್ನು ಅಥವಾ ಗುಂಪು ನಾಯಕರುಗಳನ್ನು ಬಳಸಿಕೊಳ್ಳುವ ಮೂಲಕ ಅಗೆತ ಮಾಡಿದಾಗ ದೊರೆಯುವ ಜಲ್ಲಿ/ಕಲ್ಲುಗಳ ಮಾಸಿಕ ಖನಿಜ ವರದಿಯನ್ನು ನಿರ್ವಹಿಸಬೇಕು ಮತ್ತು ಅದರ ಸ್ವೀಕೃತಿ/ನೀಡಿಕೆಯ ಲೆಕ್ಕ ಇಡಬೇಕು ಮತ್ತು ಸಂಬಂಧಿತ ಕಾಮಗಾರಿಗಳ ಲೆಕ್ಕದಲ್ಲಿ ಸರಿಹೊಂದಿಸಬೇಕು

ಎಂದು ನಿಗದಿಪಡಿಸುತ್ತವೆ. ಮೂರು ಉಪ–ವಿಭಾಗಗಳಲ್ಲಿ[19] ಪರೀಕ್ಷಾ–ತನಿಖೆ ನಡೆಸಲಾದ 11 ಕಾಮಗಾರಿಗಳ ದಾಖಲೆಗಳ ಪರಿಶೀಲನೆ ನಡೆಸಿದಾಗ 35,961.10 ಚದರ ಮೀಟರ್ ಬಂಡೆಕಲ್ಲನ್ನು ಅಗೆತ ಮಾಡಿರುವುದು ಕಂಡುಬಂದಿತು. ಉಪ–ವಿಭಾಗಗಳು ಅಗೆತ ಮಾಡಿದ ಬಂಡೆಕಲ್ಲಿನ ಮತ್ತು ಅದರ ನೀಡಿಕೆಯ ಲೆಕ್ಕ ಇಟ್ಟಿಲ್ಲ ಮತ್ತು ಮಾಸಿಕ ಖನಿಜ ವರದಿಯನ್ನು ತಯಾರಿಸಿಲ್ಲ.

ಅಗೆತ ಮಾಡಿದ ಬಂಡೆಕಲ್ಲಿನ ಸ್ವರೂಪವು ಸಣ್ಣ ಮತ್ತು ತೆಳ್ಳಗಿರುತ್ತದಾದ್ದರಿಂದ ನಿರ್ಮಾಣಕಾರ್ಯದಲ್ಲಿ ಮರುಬಳಕೆ ಮಾಡಲಾಗುವುದಿಲ್ಲ ಎಂದು ರಾಜ್ಯ ಸರ್ಕಾರವು ಉತ್ತರಿಸಿತು. ಉಪ–ವಿಭಾಗಗಳು ಸ್ಥಾಯಿ ಆದೇಶಗಳಡಿಯಲ್ಲಿ ಅಗತ್ಯವಿರುವಂತೆ ಮಾಸಿಕ ಖನಿಜ ವರದಿಯನ್ನು ಸಿದ್ಧಪಡಿಸದ ಕಾರಣ ಮತ್ತು ಮರು–ಬಳಕೆ ಮಾಡುವ ಅಥವಾ ಮಾಡದಿರುವ ಬಗೆಗಿನ ಅಗತ್ಯ ಪರೀಕ್ಷಾ ವರದಿಗಳು ಮತ್ತು ಅಗೆತ ಮಾಡಿದ ಬಂಡೆಕಲ್ಲಿನ ಸೂಕ್ತ ವಿಲೇವಾರಿಯ ವಿವರಗಳನ್ನು ದಾಖಲೆಯಲ್ಲಿ ಇಟ್ಟಿಲ್ಲದಿರುವುದರಿಂದ ಉತ್ತರವು ಸಮರ್ಥನೀಯವಾಗಿಲ್ಲ.

## 5.2 ಸಾಮಗ್ರಿಗಳ ಖರೀದಿ

ಕೇಂದ್ರ ಕಛೇರಿಯ ಸೂಚನೆಗಳ (ಜೂನ್ 2018) ಪ್ರಕಾರ, ಯೋಜನಾ ಕಛೇರಿಗಳು ಕೇಂದ್ರ ಕಛೇರಿಯಲ್ಲಿ ಟೆಂಡರ್ ವ್ಯವಸ್ಥೆಯ ಮೂಲಕ ಆಯ್ಕೆಮಾಡಲಾದ ಅನುಮೋದಿತ ಸಂಸ್ಥೆಗಳಿಂದ ವಿವಿಧ ಕಾಮಗಾರಿಗಳನ್ನು ನಿರ್ವಹಿಸಲು ಅಗತ್ಯವಾದ ಸಿಮೆಂಟ್ ಮತ್ತು ಕಬ್ಬಿಣವನ್ನು ಖರೀದಿಸಬೇಕು. ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಅಗತ್ಯದ ಇತರ ವಸ್ತುಗಳ ಖರೀದಿಯೂ ಕೆಟಿಪಿಪಿ ಕಾಯ್ದೆಯ ನಿಬಂಧನೆಗಳಿಗೆ ಅನುಗುಣವಾಗಿರಬೇಕು.

ಲೆಕ್ಕಪರಿಶೋಧನೆಯು ಸಾಮಗ್ರಿಗಳ ಖರೀದಿಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ವಿವಿಧ ವ್ಯವಸ್ಥಿತ ಲೋಪಗಳನ್ನು, ಕೆಳಗೆ ವಿವರಿಸಿದಂತೆ, ಗಮನಿಸಿತು.

### *5.2.1 ಅನುಮೋದಿತವಲ್ಲದ ಸಂಸ್ಥೆಗಳಿಂದ ಸಿಮೆಂಟ್ ಮತ್ತು ಕಬ್ಬಿಣ ಖರೀದಿ ಮಾಡಿರುವುದು*

ಸ್ಥಾಯಿ ಆದೇಶಗಳಲ್ಲಿನ ನಿಬಂಧನೆಗಳಿಗೆ ವಿರುದ್ಧವಾಗಿ, **ಅನುಬಂಧ–XVIII**ರಲ್ಲಿ ವಿವರಿಸಿರುವಂತೆ, ಪರೀಕ್ಷಾ–ತನಿಖೆ ನಡೆಸಲಾದ 17 ಉಪ–ವಿಭಾಗಗಳು ₹720.89 ಕೋಟಿ ಮೌಲ್ಯದ ಕಬ್ಬಿಣ ಮತ್ತು ಸಿಮೆಂಟ್ ಖರೀದಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಕಟ್ಟುನಿಟ್ಟಿನ ಎಚ್ಚರಿಕೆಗಳ ಹೊರತಾಗಿಯೂ ಉಪ–ವಿಭಾಗಗಳು ಪದೇ ಪದೇ ನಿಯಮಗಳನ್ನು ಉಲ್ಲಂಘಿಸಿವೆ, ಇದು ಉಪ–ವಿಭಾಗಗಳ ಸಾಮಗ್ರಿ ಖರೀದಿ ವ್ಯವಹಾರಗಳ ಮೇಲೆ ಕೇಂದ್ರ ಕಛೇರಿಗೆ ನಿಯಂತ್ರಣವಿರಲಿಲ್ಲ ಎಂಬುದನ್ನು ಸೂಚಿಸುತ್ತದೆ.

ಟೆಂಡರ್‌ಗಳನ್ನು ಅಂತಿಮಗೊಳಿಸದ ಕಾರಣಕ್ಕಾಗಿ ಮತ್ತು ಸಕಾಲದಲ್ಲಿ ಅಗತ್ಯ ಪ್ರಮಾಣದಲ್ಲಿ ಪೂರೈಸಲು ಅನುಮೋದಿತ ಸಂಸ್ಥೆಗಳ ಅಸಮರ್ಥತೆಯ ಕಾರಣದಿಂದಾಗಿ ಹಾಗೂ ನಿಗದಿತ ಸಮಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉಪ–ವಿಭಾಗಗಳು ಅನುಮೋದಿತವಲ್ಲದ ಸಂಸ್ಥೆಗಳಿಂದ ಕಬ್ಬಿಣ ಮತ್ತು ಸಿಮೆಂಟ್ ಖರೀದಿಸಿವೆ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ಅನುಮೋದಿತ ಸಂಸ್ಥೆಗಳಿಂದ ಖರೀದಿ ಸಲುವಾಗಿನ ಇಂಡೆಂಟ್‌ಗಳು ದಾಖಲೆಯಲ್ಲಿ ಇಲ್ಲದಿರುವುದರಿಂದ ಉತ್ತರವು ಸ್ವೀಕಾರಾರ್ಹವಾಗಿಲ್ಲ. ಅಲ್ಲದೆ, ಉಪ–ವಿಭಾಗಗಳು ಕೇಂದ್ರ ಕಛೇರಿಯ ಪೂರ್ವಾನುಮತಿ ಅಥವಾ ಸೂಚನೆಯಿಲ್ಲದೆ ಅನುಮೋದಿತವಲ್ಲದ ಸಂಸ್ಥೆಗಳಿಂದ ಖರೀದಿಗಳನ್ನು ಮಾಡಿವೆ ಮತ್ತು ಅನುಮೋದಿತವಲ್ಲದ ಸಂಸ್ಥೆಗಳಿಂದ ಖರೀದಿಸಿದ ಸಿಮೆಂಟ್ ಮತ್ತು ಕಬ್ಬಿಣ ಬಳಕೆಯಾಗದೆ ದಾಸ್ತಾನಿನಲ್ಲೇ ಉಳಿದಿರುವ ಮತ್ತು ಸಂಬಂಧಿತ ಇಂಜಿನಿಯರ್‌ಗಳ ಕಾಮಗಾರಿ ಸ್ಥಳದ ಸಾಮಗ್ರಿ ಲೆಕ್ಕದಲ್ಲಿ ಉಳಿದಿರುವ. ನಿದರ್ಶನಗಳನ್ನು ಗಮನಿಸಲಾಗಿದೆ.

[19] ಪೂರ್ವ–I (ಬಿಬಿಎಮ್‌ಪಿ), ಕೋಲಾರ ಮತ್ತು ರಾಜರಾಜೇಶ್ವರಿನಗರ.

### *5.2.2 ಟೆಂಡರ್‌ಗಳನ್ನು ಆಹ್ವಾನಿಸದೆ ಇತರ ಸಾಮಗ್ರಿಗಳನ್ನು ಖರೀದಿಸಿರುವುದು*

ಸುತ್ತೋಲೆಯ ಸೂಚನೆಗಳ (ಮೇ 2018) ಪ್ರಕಾರ, ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4(ಇ)(1) ಅನುಸಾರ ವಲಯ/ವಿಭಾಗೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಖರೀದಿ ಸಮಿತಿಯ ಮೂಲಕ ಕಬ್ಬಿಣ, ಸಿಮೆಂಟ್ ಮತ್ತು ಬಿಟುಮೆನ್ ಹೊರತುಪಡಿಸಿ ₹5.00 ಲಕ್ಷಕ್ಕಿಂತ ಕಡಿಮೆ ಬೆಲೆಯ ಇತರ ವಸ್ತುಗಳನ್ನು ಖರೀದಿಸಬಹುದು. ಅಂತಹ ವಸ್ತುಗಳ ಮೌಲ್ಯವು ₹5.00 ಲಕ್ಷವನ್ನು ಮೀರಿದರೆ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿ ಖರೀದಿಸಬೇಕಾಗಿತ್ತು.

2016–17ರಿಂದ 2020–21ರವರೆಗಿನ ಅವಧಿಗೆ ಸಾಮಗ್ರಿಗಳ ಖರೀದಿಯ ಕ್ರೋಢೀಕೃತ ತಖ್ತೆಯ (ಟ್ರಯಲ್ ಬ್ಯಾಲೆನ್ಸ್) ಲೆಕ್ಕಪರಿಶೀಲನೆಯು ಪರೀಕ್ಷಾ–ತನಿಖೆ ನಡೆಸಲಾದ ಉಪ–ವಿಭಾಗಗಳು ಕೆಟಿಪಿಪಿ ಕಾಯ್ದೆಯ ನಿಬಂಧನೆಗಳನ್ನು ಮತ್ತು ಕೇಂದ್ರ ಕಛೇರಿ ನೀಡಿದ್ದ ಸುತ್ತೋಲೆ ಸೂಚನೆಗಳನ್ನು ಅನುಸರಿಸದೆಯೇ ₹754.32 ಕೋಟಿ ಮೌಲ್ಯದ (**ಅನುಬಂಧ–XIX**) ಸಾಮಗ್ರಿಗಳನ್ನು ಖರೀದಿಸಿವೆ ಎಂಬುದನ್ನು ತಿಳಿಸಿತು. ಉಪ–ವಿಭಾಗಗಳು ನಿರ್ದಿಷ್ಟ ತಿಂಗಳು/ತ್ರೈಮಾಸಿಕದಲ್ಲಿ ವಹಿಸಿಕೊಂಡಿರುವ ಕಾಮಗಾರಿಗಳ ಬಗ್ಗೆ ತಿಳಿದಿದ್ದರೂ, ಸಾಮಗ್ರಿಗಳ ಅವಶ್ಯಕತೆಯನ್ನು ಮುಂಚಿತವಾಗಿ ಅಂದಾಜಿಸಲಿಲ್ಲ ಅಥವಾ ಅಗತ್ಯ ಅನುಮೋದನೆಯನ್ನು ಪಡೆಯಲಿಲ್ಲ. ಬದಲಾಗಿ, ಉಪ–ವಿಭಾಗಗಳು ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸಿ ಸ್ಥಳೀಯ ಪೂರೈಕೆದಾರರು ಮತ್ತು ಗುಂಪು ನಾಯಕರುಗಳಿಂದ ಸಣ್ಣ ಪ್ರಮಾಣದಲ್ಲಿ ಸಾಮಗ್ರಿಗಳನ್ನು ಖರೀದಿ ಮಾಡಿವೆ.

ಕೆಟಿಪಿಪಿ ಕಾಯ್ದೆಗೆ ಬದ್ಧವಾಗಿರುವಂತೆ ಅಗತ್ಯ ಸೂಚನೆಗಳನ್ನು ನೀಡಲಾಗಿದ್ದು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ.

### *5.2.3 ನೋಂದಣಿಯಾಗದ ಮಾರಾಟಗಾರರಿಂದ ಸಾಮಗ್ರಿಗಳ ಖರೀದಿ ಮತ್ತು ನೋಂದಣಿಯಾಗದ ಗುಂಪು ನಾಯಕರುಗಳಿಗೆ ಕೂಲಿ ಪಾವತಿ*

ಕೆಆರ್‌ಐಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕರು ಹೊರಡಿಸಿದ ಸೂಚನೆಗಳ (ಜೂನ್ 2018) ಪ್ರಕಾರ ನಿರ್ಮಾಣ ಸಾಮಗ್ರಿಗಳ[20] ಖರೀದಿಗೆ ನಿಗದಿಪಡಿಸಿದ ಕಾರ್ಯವಿಧಾನಗಳನ್ನು ಕಡ್ಡಾಯವಾಗಿ ಅನುಸರಿಸಬೇಕು ಮತ್ತು ಸ್ಥಳೀಯ ಖರೀದಿಗಳನ್ನು ಜಿಎಸ್‌ಟಿ ನೋಂದಾಯಿತ ಮಾರಾಟಗಾರರಿಂದ ಮಾತ್ರವೇ ಮಾಡಬೇಕಾಗಿತ್ತು. ಯಾವುದೇ ಉಲ್ಲಂಘನೆಗಳು ಕೆಟಿಪಿಪಿ ಕಾಯ್ದೆ, 1999ರ ದಂಡದ ನಿಬಂಧನೆಗಳಿಗೆ ಒಳಪಟ್ಟಿದ್ದವು ಮತ್ತು ಸಂಬಂಧಪಟ್ಟ ಕಚೇರಿಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ ನಷ್ಟವನ್ನು ಉಂಟುಮಾಡುತ್ತಿದ್ದವು. ಈ ಸೂಚನೆಗಳ ಹೊರತಾಗಿಯೂ, ಪರೀಕ್ಷೆ–ತನಿಖೆ ಮಾಡಲಾದ ಉಪ–ವಿಭಾಗಗಳು 2018–19 ರಿಂದ 2020–21ರ ಅವಧಿಯಲ್ಲಿ ನೋಂದಣಿಯಾಗದ ಮಾರಾಟಗಾರರಿಂದ ₹448.35 ಕೋಟಿ ಮೌಲ್ಯದ ನಿರ್ಮಾಣ ಸಾಮಗ್ರಿ ಖರೀದಿ ಮತ್ತು ₹1,066.92 ಕೋಟಿ ಕೂಲಿಗಾಗಿ (ಒಟ್ಟು ₹1,515.27 ಕೋಟಿ) ವ್ಯಯಿಸಿದ್ದವು, ಇದಕ್ಕಾಗಿ, **ಅನುಬಂಧ–XX**ರಲ್ಲಿ ವಿವರಿಸಿದಂತೆ, 'ರಿವರ್ಸ್ ಚಾರ್ಜ್ ಮೆಕ್ಯಾನಿಸಂ[21]' ಅಡಿಯಲ್ಲಿ ₹214.46 ಕೋಟಿ ಜಿಎಸ್‌ಟಿ ಪಾವತಿ ಮಾಡಬೇಕಾಗುತ್ತದೆ. ಲೆಕ್ಕಪರಿಶೋಧನೆಯು ಅಕ್ರಮಗಳು ಮುಂದುವರೆದಿದ್ದವಾದರೂ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂಬುವುದನ್ನು ಗಮನಿಸಿತು ಮತ್ತು ಇದು ಕೇಂದ್ರ ಕಛೇರಿಯ ದುರ್ಬಲ ಹಣಕಾಸಿನ ನಿಯಂತ್ರಣವನ್ನು ಸೂಚಿಸುತ್ತದೆ.

---

[20] ಟಿಂಬರ್, ಹಾರ್ಡ್‌ವೇರ್ ವಸ್ತುಗಳು, ಬಣ್ಣಗಳು, ಗಾತ್ರದ ಕಲ್ಲು, ಜೆಲ್ಲಿ, ಮರಳು, ಇಟ್ಟಿಗೆಗಳು ಇತ್ಯಾದಿ.

[21] ರಿವರ್ಸ್ ಚಾರ್ಜ್ ಎನ್ನುವುದು ಸರಕು ಅಥವಾ ಸೇವೆಗಳ ಸ್ವೀಕರಿಸುವವರು ಸರಬರಾಜುದಾರರ ಬದಲಿಗೆ GST ಪಾವತಿಸಲು ಹೊಣೆಗಾರರಾಗಿರುವ ಕಾರ್ಯವಿಧಾನವಾಗಿದೆ

***ಶಿಫಾರಸು 6:*** *ರಾಜ್ಯ ಸರ್ಕಾರವು ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಿ ಸಾಮಗ್ರಿಗಳ ಸಂಗ್ರಹಣೆ ಮಾಡಿರುವುದು ಮತ್ತು ಸೂಕ್ತ ಮಾಪನ ಪುಸ್ತಕದ ದಾಖಲಾತಿಯಿಲ್ಲದೆ ಮಾಡಿರುವ ಪಾವತಿಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸಬೇಕು.*

## 5.3 ಸ್ವೀಕೃತಿಗಳು, ನೀಡಿಕೆಗಳು ಮತ್ತು ಸಾಮಗ್ರಿಗಳ ಲೆಕ್ಕದಲ್ಲಿ ನಿಯಂತ್ರಣ ಕಾರ್ಯವಿಧಾನದ ಅನುಪಸ್ಥಿತಿ

ಸಾಮಗ್ರಿಗಳ ವ್ಯವಸ್ಥೆ, ನಿರ್ವಹಣೆ ಮತ್ತು ಲೆಕ್ಕಗಳು ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳಿಗೆ ಅನುಗುಣವಾಗಿರಬೇಕಿತ್ತು.

ದಾಸ್ತಾನು ದಾಖಲೆಗಳ ಲೆಕ್ಕಪರಿಶೋಧನೆಯ ಪರಿಶೀಲನೆಯು, ಕೆಳಗೆ ತೋರಿಸಿರುವಂತೆ, ಉಪ–ವಿಭಾಗಗಳು ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳ ನಿಬಂಧನೆಗಳಿಗೆ ಬದ್ಧವಾಗಿರಲಿಲ್ಲ ಎಂಬುದನ್ನು ಬಹಿರಂಗಪಡಿಸಿದೆ:

- ❖ ಉಪ–ವಿಭಾಗಗಳಲ್ಲಿ ಖಾಯಂ ದಾಸ್ತಾನು ಪಾಲಕರ ಅನುಪಸ್ಥಿತಿಯಲ್ಲಿ, ಸ್ವತಃ ಎಇಇ/ಪ್ರಭಾರಿ ನೌಕರರು ಸಾಮಗ್ರಿಗಳ ಸ್ವೀಕೃತಿಗಳು ಮತ್ತು ನೀಡಿಕೆಗಳ ಲೆಕ್ಕ ಇಡುತ್ತಿದ್ದರು.
- ❖ ಮರಳು, ಕಲ್ಲು, ಜೆಲ್ಲಿ, ಮಣ್ಣು ಮುಂತಾದ ಸಾಮಗ್ರಿಗಳಿಗೆ ಯಾವುದೇ ದಾಸ್ತಾನು ದಾಖಲೆಗಳನ್ನು ನಿರ್ವಹಿಸಲಾಗಿಲ್ಲ, ಇದು ನೋಂದಣಿಯಾಗದ ಮಾರಾಟಗಾರರಿಂದ ಖರೀದಿಸಿದ ಒಟ್ಟು ಸಾಮಗ್ರಿಗಳ ಸುಮಾರು 40 ಪ್ರತಿಶತದಷ್ಟಿತ್ತು.
- ❖ ಸಾಮಗ್ರಿಗಳ ಮೌಲ್ಯದೊಂದಿಗೆ ಸಾಮಗ್ರಿಗಳನ್ನು ಉತ್ತಮ ಸ್ಥಿತಿಯಲ್ಲಿ ಸ್ವೀಕರಿಸಲಾಗಿದೆ ಎಂಬ ಸಂಬಂಧಿತ ಇಂಜಿನಿಯರ್ ಅವರ ಸೂಕ್ತ ಸ್ವೀಕೃತಿ ದಾಖಲೆಯಲ್ಲಿಲ್ಲ.
- ❖ ಆರಂಭಿಕ ಶಿಲ್ಕು, ಪರಿಮಾಣ ಮತ್ತು ಸ್ವೀಕರಿಸಲಾದ/ವಿತರಿಸಲಾದ ಸಾಮಗ್ರಿಗಳ ಮೌಲ್ಯ ಮತ್ತು ಅಂತಿಮ ಶಿಲ್ಕು ಇವುಗಳನ್ನು ಎಇಇ ದಾಖಲಿಸಿಲ್ಲ ಮತ್ತು ದೃಢೀಕರಿಸಿಲ್ಲ.

### *5.3.1 ವಾರ್ಷಿಕ ದಾಸ್ತಾನು ಪರಿಶೀಲನೆಯ ಸಮಯದಲ್ಲಿ ಸಾಮಗ್ರಿಗಳ ಕೊರತೆಯನ್ನು ಗಮನಿಸಿರುವುದು*

ವಾರ್ಷಿಕ ದಾಸ್ತಾನು ಪರಿಶೀಲನೆ ವರದಿಗಳು ಮತ್ತು ಇತರ ಸಂಬಂಧಿತ ದಾಖಲೆಗಳ ಲೆಕ್ಕಪರಿಶೀಲನೆಯಿಂದ, ಕೆಳಗಿನ **ಕೋಷ್ಟಕ 5.1**ರಲ್ಲಿ ಉಲ್ಲೇಖಿಸಿರುವಂತೆ, ಉಪ–ವಿಭಾಗಗಳಲ್ಲಿ ಕಾರ್ಯನಿರ್ವಹಿಸುವ ಅವಧಿಯಲ್ಲಿ ನೌಕರರಿಗೆ ನೀಡಲಾಗಿದ್ದ ಸಾಮಗ್ರಿಗಳಲ್ಲಿ ಕೊರತೆ ವರದಿಯಾಗಿರುವುದು ಕಂಡುಬಂದಿತು.

**ಕೋಷ್ಟಕ 5.1: ಸಾಮಗ್ರಿಗಳ ಕೊರತೆ ವರದಿಯಾದ ಅಧಿಕಾರಿಗಳ ಹೆಸರು ಮತ್ತು ಹುದ್ದೆ**

| ವಿಭಾಗ/ಉಪ ವಿಭಾಗ | ಅಧಿಕಾರಿಯ ಹೆಸರು | ಹುದ್ದೆ | ಮೊತ್ತ (₹) |
|---|---|---|---|
| ಹೂವಿನಹಡಗಲಿ | ಶ್ರೀ ಆರ್.ಉತ್ತಯ್ಯ | ದಾಸ್ತಾನು ಪಾಲಕ | 8,47,464 |
| ಕೋಲಾರ | ಶ್ರೀ ಬಿ.ಎನ್.ವಿಜಯಕುಮಾರ್ | ಎಇಇ | 2,39,19,714 |
| ಕೊಪ್ಪಳ | ಶ್ರೀ ಹೆಚ್.ಟಿ.ವೆಂಕಟೇಶ್ | ಎಇ | 24,00,911 |
| | ಶ್ರೀ ಪಿ.ಕೆ.ಮಲ್ಲಿಕಾರ್ಜುನ್ | ಇಇ | 10,08,814 |
| ಮಂಗಳೂರು | ಶ್ರೀ ಕೆ.ಎಸ್.ಪಾಟೀಲ್ | ಎಇಇ | 1,30,59,953 |
| ಶಿವಮೊಗ್ಗ | ಶ್ರೀ ಜಿ.ಇ.ಮಲ್ಲಿಕಾರ್ಜುನಪ್ಪ | ಎಇಇ | 22,16,691 |
| ಒಟ್ಟು | | | 4,34,53,548 |

ಮೂಲ: ಕೆಆರ್‌ಐಡಿಎಲ್ ಒದಗಿಸಿದ ದಾಖಲೆಗಳ ಆಧಾರದ ಮೇಲೆ ಲೆಕ್ಕಪರಿಶೋಧನೆ ಸಂಕಲಿಸಿದ್ದು

ಈ ಹಿಂದೆ ನೀಡಲಾದ ಸಾಮಗ್ರಿಗಳ ಲೆಕ್ಕವನ್ನು ಇತ್ಯರ್ಥಪಡಿಸದೆ ಇರುವಾಗಲೂ ಹೆಚ್ಚಿನ ಮೌಲ್ಯದ ಸಾಮಗ್ರಿಗಳನ್ನು ಎಇ/ಜೆಇ ಮತ್ತು ಇಇ ಮತ್ತು ಎಇಇ ಇವರಿಗೂ ಸಹ ನೀಡಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಸೂಕ್ತ ಭದ್ರತೆ ಹಾಗೂ ಸಕಾಲದಲ್ಲಿ ವಸೂಲಿ ಮಾಡದೆ ಸಾಮಗ್ರಿಗಳನ್ನು ನೌಕರರಿಗೆ ನೀಡಲಾಗಿದೆ. ಸಂಬಂಧಪಟ್ಟ ಇಇ/ಎಇಇ ಅವರಿಂದ ಅರ್ಧ–ವಾರ್ಷಿಕ ದಾಸ್ತಾನು ಪರಿಶೀಲನೆ ವರದಿಗಳನ್ನು ಪಡೆಯುವಲ್ಲಿ ಕೇಂದ್ರ ಕಛೇರಿ ವಿಫಲವಾಗಿದ್ದು, ಸೇವೆಯಿಂದ ನಿವೃತ್ತರಾದ ನೌಕರರ ವಿರುದ್ಧ "ನಗದು ರೂಪದಲ್ಲಿ ವಸೂಲು ಮಾಡಬೇಕಿರುವ ಸಾಮಗ್ರಿಯ ಮೌಲ್ಯ" ಇದರಲ್ಲಿ ಪರಿಣಮಿಸಿತು.

ಕಟ್ಟುನಿಟ್ಟಿನ ಅನುಸರಣೆಗಾಗಿ ವಿಭಾಗಗಳಿಗೆ ಸುತ್ತೋಲೆ ಸೂಚನೆಗಳನ್ನು ನೀಡಲಾಗುವುದು ಮತ್ತು ಈ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ಮುಂದುವರೆದು, ಲೆಕ್ಕಪರಿಶೋಧನೆಯಲ್ಲಿ ಸೂಚಿಸಿದಂತಹ ನ್ಯೂನತೆಗಳನ್ನು ಪರಿಹರಿಸಲು, ಕಂಪನಿಯು ಯೋಜನಾ ಅಧಿಕಾರಿಗಳಿಗಾಗಿ 'ಸಿಮೆಂಟ್ ಮತ್ತು ಸ್ಟೀಲ್ ಅಪ್ಲಿಕೇಶನ್' ಎಂಬ ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಿದೆ, ಅದರ ಮೂಲಕ ಈ ಸಾಮಗ್ರಿಗಳ ಪೂರೈಕೆ, ವಿತರಣೆಗಳು ಮತ್ತು ಅವುಗಳ ಬಳಕೆಯ ಜಾಡನ್ನು ಪತ್ತೆಹಚ್ಚಬಹುದಾಗಿದೆ ಎಂದು ಉತ್ತರಿಸಿದೆ.

### *5.3.2 ಬಿಬಿಎಮ್‌ಪಿ ಉಪ–ವಿಭಾಗಗಳು ಸಾಮಗ್ರಿಗಳ ಲೆಕ್ಕ ನಿರ್ವಹಣೆ ಮಾಡದಿರುವುದು*

ಕೆಆರ್‌ಐಡಿಎಲ್‌ನ ಯಾವುದೇ ಪರೀಕ್ಷಾ–ತನಿಖೆ ಮಾಡಲಾದ ಬಿಬಿಎಮ್‌ಪಿ ಉಪ–ವಿಭಾಗಗಳು ಸಾಮಗ್ರಿಗಳ ಖರೀದಿ ರಸೀದಿಗಳು ಮತ್ತು ನೀಡಿಕೆಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಿರ್ವಹಿಸದಿರುವುದನ್ನು ಲೆಕ್ಕಪರಿಶೀಲನೆಯು ಗಮನಿಸಿದೆ. ಸಾಮಗ್ರಿಗಳ ದಾಖಲೆಗಳ ನಿರ್ವಹಣೆ ಮಾಡದಿರುವುದರಿಂದಾಗಿ ಖರೀದಿಯ ಸತ್ಯಾಂಶ ಮತ್ತು ಪಾವತಿಯ ನೈಜತೆ ಮತ್ತು ಸಾಮಗ್ರಿಗಳ ಬಳಕೆಯನ್ನು ಪರಿಶೀಲಿಸಲಾಗಲಿಲ್ಲ. ಅಲ್ಲದೆ, ಸ್ಥಾಯಿ ಆದೇಶಗಳು ಮತ್ತು ಕೇಂದ್ರ ಕಛೇರಿಯ ಸೂಚನೆಗಳನ್ನು ನಿರ್ಲಕ್ಷಿಸಿ ಸಿಮೆಂಟ್ ಮತ್ತು ಕಬ್ಬಿಣ ಸೇರಿದಂತೆ ಎಲ್ಲಾ ಸಾಮಗ್ರಿಗಳನ್ನು ಸ್ಥಳೀಯವಾಗಿ ಗುಂಪು ನಾಯಕರುಗಳ ಮೂಲಕ ಖರೀದಿಸಲಾಗಿದೆ.

ಅಗತ್ಯತೆ ಉಂಟಾದಾಗ ಸಾಮಗ್ರಿಗಳನ್ನು ಖರೀದಿಸಲಾಗುತ್ತಿದೆ ಮತ್ತು ದಾಸ್ತಾನು ಕಾಯ್ದಿಡುವ ವ್ಯವಸ್ಥೆ ಇಲ್ಲ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ದಾಸ್ತಾನು ಲೆಕ್ಕವನ್ನು ಕೇವಲ ಕಾಯ್ದಿಟ್ಟ ದಾಸ್ತಾನಿಗೆ ಮಾತ್ರವಾಗಿರದೆ ಉಪ–ವಿಭಾಗಗಳಿಂದ ಖರೀದಿಸಲಾದ ಎಲ್ಲಾ ಸಾಮಗ್ರಿಗಳಿಗೂ ನಿರ್ವಹಿಸಬೇಕಾದ ಕಾರಣ ಉತ್ತರವು ಸ್ವೀಕಾರಾರ್ಹವಾಗಿಲ್ಲ.

## 5.4 ಲೆಕ್ಕಪರಿಶೋಧನಾ ಸಮಿತಿ ಮತ್ತು ನಿರ್ದೇಶಕರ ಮಂಡಳಿಯ ಸಭೆಗಳು

ಕಂಪನಿಯು ಪ್ರತಿ ಹಣಕಾಸು ವರ್ಷದಲ್ಲಿ ಅದರ ನಿರ್ದೇಶಕರ ಮಂಡಳಿಯ, ಸತತ ಎರಡು ಸಭೆಗಳ ನಡುವೆ 120 ದಿನಗಳಿಗಿಂತ ಹೆಚ್ಚು ಅಂತರ ಇರದಂತೆ, ಕನಿಷ್ಠ ನಾಲ್ಕು ಸಭೆಗಳನ್ನು ನಡೆಸಬೇಕಾಗಿತ್ತು. ಆದರೆ, ನಿರ್ದೇಶಕರ ಮಂಡಳಿಯು 2017–18 ಮತ್ತು 2018–19 ವರ್ಷಗಳಲ್ಲಿ ಸೇರಬೇಕಿದ್ದ ಆರು ಸಭೆಗಳಿಗೆ ಪ್ರತಿಯಾಗಿ ಮೂರು ಬಾರಿ ಮಾತ್ರ ಸಭೆ ನಡೆಸಿತು ಮತ್ತು ಎರಡು ಸಭೆಗಳ ನಡುವಿನ ಅಂತರವು 120 ದಿನಗಳಿಗಿಂತಲೂ ಹೆಚ್ಚಿತ್ತು.

ಲೆಕ್ಕಪರಿಶೋಧನಾ ಸಮಿತಿಯನ್ನು 2018–19ನೇ ಸಾಲಿನಲ್ಲಿ ಸ್ಥಾಪಿಸಲಾಯಿತು ಮತ್ತು 3 ಡಿಸೆಂಬರ್ 2019 ಮತ್ತು 20 ಡಿಸೆಂಬರ್ 2019ರಂದು ಎರಡು ಸಭೆಗಳನ್ನು ನಡೆಸಲಾಯಿತು ಮತ್ತು ವರ್ಷದ ಹಣಕಾಸು ತಖ್ತೆಗಳನ್ನು ಪರಿಶೀಲಿಸಿತು ಎಂದು ಹೇಳಲಾಗಿದೆ. 2018–19ನೇ ಸಾಲಿನಲ್ಲಿ ಲೆಕ್ಕಪರಿಶೋಧನಾ ಸಮಿತಿಯು ನಿರ್ವಹಿಸಿದ ಮೇಲ್ವಿಚಾರಣಾ ಕಾರ್ಯದ ವಿವರಗಳು ದಾಖಲೆಯಲ್ಲಿಲ್ಲ.

ವಿಭಾಗ/ಉಪ–ವಿಭಾಗಗಳ ಚಟುವಟಿಕೆಗಳ ಮೇಲೆ ಕೇಂದ್ರ ಕಛೇರಿಯ ಮೇಲ್ವಿಚಾರಣೆಯ ಕೊರತೆಯಿಂದಾಗಿ, ಕಾಮಗಾರಿಗಳ ಆರಂಭ, ಕಾರ್ಯಗತಗೊಳಿಸುವಿಕೆ ಮತ್ತು ವಹಿಸಿಕೊಟ್ಟ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿದೆ. ಹಣಕಾಸು ನಿರ್ವಹಣೆಯು

ಪರಿಣಾಮಕಾರಿಯಾಗಿರಲಿಲ್ಲ, ಇದರಿಂದಾಗಿ ಕಾಮಗಾರಿವಾರು ಲೆಕ್ಕ ಮತ್ತು ವಹಿಸಿಕೊಟ್ಟ ಇಲಾಖೆವಾರು ಲೆಕ್ಕ ನಿರ್ವಹಣೆ ಮಾಡಲಾಗಿಲ್ಲ. ವಿಭಾಗಗಳು/ಉಪ-ವಿಭಾಗಗಳ ವ್ಯವಹಾರಗಳ ಮೇಲೆ ಕೇಂದ್ರ ಕಛೇರಿ ಸಾಕಷ್ಟು ನಿಯಂತ್ರಣ ಹೊಂದಿರದ ಪರಿಣಾಮವಾಗಿ ಯೋಜನೆ ಅನುಷ್ಠಾನ ಘಟಕಗಳು ಇಲಾಖೆಗಳು/ಸಂಸ್ಥೆಗಳು ವಹಿಸಿಕೊಡುವ ಕಾಮಗಾರಿಗಳನ್ನು ನೇರವಾಗಿ ಸ್ವೀಕರಿಸುತ್ತಿದ್ದವು.

2017-18 ಮತ್ತು 2018-19ರ ಹಣಕಾಸು ವರ್ಷಗಳಲ್ಲಿ ಕಂಪನಿಯು ಆರು ಸಭೆಗಳನ್ನು ನಡೆಸಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ಆದರೆ, ಆಡಳಿತಾತ್ಮಕ ಅನಿವಾರ್ಯ ಕಾರಣಗಳಿಂದ ಎರಡು ಸಭೆಗಳ ನಡುವಿನ ನಿಗದಿತ ಅಂತರದ ಅವಧಿಯೊಳಗೆ ಮಂಡಳಿಯ ಸಭೆಗಳನ್ನು ನಡೆಸಲು ಸಾಧ್ಯವಾಗಲಿಲ್ಲ. ಪ್ರತಿ ಹಣಕಾಸು ವರ್ಷದಲ್ಲಿ ಕಂಪನಿಯು ಕನಿಷ್ಠ ನಾಲ್ಕು ಸಭೆಗಳನ್ನು ನಡೆಸಬೇಕಾಗಿರುವುದರಿಂದ ಮತ್ತು ಎರಡು ಸಭೆಗಳ ನಡುವಿನ ಅಂತರವು 120 ದಿನಗಳನ್ನು ಮೀರಬಾರದಾದ್ದರಿಂದ ಉತ್ತರವು ಸ್ವೀಕಾರಾರ್ಹವಾಗಿಲ್ಲ.

## 5.5 ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶ

ರಾಷ್ಟ್ರೀಯ ಮಾಹಿತಿ ಕೇಂದ್ರದ (ಎನ್‌ಐಸಿ) ಸಹಾಯದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಹಂತಗಳಲ್ಲಿ ದಕ್ಷ ಮತ್ತು ಪರಿಣಾಮಕಾರಿ ಮೇಲ್ವಿಚಾರಣೆಗಾಗಿ ಇಲಾಖೆಯು ಕೈಗೊಂಡಿರುವ ಕಾರ್ಯಗಳ ಮೇಲ್ವಿಚಾರಣೆಗಾಗಿ ಒಂದು ಅಪ್ಲಿಕೇಶನ್ ತಂತ್ರಾಂಶ ಅಭಿವೃದ್ಧಿಪಡಿಸಿತು. ಗಾಂಧಿ ಸಾಕ್ಷಿ ಕಾಯಕ ಅಪ್ಲಿಕೇಶನ್ ಅನ್ನು ಅಭಿವೃದ್ಧಿ ಕಾರ್ಯಗಳ ಅನುಷ್ಠಾನದಲ್ಲಿ, ಪಾರದರ್ಶಕತೆ ಮತ್ತು ಸಾರ್ವಜನಿಕ ಸಹಭಾಗಿತ್ವವನ್ನು ತರಲು ಅಭಿವೃದ್ಧಿಪಡಿಸಲಾಗಿದೆ. 03 ಅಕ್ಟೋಬರ್ 2013ರಿಂದ ಗಾಂಧಿ ಸಾಕ್ಷಿ ಕಾಯಕ ಅಪ್ಲಿಕೇಶನ್‌ನಿಂದ ಪಾವತಿ ಸೂಚನೆಯನ್ನು ರಚಿಸದೆ ಬಿಲ್‌ಗಳಿಗೆ ಯಾವುದೇ ಪಾವತಿಗಳನ್ನು ಮಾಡಲಾಗದು ಮತ್ತು ಛಾಯಾಚಿತ್ರಗಳೊಂದಿಗೆ ಕಾಮಗಾರಿಗಳ ಎಲ್ಲಾ ವಿವರಗಳನ್ನು ದಾಖಲಿಸಬೇಕು ಮತ್ತು ಸರ್ಕಾರಕ್ಕೆ ಸಲ್ಲಿಸಬೇಕು ಹಾಗೂ "ಗಾಂಧಿ ಸಾಕ್ಷಿ ಕಾಯಕ ವರ್ಕ್ ಸಾಫ್ಟ್"ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವಾರ್ಷಿಕ ವರದಿಯಲ್ಲಿ ಹೇಳಲಾಗಿದೆ. ಅಲ್ಲದೆ, ಅಂದಾಜುಪಟ್ಟಿಗಳಿಗೆ ತಾಂತ್ರಿಕ ಮಂಜೂರಾತಿ ನೀಡುವಾಗ ಮತ್ತು ಕೆಆರ್‌ಐಡಿಎಲ್‌ಗೆ ವಹಿಸಲಾದ ಎಲ್ಲಾ ಕಾಮಗಾರಿಗಳಿಗೂ ಅದೇ ವಿಧಾನವನ್ನು ಅನುಸರಿಸಬೇಕೆಂದು ಪುನರುಚ್ಚರಿಸಲಾಗಿದೆ.

ಕೆಆರ್‌ಐಡಿಎಲ್‌ನ ಯಾವುದೇ ಉಪ-ವಿಭಾಗಗಳು/ವಿಭಾಗಗಳು ಮೇಲಿನ ಕರ್ನಾಟಕ ಸರ್ಕಾರದ ಸೂಚನೆಗಳಿಗೆ ಬದ್ಧವಾಗಿರಲಿಲ್ಲ ಮತ್ತು ಕಾಮಗಾರಿಯ ಮೂರು ಹಂತದ ಛಾಯಾಚಿತ್ರಗಳನ್ನು ಒಳಗೊಂಡಂತೆ ಕೆಆರ್‌ಐಡಿಎಲ್‌ನಿಂದ ಕಾರ್ಯಗತಗೊಳಿಸಿದ ಕಾಮಗಾರಿಗಳ ವಿವರಗಳನ್ನು ಕೆಆರ್‌ಐಡಿಎಲ್ ಉಪ-ವಿಭಾಗಗಳು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ದಾಖಲಿಸಿರಲಿಲ್ಲ ಮತ್ತು ಇಂದೀಕರಿಸಿರಲಿಲ್ಲ ಎಂಬುದನ್ನು ಪರೀಕ್ಷಾ-ತನಿಖೆ ನಡೆಸಲಾದ ಉಪ-ವಿಭಾಗಗಳ ದಾಖಲೆಗಳ ಪರಿಶೀಲನೆಯು ತಿಳಿಯಪಡಿಸಿತು.

ಇದನ್ನು ಗಮನಕ್ಕೆ ತಂದಾಗ, ಎಲ್ಲಾ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ಹೊಸ ತಂತ್ರಾಂಶದಲ್ಲಿ ಇಂದೀಕರಿಸಲಾಗುವುದು ಎಂದು ಉತ್ತರಿಸಲಾಯಿತು.

***ಶಿಫಾರಸು-7:*** *ದಾಸ್ತಾನು ನಿರ್ವಹಣೆ ಸೇರಿದಂತೆ ಕಾಮಗಾರಿಗಳ ತತ್ಕಾಲದ ಮೇಲ್ವಿಚಾರಣೆಗಾಗಿ ರಾಜ್ಯ ಸರ್ಕಾರವು ಅಸ್ತಿತ್ವದಲ್ಲಿರುವ ಯೋಜನೆ ನಿರ್ವಹಣೆ ಸಾಫ್ಟ್‌ವೇರ್ (ಭೂಸಿರಿ) ಅನ್ನು ಇಂದೀಕರಿಸಲು/ಮಾರ್ಪಡಿಸಲು ಕೆಆರ್‌ಐಡಿಎಲ್‌ಗೆ ಸೂಚನೆ ನೀಡಬೇಕು. ವಹಿಸಿದ ಕಾಮಗಾರಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯ ಜಾಡು ಹಿಡಿದು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಅನುವಾಗಲು ವಹಿಸಿದ ಇಲಾಖೆಗಳಿಗಾಗಿ ಆ ಸಾಫ್ಟ್‌ವೇರ್ ಒಂದು ಮಾಡ್ಯೂಲ್ ಅನ್ನು ಒಳಗೊಂಡಿರಬೇಕು.*

## 5.6 ಗುಣಮಟ್ಟ ನಿಯಂತ್ರಣಕ್ಕೆ ಸಂಬಂಧಿಸಿದ ಲೋಪಗಳು

### *5.6.1 ಗುಣಮಟ್ಟ ನಿರ್ವಹಣೆ ವ್ಯವಸ್ಥೆ (ಕ್ಯೂಎಮ್ಎಸ್) ಮತ್ತು ಗುಣಮಟ್ಟ ಭರವಸೆ ಕಾರ್ಯಕ್ರಮದ (ಕ್ಯೂಎಪಿ) ಅನುಪಸ್ಥಿತಿ*

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಮತ್ತು ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ನಿಯಮಗಳು ಉನ್ನತ ಮಟ್ಟದ ಅಧಿಕಾರಿಗಳು ಗುಣಮಟ್ಟದ ಮಾರ್ಗಸೂಚಿಗಳನ್ನು ನಿರ್ದಿಷ್ಟಪಡಿಸಬೇಕು ಮತ್ತು ನಿರ್ಮಾಣ ಪ್ರಕ್ರಿಯೆಯಲ್ಲಿ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ಕಾಮಗಾರಿ ಸ್ಥಳದ ಎಲ್ಲಾ ಚಟುವಟಿಕೆಗಳಿಗೆ ಗುಣಮಟ್ಟ ನಿರ್ವಹಣೆ ವ್ಯವಸ್ಥೆ ಮತ್ತು ಗುಣಮಟ್ಟ ಭರವಸೆ ಕಾರ್ಯಕ್ರಮವನ್ನು ಅನ್ವಯಿಸಬೇಕು ಎಂದು ನಿಗದಿಪಡಿಸುತ್ತವೆ.

ಕೆಆರ್‌ಐಡಿಎಲ್‌ನಲ್ಲಿ ಗುಣಮಟ್ಟ ನಿರ್ವಹಣೆ ವ್ಯವಸ್ಥೆ ಮತ್ತು ಗುಣಮಟ್ಟ ಭರವಸೆ ಕಾರ್ಯಕ್ರಮಗಳನ್ನು ಸ್ಥಾಪಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳ ಕಂಡಿಕೆ 46ರ ಸೆಕ್ಷನ್ 8ರಡಿಯಲ್ಲಿ ಸ್ಥಾಪಿಸಲಾದ ಗುಣಮಟ್ಟ ನಿಯಂತ್ರಣ ವಿಭಾಗಗಳು ಸಹ ನಿಷ್ಕ್ರಿಯಗೊಂಡಿವೆ ಎಂದು ಕಂಡುಬಂದಿತು.

### *5.6.2 ಕೆಆರ್‌ಐಡಿಎಲ್‌ನಲ್ಲಿ ಗುಣಮಟ್ಟ ಭರವಸೆ ಮತ್ತು ನಿಯಂತ್ರಣ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸದಿರುವುದು*

ಕಆರ್‌ಐಡಿಎಲ್‌ನ ಸಿಇ (ಉತ್ತರ) ಅವರು ಎಲ್ಲಾ ಎಸ್‌ಇಗಳು/ಇಇಗಳು/ಎಇಇಗಳಿಗೆ ಗುಣಮಟ್ಟ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ಕೆಳಕಂಡಂತೆ ಸೂಚನೆಗಳನ್ನು ನೀಡಿದ್ದರು (ಫೆಬ್ರವರಿ 2014).

**ಮೊದಲನೇ ಹಂತ**

- ವಿಶಿಷ್ಟತೆಗಳ ಅನುಸಾರ ಯೋಜನಾ ಅಧಿಕಾರಿಗಳು ಸಾಮಗ್ರಿಗಳು ಮತ್ತು ಕಾಮಗಾರಿಯ ಕಾರ್ಯನೈಪುಣ್ಯದ ಗುಣಮಟ್ಟ ಪರೀಕ್ಷೆಯನ್ನು ನಡೆಸಬೇಕು

**ಎರಡನೇ ಹಂತ**

- ಕಾಮಗಾರಿಗಳ ಪರಿಶೀಲನೆ ಮತ್ತು ವರದಿಗಳ ಸಲ್ಲಿಕೆಗಾಗಿ ಕೆಆರ್‌ಐಡಿಎಲ್‌ನಲ್ಲಿ ಜಿಲ್ಲಾ ಗುಣಮಟ್ಟ ಮೇಲ್ವಿಚಾರಕರುಗಳನ್ನು ನೇಮಿಸಲಾಗುತ್ತದೆ. ಯೋಜನಾ ಅಧಿಕಾರಿಗಳು ಜಿಲ್ಲಾ ಗುಣಮಟ್ಟ ಮೇಲ್ವಿಚಾರಕರುಗಳಿಗೆ ಅಗತ್ಯ ವಿವರಗಳನ್ನು ಒದಗಿಸಬೇಕು ಮತ್ತು ಸಹಕರಿಸಬೇಕು

**ಮೂರನೇ ಹಂತ**

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾರ್ಗಸೂಚಿಗಳ ಪ್ರಕಾರ ರಾಜ್ಯ ಗುಣಮಟ್ಟ ಮೇಲ್ವಿಚಾರಕರುಗಳು ತಪಾಸಣೆ ನಡೆಸುತ್ತಾರೆ.

12 ಡಿಸೆಂಬರ್ 2014ರಂದು ನಡೆದ ಎಸ್‌ಇ/ಇಇ ಅವರುಗಳ ಸಮಾವೇಶದಲ್ಲಿ ಮೂರು ಹಂತದ ಗುಣಮಟ್ಟ ನಿಯಂತ್ರಣ ಕಾರ್ಯವಿಧಾನದ ಅನುಷ್ಠಾನವನ್ನು ಚರ್ಚಿಸಲಾಯಿತು ಮತ್ತು ಗುಣಮಟ್ಟ ನಿಯಂತ್ರಣ ಸಂಹಿತೆ ಹಾಗೂ ಇತರ ವಿವರಗಳನ್ನು ಕೆಆರ್‌ಐಡಿಎಲ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಯಿತು. ಎಇಇ ಶೇಕಡಾ 20ರಷ್ಟು ಗುಣಮಟ್ಟ ಪರೀಕ್ಷೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿದ್ದು, ಶೇಕಡಾ 5ರಷ್ಟು ಪರೀಕ್ಷೆಗಳನ್ನು ಉಸ್ತುವಾರಿ ಇಇ ಅವರ ಸಮ್ಮುಖದಲ್ಲಿ ನಡೆಸಬೇಕು. ಇಇ ತನ್ನ ಅವಲೋಕನಗಳನ್ನು ಗುಣಮಟ್ಟ ನಿಯಂತ್ರಣ ರಿಜಿಸ್ಟರ್ ಭಾಗ–Iರಲ್ಲಿ ದಾಖಲಿಸಬೇಕು. ಅನುಸರಣೆ

ಮಾಡಿರದ ವರದಿಗಳನ್ನು ಸಮಯಕ್ಕೆ ಸರಿಯಾಗಿ ನೀಡುವುದನ್ನು ಮತ್ತು ಇಂಜಿನಿಯರ್ ಸಮಯಕ್ಕೆ ಸರಿಯಾಗಿ ಕ್ರಮ ತೆಗೆದುಕೊಳ್ಳುವುದನ್ನು ಇಇ ಖಚಿತಪಡಿಸಿಕೊಳ್ಳಬೇಕು.

ಆದಾಗ್ಯೂ, ಮೊದಲನೇ ಹಂತದಲ್ಲಿ ಅವರಿಗೆ ವಹಿಸಿಕೊಟ್ಟಿರುವ ಕಾಮಗಾರಿಗಳ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ವಿಭಾಗಗಳು ಮತ್ತು ಉಪ–ವಿಭಾಗಗಳಿಂದ ಯಾವುದೇ ಕಡ್ಡಾಯ ಪರೀಕ್ಷೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ಗುಣಮಟ್ಟ ನಿರ್ವಹಣೆ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಯಾವುದೇ ಅನುಸರಣಾ ಕ್ರಮವನ್ನು ತೆಗೆದುಕೊಳ್ಳಲಾಗಿಲ್ಲ ಮತ್ತು ಲೆಕ್ಕಪರಿಶೋಧನೆಯ ಅವಧಿಯಲ್ಲಿ ಜಿಲ್ಲಾ ಗುಣಮಟ್ಟ ಮೇಲ್ವಿಚಾರಕರುಗಳು (ಎರಡನೇ ಹಂತ)/ರಾಜ್ಯ ಗುಣಮಟ್ಟದ ಮೇಲ್ವಿಚಾರಕರುಗಳು (ಮೂರನೇ ಹಂತ) ನೇಮಕಗೊಂಡಿರಲಿಲ್ಲ.

ಶ್ರೇಣಿ–2 ಮೇಲ್ವಿಚಾರಣೆಗೆ ಪಿಡಬ್ಲ್ಯೂಡಿ, ಪಿಆರ್‌ಇಡಿ ಮತ್ತು ಇತರ ಇಲಾಖೆಗಳಿಂದ ನಿವೃತ್ತರಾದ ಇಇಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಪ್ರಾಧ್ಯಾಪಕರನ್ನು ಜಿಲ್ಲಾ ಗುಣಮಟ್ಟ ಮೇಲ್ವಿಚಾರಕರುಗಳಾಗಿ ಮತ್ತು ಶ್ರೇಣಿ–3 ಮೇಲ್ವಿಚಾರಣೆಗೆ ನಿವೃತ್ತ ಸಿಇಗಳು, ಎಸ್‌ಇಗಳು ಮತ್ತು ಹಿರಿಯ ಪ್ರಾಧ್ಯಾಪಕರನ್ನು ರಾಜ್ಯ ಗುಣಮಟ್ಟ ಮೇಲ್ವಿಚಾರಕರುಗಳುಗಳಾಗಿ ನೇಮಕಪಟ್ಟಿ ಮಾಡಲಾಗಿದೆ ಮತ್ತು ಆರ್‌ಡಿಪಿಆರ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ಅನುಮೋದನೆ ಪಡೆಯಲಾಗಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿದೆ. ಇದಲ್ಲದೆ, ಕೆಆರ್‌ಐಡಿಎಲ್‌ನ ಎಇಇಗಳು ಮತ್ತು ಇಇಗಳು ನಿಯಮಿತವಾಗಿ ಕೆಲಸಗಳನ್ನು ಪರಿಶೀಲಿಸುತ್ತಾರೆ ಮತ್ತು ಎಲ್ಲಾ ಕಾಮಗಾರಿಗಳ ನಿಯಮಿತ ಗುಣಮಟ್ಟದ ನಿರ್ವಹಣೆಗಾಗಿ ಜಾರಿಯಲ್ಲಿರುವ ಮೊದಲ ಹಂತದ ಗುಣಮಟ್ಟದ ನಿರ್ವಹಣೆಗಾಗಿ ಸ್ಥಳೀಯ ಇಂಜಿನಿಯರಿಂಗ್ ಕಾಲೇಜು ಪ್ರಯೋಗಾಲಯಗಳು ಮತ್ತು ಸ್ಥಳೀಯ ತಾಂತ್ರಿಕ ಪ್ರಯೋಗಾಲಯಗಳಿಂದ ಗುಣಮಟ್ಟದ ವಿಶ್ಲೇಷಣೆಯನ್ನು ತೆಗೆದುಕೊಳ್ಳುತ್ತಾರೆ. ಸಂಹಿತೆಯ ನಿಯಮಗಳಲ್ಲಿ ಸೂಚಿಸಿದಂತೆ ಗುಣಮಟ್ಟದ ವಹಿಗಳನ್ನು ಕಾಮಗಾರಿ ಸ್ಥಳಗಳಲ್ಲಿ ನಿರ್ವಹಿಸಲಾಗುತ್ತದೆ ಮತ್ತು ಜಿಲ್ಲಾ ಗುಣಮಟ್ಟ ಮೇಲ್ವಿಚಾರಕರು/ರಾಜ್ಯ ಗುಣಮಟ್ಟ ಮೇಲ್ವಿಚಾರಕರು ಕಾಮಗಾರಿಗಳ ಮತ್ತಷ್ಟು ಸುಧಾರಣೆಗಾಗಿ ಆ ಕಾಮಗಾರಿಗಳ ವೀಕ್ಷಣೆ ಮತ್ತು ಮಾರ್ಗದರ್ಶನದೊಂದಿಗೆ ಕಾಮಗಾರಿ ಸ್ಥಳಗಳನ್ನು ಪರಿಶೀಲಿಸುತ್ತಾರೆ. ಗುಣಮಟ್ಟ ನಿರ್ವಹಣೆಯ ಪ್ರಕ್ರಿಯೆಯು ಚಾಲ್ತಿಯಿರುವುದರಿಂದ ಗುಣಮಟ್ಟ ವ್ಯವಸ್ಥೆಯು ನಿಷ್ಕ್ರಿಯವಾಗಿದೆ ಎಂಬ ಆಕ್ಷೇಪಣೆಯು ನಿಜವಲ್ಲ ಎಂದು ಉತ್ತರದಲ್ಲಿ ಹೇಳಲಾಗಿದೆ. ಕೆಳಗಿನ ಕಾರಣಗಳಿಗಾಗಿ ಉತ್ತರವು ಸ್ವೀಕಾರಾರ್ಹವಾಗಿಲ್ಲ:

- ❖ ಕೇಂದ್ರ ಕಛೇರಿಯಲ್ಲಿ ಮತ್ತು ಪರೀಕ್ಷೆ–ತನಿಖೆ ನಡೆಸಲಾದ 24 ಉಪ–ವಿಭಾಗಗಳಲ್ಲಿ ಗುಣಮಟ್ಟ ನಿಯಂತ್ರಣ ಮೇಲ್ವಿಚಾರಕರುಗಳ ಎಂಪನೆಲ್ ಮತ್ತು ನೇಮಕಗೊಂಡ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿಲ್ಲ.
- ❖ ರಾಜ್ಯ ಗುಣಮಟ್ಟ ಮೇಲ್ವಿಚಾರಕರ/ಜಿಲ್ಲಾ ಗುಣಮಟ್ಟ ಮೇಲ್ವಿಚಾರಕರ ನೇಮಕಾತಿಯು ನಿರ್ದಿಷ್ಟ ನಿಯಮಗಳು ಮತ್ತು ಷರತ್ತುಗಳೊಂದಿಗೆ ಇರಬೇಕು. ಪರಿಶೀಲಿಸಿದ ಕಾಮಗರಿಗಳ ಸಂಖ್ಯೆ, ನಡೆಸಿದ ಪರೀಕ್ಷೆಗಳ ಪ್ರಮಾಣ, ಸಂಭಾವನೆ, ಪ್ರಯಾಣ ಭತ್ಯೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ರಾಜ್ಯ ಗುಣಮಟ್ಟ ಮೇಲ್ವಿಚಾರಕರ/ಜಿಲ್ಲಾ ಗುಣಮಟ್ಟ ಮೇಲ್ವಿಚಾರಕರ ವಿವರಗಳನ್ನು ಕೆಆರ್‌ಐಡಿಎಲ್ ಒದಗಿಸಲಿಲ್ಲ.
- ❖ ಚಿಕ್ಕಬಳ್ಳಾಪುರ ಉಪ–ವಿಭಾಗದ ಕೆಲವು ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳನ್ನು ಹೊರತುಪಡಿಸಿ, ಇತರ ಯಾವುದೇ ಉಪ–ವಿಭಾಗಗಳು ಲೆಕ್ಕಪರಿಶೋಧನೆಗಾಗಿ ಗುಣಮಟ್ಟ ನಿಯಂತ್ರಣ ವಹಿಗಳನ್ನು ಒದಗಿಸಲಿಲ್ಲ.
- ❖ ಕೇವಲ ಏಳು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುಣಮಟ್ಟ ನಿಯಂತ್ರಣ ವಹಿ ಭಾಗ –Iರ ನಿರ್ವಹಣೆ ಮಾಡಿರುವುದರಿಂದ ಕೆಆರ್‌ಐಡಿಎಲ್‌ನ ಎಇಇಗಳು ಮತ್ತು ಇಇಗಳು ಸ್ಥಳೀಯ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಸ್ಥಳೀಯ ತಾಂತ್ರಿಕ ಪ್ರಯೋಗಾಲಯಗಳ ಮೂಲಕ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡುತ್ತಾರೆ ಎಂಬ ಉತ್ತರಕ್ಕೆ ಸೂಕ್ತ ಪುರಾವೆಗಳಿಲ್ಲ.

❖ ಗುಣಮಟ್ಟದ ಮೇಲ್ವಿಚಾರಣೆಗೆ ಯಾವುದೇ ಮಂಜೂರಾದ ಎಇಇ ಮತ್ತು ಇಇ ಹುದ್ದೆ ಇಲ್ಲದಿರುವುದು ಸ್ಪಷ್ಟವಾಗಿರುವುದರಿಂದ ಗುಣಮಟ್ಟದ ವ್ಯವಸ್ಥೆಯು ಕ್ರಿಯಾತ್ಮಕವಾಗಿದೆ ಎಂಬ ಉತ್ತರವು ಸ್ವೀಕಾರಾರ್ಹವಾಗಿಲ್ಲ.

### *5.6.3 ಮೂರನೇ ವ್ಯಕ್ತಿ ಮೇಲ್ವಿಚಾರಕರ ನೇಮಕ ಮಾಡದಿರುವುದು*

ಆರ್‌ಡಿಪಿಆರ್ ಮತ್ತು ಇತರ ವಹಿಸಿಕೊಡುವ ಇಲಾಖೆಗಳು ನೀಡಿದ ಆದೇಶಗಳ ಪ್ರಕಾರ, ಮೂರು ಹಂತದ ಗುಣಮಟ್ಟದ ಮೇಲ್ವಿಚಾರಣೆಯ ಜೊತೆಗೆ, ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಸ್ವತಂತ್ರ ಮೂರನೇ ವ್ಯಕ್ತಿಯ ಮೇಲ್ವಿಚಾರಣೆಯನ್ನು ಸಹ ನಡೆಸಬೇಕು. ಉಪ–ವಿಭಾಗಗಳು ಅಂದಾಜುಪಟ್ಟಿಗಳನ್ನು ಸಿದ್ಧಪಡಿಸುವಾಗ ಪ್ರತಿ ಕಾಮಗಾರಿಯ ಅಂದಾಜು ವೆಚ್ಚದ ಶೇಕಡಾ 0.5ರಷ್ಟು ಭಾಗವನ್ನು ಮೂರನೇ ವ್ಯಕ್ತಿಯ ಮೇಲ್ವಿಚಾರಣೆಗೆ ಮೀಸಲಿಡಬೇಕು. ಗುಣಮಟ್ಟ ನಿಯಂತ್ರಣ ನಿರ್ವಹಣೆ ನಿಯಮಗಳ ಪ್ರಕಾರ, ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಗುಣಮಟ್ಟ ನಿಯಂತ್ರಣ ಮೇಲ್ವಿಚಾರಕರುಗಳಿಗೆ ಮೊದಲೇ ಸೂಚನೆಯನ್ನು ಒದಗಿಸಬೇಕು. ಲೆಕ್ಕಪರಿಶೋಧನೆಯು ಕೆಳಗಿನವುಗಳನ್ನು ಗಮನಿಸಿದೆ:

❖ ನಿರ್ದಿಷ್ಟ ನಿಯಮಗಳು ಮತ್ತು ಷರತ್ತುಗಳ ಮೇಲೆ ಮೂರನೇ ವ್ಯಕ್ತಿ ಮೇಲ್ವಿಚಾರಕರುಗಳನ್ನು ಕೇಂದ್ರ ಕಛೇರಿಯಿಂದಾಗಲೀ ಅಥವಾ ಉಪ–ವಿಭಾಗಗಳಿಂದಾಗಲೀ ನೇಮಿಸಲಾಗಿಲ್ಲ. ಆದಾಗ್ಯೂ, ಕೆಲವೇ ಕೆಲವು ಪರೀಕ್ಷಾ–ಪರಿಶೀಲಿಸಲಾದ ಕಾಮಗಾರಿಗಳಲ್ಲಿ, ಮೂರನೇ ವ್ಯಕ್ತಿಯ ಮೇಲ್ವಿಚಾರಣಾ ವರದಿಗಳನ್ನು ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಲಾಯಿತು.

❖ ನೆರೆಯ ಇಂಜಿನಿಯರಿಂಗ್ ಕಾಲೇಜುಗಳಿಂದ ಪಡೆದ ಮೂರನೇ ವ್ಯಕ್ತಿಯ ಮೇಲ್ವಿಚಾರಣಾ ವರದಿಗಳು, ಗುಂಪು ನಾಯಕರುಗಳು ಕಾಮಗಾರಿಗಾಗಿ ಸ್ಥಳಕ್ಕೆ ತಂದಂತಹ ಜಲ್ಲಿಕಲ್ಲುಗಳ ಗುಣಮಟ್ಟದ ವರ್ಗೀಕರಣ[22] (ಸೀವ್ ಅನಾಲಿಸಿಸ್)/ವಿಶ್ಲೇಷಣೆಯಾಗಿದ್ದವು ಹಾಗೂ ಕಾಂಕ್ರೀಟ್‌ನ ಧಾರಣಶಕ್ತಿಯ[23] (ಕ್ಯೂಬ್ ಟೆಸ್ಟ್) ವರದಿಗಳಾಗಿದ್ದವು. ಅಂತಹ ಪರೀಕ್ಷಾ ವರದಿಗಳನ್ನು ಕಾಮಗಾರಿಯ ಸ್ಥಳದಿಂದ ಸಂಗ್ರಹಿಸಿದ ಮಾದರಿಗಳು ಎಂದು ಅರ್ಥೈಸಲಾಗುವುದಿಲ್ಲ.

❖ ಗ್ರಾನ್ಯುಲರ್ ಸಬ್–ಬೇಸ್ ಮತ್ತು ವೆಟ್ ಮಿಕ್ಸ್ ಮೆಕಾಡಮ್ ಹಾಗೂ ರಸ್ತೆ ಕಾಂಕ್ರೀಟ್‌ನ ಕ್ಯೂಬ್ ಟೆಸ್ಟ್ ಹೊರತುಪಡಿಸಿ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ನಿರ್ದಿಷ್ಟತೆ–900ರಲ್ಲಿ ಸೂಚಿಸಲಾದ ಯಾವುದೇ ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿಲ್ಲ. ಇದು ತೀರಾ ಕಡಿಮೆಯಾಗಿತ್ತು ಮತ್ತು ಅಂತಹ ಸಂದರ್ಭಗಳಲ್ಲಿಯೂ ಸಹ, ಉಪ–ವಿಭಾಗಗಳು ಅದೇ ವಿಶೇಷಣಗಳ ಸಾಮಗ್ರಿಗಳನ್ನು ಕಾಮಗಾರಿಗಳಲ್ಲಿ ಬಳಸಲಾಗಿದೆ ಎಂದು ಖಚಿತಪಡಿಸಿಕೊಂಡಿಲ್ಲ.

❖ ಸಾಮಗ್ರಿಗಳ ಖರೀದಿಗೆ ಪ್ರತಿಯಾಗಿ ನಿಗದಿತ ಗುಣಮಟ್ಟ ಪರೀಕ್ಷಾ ವರದಿಗಳಿರಲಿಲ್ಲ.

❖ ಲೆಕ್ಕಪರಿಶೋಧನೆಯು ಪರೀಕ್ಷಾ–ತನಿಖೆ ನಡೆಸಿದ ಎಲ್ಲಾ ಕಾಮಗಾರಿಗಳಲ್ಲಿಯೂ ಮೂರನೇ ವ್ಯಕ್ತಿಯ ಸಾಮಗ್ರಿ ಪರೀಕ್ಷಾ ವರದಿ ಲಭ್ಯವಿರಲಿಲ್ಲ.

❖ ಯಾವುದೇ ಕಾಮಗಾರಿ ಬಿಲ್‌ಗಳಲ್ಲಿ ಗುಣಮಟ್ಟ ನಿಯಂತ್ರಣ ವರದಿಗಳು ಮತ್ತು ಮೂರನೇ ವ್ಯಕ್ತಿಯ ಮೇಲ್ವಿಚಾರಣಾ ವರದಿಗಳನ್ನು ಲಗತ್ತಿಸಲಾಗಿಲ್ಲ ಮತ್ತು ಕೈಪಿಡಿಯ ನಿಯಮಗಳನ್ನು ಉಲ್ಲಂಘಿಸಿ, ಪಾವತಿಗಾಗಿ ಬಿಲ್‌ಗಳನ್ನು ರವಾನಿಸಲಾಗಿದೆ. ಆದಾಗ್ಯೂ, ಬಿಬಿಎಂಪಿಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಬಿಬಿಎಂಪಿಯೇ ಗುಣಮಟ್ಟ ನಿಯಂತ್ರಣ ಪರೀಕ್ಷೆಗಳನ್ನು ನಡೆಸುತ್ತಿತ್ತು ಮತ್ತು ಪ್ರತಿ ಕಾಮಗಾರಿ ಬಿಲ್‌ನೊಂದಿಗೆ ವರದಿಗಳನ್ನು ಲಗತ್ತಿಸಲಾಗಿದೆ. ನಡೆಸಲಾದ ಗುಣಮಟ್ಟ ನಿಯಂತ್ರಣ ಪರೀಕ್ಷೆಗಳನ್ನು ಯೋಜನಾ ನಿರ್ವಹಣಾ ವ್ಯವಸ್ಥೆಯಲ್ಲಿ (ಭೂಸಿರಿ) ಅಪ್‌ಲೋಡ್ ಮಾಡಲಾಗಿಲ್ಲ.

---

[22] ಇದು ನಿರ್ಮಾಣಕಾರ್ಯದಲ್ಲಿ ಬಳಸುವ ಜಲ್ಲಿಕಲ್ಲುಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ನಡೆಸುವ ಪರೀಕ್ಷೆಯಾಗಿದೆ.

[23] ಕಾಂಕ್ರೀಟ್‌ನ ವಿನ್ಯಾಸ ಮಿಶ್ರಣದ ಧಾರಣ ಶಕ್ತಿಯನ್ನು ಖಚಿತಪಡಿಸಿಕೊಳ್ಳಲು ಈ ಪರೀಕ್ಷೆಯನ್ನು ನಡೆಸಲಾಗುತ್ತದೆ

- ಖಾಸಗಿ ಪ್ರಯೋಗಾಲಯಗಳಲ್ಲಿ ಗುಂಪು ನಾಯಕರು/ಉಪಗುತ್ತಿಗೆದಾರರು ನಡೆಸಿದ ಸಾಮಗ್ರಿಗಳ ಗುಣಮಟ್ಟದ ಪರೀಕ್ಷೆಗಳಿಗಾಗಿ ಗುಣಮಟ್ಟ ನಿಯಂತ್ರಣ ಶುಲ್ಕಗಳನ್ನು ಮರುಪಾವತಿಸಲಾಗಿದೆ.
- ಲೆಕ್ಕಪರಿಶೋಧನೆಯು ಪರೀಕ್ಷೆ–ಪರಿಶೀಲಿಸಲಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಡೆಸಲಾದ ಪರೀಕ್ಷೆಗಳ ಪರಿಮಾಣವನ್ನು ಪರಿಶೀಲಿಸಲು ಯಾವುದೇ ಗುಣಮಟ್ಟ ನಿಯಂತ್ರಣ ವಹಿಗಳನ್ನು ನಿರ್ವಹಿಸಲಾಗಿಲ್ಲ ಮತ್ತು ಲೆಕ್ಕಪರಿಶೋಧನೆಗಾಗಿ ಒದಗಿಸಲಿಲ್ಲ.

ಲೆಕ್ಕಪರಿಶೋಧನೆಯು ಇದನ್ನು ಗಮನಕ್ಕೆ ತಂದಾಗ, ಕಾಮಗಾರಿ ವಹಿಸುವ ಸಂಸ್ಥೆಗಳು ನೇಮಿಸಿದ ಮೂರನೇ ವ್ಯಕ್ತಿ ಮೇಲ್ವಿಚಾರಕರ ಸೂಚನೆಗಳನ್ನು ಅನುಸರಿಸಲಾಗುತ್ತಿದೆ, ಇಲ್ಲವಾದಲ್ಲಿ ಕಾಮಗಾರಿ ವಹಿಸುವ ಸಂಸ್ಥೆಗಳು ನಂತರದ ಹಣ ಬಿಡುಗಡೆ ಮಾಡುವುದಿಲ್ಲ ಎಂದು ಉತ್ತರಿಸಲಾಗಿದೆ,

ಮೂರನೇ ವ್ಯಕ್ತಿ ತಪಾಸಣೆಯನ್ನು ಕೆಆರ್ಐಡಿಎಲ್ ಮಾಡಿಸಬೇಕು ಮತ್ತು ಕಾಮಗಾರಿ ವಹಿಸುವ ಸಂಸ್ಥೆಗಳು ಮೂರನೇ ವ್ಯಕ್ತಿ ತಪಾಸಣೆ ಶುಲ್ಕ ಸೇರಿದಂತೆ ಅಂದಾಜು ವೆಚ್ಚದ ಶೇಕಡಾ 50ರಿಂದ 100ರಷ್ಟನ್ನು ಕೆಆರ್ಐಡಿಎಲ್‌ಗೆ ಬಿಡುಗಡೆ ಮಾಡುತ್ತವೆ ಎಂದು ವಹಿಸುವಿಕೆ ಆದೇಶದ ಷರತ್ತು ಸೂಚಿಸುವುದರಿಂದ ಉತ್ತರವು ಸ್ವೀಕಾರಾರ್ಹವಾಗಿಲ್ಲ.

ಕಾಮಗಾರಿ ಬಿಲ್‌ಗಳೊಂದಿಗೆ, ಮೂರನೇ ವ್ಯಕ್ತಿ ಮೇಲ್ವಿಚಾರಣೆ/ಗುಣಮಟ್ಟ ನಿಯಂತ್ರಣ ವರದಿಗಳ ಅನುಪಸ್ಥಿತಿಯಲ್ಲಿ, ವಲಯ ಲೆಕ್ಕಪರಿಶೋಧನಾ ಕಚೇರಿಗಳು/ಎಸ್‌ಇ ಕಚೇರಿಗಳಿಂದ ಗುಣಮಟ್ಟ ನಿಯಂತ್ರಣ ಮಾನದಂಡಗಳನ್ನು ಅನುಸರಿಸಲು ಕೆಆರ್ಐಡಿಎಲ್ ಅಳವಡಿಸಿಕೊಂಡ ಕಾರ್ಯವಿಧಾನವನ್ನು ಖಚಿತಪಡಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

***ಶಿಫಾರಸು 8:*** *ರಾಜ್ಯ ಸರ್ಕಾರವು ಮೂರು ಹಂತದ ಗುಣಮಟ್ಟ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ನಿಷ್ಕ್ರಿಯ ಗುಣಮಟ್ಟ ನಿಯಂತ್ರಣ ವಿಭಾಗಗಳನ್ನು ಕಾರ್ಯೋನ್ಮುಖಗೊಳಿಸಬೇಕು.*

### *5.6.4 ಲೆಕ್ಕಪತ್ರ ನಿರ್ವಹಣೆಗೆ ಸಂಬಂಧಿಸಿದ ಇತರ ಪ್ರಮುಖ ಲೋಪಗಳು:*

- ಕೆಆರ್ಐಡಿಎಲ್ ಸ್ಥಾಯಿ ಆದೇಶಗಳ ಕಂಡಿಕೆ 205, ವಿಭಾಗ 27ರ ಸೂಚನೆಗಳ ಅನುಸಾರ, ಬಿಲ್‌ಗಳಲ್ಲಿ ಕಂಡುಬರುವ ಲೋಪಗಳು ಅಥವಾ ತಪ್ಪುಗಳನ್ನು ಆಕ್ಷೇಪಣಾ ವಹಿಯಲ್ಲಿ ನಮೂದಿಸಬೇಕು. ಇವುಗಳನ್ನು ಸ್ಥಾಯಿ ಆದೇಶಗಳಡಿಯಲ್ಲಿ ಅಗತ್ಯವಿರುವಂತೆ ವಿಭಾಗೀಯ ಲೆಕ್ಕಾಧಿಕಾರಿ/ ಲೆಕ್ಕ ಅಧೀಕ್ಷಕರು ಅನುಸರಿಸಿಲ್ಲ.
- ಉಪ–ವಿಭಾಗಗಳು ನಿಗದಿತ ದಿನಾಂಕದೊಳಗೆ[24] ಮಾಸಿಕ ಲೆಕ್ಕಗಳನ್ನು ಕೇಂದ್ರ ಕಛೇರಿಗೆ ಒದಗಿಸುತ್ತಿರಲಿಲ್ಲ, ಇದು ಮಾಸಿಕ ಲೆಕ್ಕಗಳ ತಯಾರಿಕೆಯ ಮೇಲೆ ಪರಿಣಾಮ ಬೀರುತ್ತಿತ್ತು ಮತ್ತು ವಿಳಂಬವು ಐದು ದಿನಗಳಿಂದ 72 ದಿನಗಳವರೆಗೆ ಇತ್ತು.
- ಲೆಕ್ಕಪರಿಶೋಧನಾ ಅಧಿಕಾರಿಗಳು ಯಾವುದೇ ಲೆಡ್ಜರ್ ಲೆಕ್ಕಗಳನ್ನು ನಿರ್ವಹಿಸಲಿಲ್ಲ ಮತ್ತು ಮಾಸಿಕ ಕ್ರೋಢೀಕೃತ ಲೆಕ್ಕಪತ್ರಗಳನ್ನು ಸಿದ್ಧಪಡಿಸುತ್ತಿರಲಿಲ್ಲ. ಪರಿಣಾಮವಾಗಿ, ತ್ರೈಮಾಸಿಕ, ಅರ್ಧವಾರ್ಷಿಕ ಬ್ಯಾಲೆನ್ಸ್ ಶೀಟ್‌ಗಳು, ಲಾಭ ಮತ್ತು ನಷ್ಟದ ತಖ್ತೆಗಳನ್ನು ತಯಾರಿಸಲಾಗಿಲ್ಲ ಮತ್ತು ಕೆಆರ್ಐಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ/ ನಿರ್ದೇಶಕ ಮಂಡಳಿಗೆ ಸಲ್ಲಿಸಲಾಗಿಲ್ಲ.
- ಕೆಆರ್ಐಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕರು ಅನುಮೋದಿಸಿದಂತಹ ಉಪ– ಹಣಕಾಸು ಅಧಿಕಾರಿ, ಆಂತರಿಕ ಲೆಕ್ಕ ಪರಿಶೋಧಕರು ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರ ತ್ರೈಮಾಸಿಕ

[24] ಲೆಕ್ಕಪರಿಶೋಧನಾ ಅಧಿಕಾರಿಗಳಿಗೆ ಮಾಸಿಕ ಲೆಕ್ಕಪತ್ರಗಳನ್ನು ಸಲ್ಲಿಸಲು ನಿಗದಿತ ದಿನಾಂಕಗಳು ಮುಂದಿನ ತಿಂಗಳ 10 ನೇ ತಾರೀಖಿನಂದು ಖಾತೆಗಳನ್ನು ಸಲ್ಲಿಸಬೇಕು.

ಪ್ರವಾಸ ಕಾರ್ಯಕ್ರಮ ಮತ್ತು ಅವರು ಭೇಟಿ ನೀಡಿದ ಮತ್ತು ಲೆಕ್ಕಪರಿಶೋಧನೆ ಮಾಡಿದ ಉಪ–ವಿಭಾಗಗಳ ವಿವರಗಳು ದಾಖಲೆಯಲ್ಲಿಲ್ಲ.

- ಕಂಡಿಕೆ 163 ಮತ್ತು 164ರಲ್ಲಿ ನಿಗದಿಪಡಿಸಿದಂತೆ, ಕಾಮಗಾರಿ ವಿಭಾಗವು ಕಾಮಗಾರಿ ವೆಚ್ಚ ಮತ್ತು ಮಾಸಿಕ ಪ್ರಗತಿ ವರದಿ ಮತ್ತು ಕಾಮಗಾರಿ ಬಿಲ್‌ಗಳಿಗೆ ಸಂಬಂಧಿಸಿದಂತೆ ಕೈಗೊಂಡ ಪರಿಶೀಲನೆಯ ವಿವರಗಳು ಸಹ ದಾಖಲೆಯಲ್ಲಿ ಇರಲಿಲ್ಲ.

ಕಾಮಗಾರಿ ಬಿಲ್‌ಗಳನ್ನು ವಿಭಾಗೀಯ ಕಚೇರಿಯಲ್ಲಿ ಎಇ ಮತ್ತು ಎಇಇ (ತಾಂತ್ರಿಕ) ಅವರು ಪರಿಶೀಲಿಸುತ್ತಿದ್ದಾರೆ ಮತ್ತು ದೃಢೀಕರಿಸುತ್ತಿದ್ದಾರೆ. ಲೆಕ್ಕಗಳು/ಆಕ್ಷೇಪಣೆಗಳ ಅಂತಿಮಗೊಳಿಸುವಿಕೆಯ ಸಮಯದಲ್ಲಿಯೂ ಪರಿಶೀಲಿಸಲಾಗುತ್ತದೆ ಮತ್ತು ಸಂಬಂಧಿಸಿದ ಉಪ–ವಿಭಾಗಗಳಿಗೆ ರವಾನಿಸಲಾಗುತ್ತದೆ ಮತ್ತು ಮಾಸಿಕ ಲೆಕ್ಕಗಳು/ಪರಿಶೋಧನೆಯಾಗದ ಲಾಭ ಮತ್ತು ನಷ್ಟದ ತಖ್ತೆಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಉತ್ತರಿಸಲಾಗಿದೆ. ಇದಲ್ಲದೆ, ಉಪ ಹಣಕಾಸು ಅಧಿಕಾರಿಯು, ಕಂಪನಿಯು ನೇಮಿಸಿಕೊಂಡಿರುವ ಪೂರ್ವ– ಲೆಕ್ಕಪರಿಶೋಧಕರು ಸಲ್ಲಿಸಿದ ವರದಿಗಳನ್ನು ಪರಿಶೀಲಿಸುತ್ತಾರೆ.

ಎಇ/ಎಇಇ ಮೂಲಕ ಕಾಮಗಾರಿ ಬಿಲ್‌ಗಳ ಪರಿಶೀಲನೆ ಆಗಿರುವ ಪುರಾವೆಯಾಗಿ ಉಪ–ವಿಭಾಗಗಳು ಸಮರ್ಥನೀಯ ದಾಖಲೆಗಳನ್ನು ಒದಗಿಸಲು ವಿಫಲವಾದ ಕಾರಣ ಕೆಆರ್‌ಐಡಿಎಲ್‌ನ ಉತ್ತರಗಳು ಸಮರ್ಥನೀಯವಾಗಿಲ್ಲ. ಸ್ಥಾಯಿ ಆದೇಶಗಳಡಿಯಲ್ಲಿ ಅಗತ್ಯವಿರುವಂತೆ, ಪರಿಹಾರ ಕ್ರಮಗಳನ್ನು ದಾಖಲಿಸಲು ಆಕ್ಷೇಪಣೆ ಪುಸ್ತಕವನ್ನು ನಿರ್ವಹಿಸಲಾಗಿಲ್ಲ ಮತ್ತು ವಿಭಾಗೀಯ ಮಟ್ಟದಲ್ಲಿ ನೇಮಕಗೊಂಡಿದ್ದ ಪೂರ್ವ–ಲೆಕ್ಕಪರಿಶೋಧಕರು ನಿಯತಕಾಲಿಕ ಪರಿಶೀಲನೆಯನ್ನು ನಡೆಸಲಿಲ್ಲವಾಗಿ ಲೋಪಗಳನ್ನು ತಪ್ಪಿಸಲಾಗಲಿಲ್ಲ.

### *5.6.5 ದಾಖಲೆಗಳು/ವಹಿಗಳ ನಿರ್ವಹಣೆಯಲ್ಲಿ ನ್ಯೂನತೆಗಳು*

ಕೆಆರ್‌ಐಡಿಎಲ್ ಸ್ಥಾಯಿ ಆದೇಶಗಳ ವಿಭಾಗ 10 ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ದಾಖಲಾತಿಯನ್ನು ನಿಗದಿಪಡಿಸುತ್ತದೆ. ಇಇ/ಎಇಇ/ಎಇಗಳು ಮತ್ತು ಜೆಇ ಇವರುಗಳು ತಮ್ಮ ಉಪ–ವಿಭಾಗಗಳಲ್ಲಿನ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದ ಲೆಡ್ಜರ್‌ಗಳು, ವಹಿಗಳು ಇತ್ಯಾದಿಗಳ ನಿರ್ವಹಣೆಯಲ್ಲಿ ಗರಿಷ್ಠ ಕಾಳಜಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಲೆಕ್ಕಪರಿಶೋಧನೆಯು ಈ ಕೆಳಗಿನ ನ್ಯೂನತೆಗಳನ್ನು ಗಮನಿಸಿತು:

- ಮಾಪನ ಪುಸ್ತಕಗಳ ಅಸಮರ್ಪಕ ನಿರ್ವಹಣೆ ಮತ್ತು ಅದರಲ್ಲಿನ ನಮೂದುಗಳು.
- ದಾಸ್ತಾನು ವಹಿಗಳಲ್ಲಿ ಮಾಪನ ಪುಸ್ತಕಗಳ ಲೆಕ್ಕ ಇಡದಿರುವುದು.
- ನಾಮಿನಲ್ ಮಸ್ಟರ್ ರೋಲ್‌ಗಳ ನಿರ್ವಹಣೆ ಮಾಡದಿರುವುದು ಮತ್ತು ಅದರ ಸ್ವೀಕೃತಿ ಮತ್ತು ನೀಡಿಕೆ.
- ಉಪ–ವಿಭಾಗಗಳು ದೈನಂದಿನ/ಪಾಕ್ಷಿಕ ಕೂಲಿಕಾರ್ಮಿಕರ ವರದಿಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸದಿರುವುದು.
- ನಗದು ಪುಸ್ತಕಗಳ ಅಸಮರ್ಪಕ ನಿರ್ವಹಣೆ ಮತ್ತು ಶಿಲ್ಕುಗಳ ಸಮನ್ವಯ ಮಾಡದಿರುವುದು ಮತ್ತು ಕಾಮಗಾರಿ ನಗದು ಪುಸ್ತಕದ ನಿರ್ವಹಣೆ ಮಾಡದಿರುವುದು.
- ಕಾಮಗಾರಿಗಳ ವಿವರಗಳು, ಅವುಗಳ ಅಂದಾಜು ಮೌಲ್ಯ, ಕಾರ್ಯಗತಗೊಂಡ ಕಾಮಗಾರಿಯ ವೆಚ್ಚ, ತಿಂಗಳಲ್ಲಿ ಮಾಡಿದ ವಾಸ್ತವಿಕ ವೆಚ್ಚ ಮತ್ತು ಪ್ರತಿ ಕಾಮಗಾರಿಯ ಉಳಿತಾಯದ ವಿವರಗಳನ್ನು ಸೂಚಿಸುವ ಮಾಸಿಕ ಕಾಮಗಾರಿ ಪ್ರಗತಿ ವರದಿಗಳನ್ನು ನಿರ್ವಹಣೆ ಮಾಡದಿರುವುದು.
- ಆಕ್ಷೇಪಣೆ ವಹಿ, ಕಾಮಗಾರಿ ವಹಿ, ಸಂಕ್ಷಿಪ್ತ ಕಾಮಗಾರಿ ವಹಿಗಳನ್ನೂ ಸಹ ನಿರ್ವಹಣೆ ಮಾಡಲಾಗಿಲ್ಲ.

ಪ್ರತ್ಯುತ್ತರವಾಗಿ ಕೆಆರ್‌ಐಡಿಎಲ್ ಲೆಕ್ಕಪರಿಶೋಧನೆಯು ಸೂಚಿಸಿದಂತೆ ದಾಖಲೆಗಳನ್ನು ನಿರ್ವಹಿಸಲು ಅಗತ್ಯ ಸೂಚನೆಗಳನ್ನು ನೀಡಲು ಒಪ್ಪಿಕೊಂಡಿತು ಮತ್ತು ಸಮ್ಮತಿಸಿತು.

***ಶಿಫಾರಸು 9:*** *ಕೆಟಿಪಿಪಿ ಕಾಯ್ದೆಯ ನಿಬಂಧನೆಗಳು, ಲೋಕೋಪಯೋಗಿ ಇಲಾಖೆಯ ಲೆಕ್ಕಪತ್ರ ಸಂಹಿತೆ ಮತ್ತು ಇಲಾಖಾ ಸಂಹಿತೆಗಳ ಪರಿಷ್ಕರಣೆಗಳು ಮತ್ತು ಸಂಬಂಧಿತ ಇತರ ಶಾಸನಬದ್ಧ ನಿಯಮಗಳು ಹಾಗೂ ಖರೀದಿ ಮತ್ತು ಅನುಷ್ಠಾನಕ್ಕೆ ಸಂಬಂಧಿತ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಕೆಆರ್‌ಐಡಿಎಲ್‌ನ ಸ್ಥಾಯಿ ಆದೇಶಗಳ ನಿಯತಕಾಲಿಕ ಪರಿಷ್ಕರಣೆಯನ್ನು ಖಚಿತಪಡಿಸಿಕೊಳ್ಳಬೇಕು. ದರಪಟ್ಟಿ ಮತ್ತು ಚಾಲ್ತಿ ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ದರಗಳ ನಿರಂತರ ನವೀಕರಣಕ್ಕಾಗಿ ಕೆಆರ್‌ಐಡಿಎಲ್ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಬೇಕು.*

## 5.7 ನೇಮಕಾತಿ ಮತ್ತು ತರಬೇತಿ

ಸ್ಥಾಯಿ ಆದೇಶಗಳ ಅನುಸಾರ, ನಿಗಮದಲ್ಲಿ ಕಾಲಕಾಲಕ್ಕೆ ಉದ್ಭವಿಸುವ ಖಾಲಿ ಹುದ್ದೆಗಳನ್ನು ನೇಮಕಾತಿ, ಬಡ್ತಿ ಅಥವಾ ರಾಜ್ಯದಿಂದ ಸೂಕ್ತ ವ್ಯಕ್ತಿಗಳ ನಿಯೋಜನೆಯ ಮೂಲಕ ಭರ್ತಿ ಮಾಡಬೇಕು ಮತ್ತು ಬೆಂಗಳೂರು ಮತ್ತು ಕೇಂದ್ರ ಕಛೇರಿಯು ಸೂಚಿಸಿದಂತಹ ಇತರ ಸ್ಥಳಗಳಲ್ಲಿ ತರಬೇತಿ ಶಿಬಿರಗಳನ್ನು ಏರ್ಪಡಿಸಬೇಕು. ಕೆಳ ಮಟ್ಟದಲ್ಲಿ ವಿವಿಧ ತಾಂತ್ರಿಕ ಸಿಬ್ಬಂದಿಗಾಗಿ ನಡೆಸಿದ ತರಬೇತಿ ಶಿಬಿರಗಳ ವಿವರಗಳು ಮತ್ತು ನೇಮಕಾತಿಯ ವಿವರಗಳನ್ನು ಒದಗಿಸಲಾಗಿಲ್ಲ (ಮಾರ್ಚ್ 2022).

ಕೆಆರ್‌ಐಡಿಎಲ್ ತನ್ನ ಸುತ್ತೋಲೆಯ (ಏಪ್ರಿಲ್ 2018) ಮೂಲಕ ವಲಯ ಕಚೇರಿ, ವಿಭಾಗೀಯ ಕಚೇರಿ ಮತ್ತು ಉಪ–ವಿಭಾಗಳಿಗೆ ತಾಂತ್ರಿಕ ಮತ್ತು ಕಛೇರಿ ಸಿಬ್ಬಂದಿಯ ಅಗತ್ಯವನ್ನು ನಿಗದಿಪಡಿಸಿದೆ. ಸುತ್ತೋಲೆಯ ಪ್ರಕಾರ, ನಿಗದಿಪಡಿಸಿದ ಕಾರ್ಯಗಳನ್ನು ನಿರ್ವಹಿಸಲು ಪ್ರತಿ ಉಪ–ವಿಭಾಗಗಳ ಪರಿಷ್ಕೃತ ಸಿಬ್ಬಂದಿ ಮಾದರಿಯು ಕೆಳಗಿನ ಕೋಷ್ಟಕ 5.2ರಲ್ಲಿ ತೋರಿಸಿದಂತಿತ್ತು:

**ಕೋಷ್ಟಕ 5.2: ಪ್ರತಿ ಉಪ–ವಿಭಾಗಕ್ಕೆ ಸಿಬ್ಬಂದಿ ಮಾದರಿ**

| ಕ್ರಮ ಸಂಖ್ಯೆ | ಪದವೃಂದ | ಅಗತ್ಯತೆ |
|---|---|---|
| 01 | ಎಇ/ಜೆಇ | ಒಂದು – ವಾರ್ಷಿಕ ಪ್ರತಿ ₹5 ಕೋಟಿಯಷ್ಟು ಮೌಲ್ಯದ ಕಾಮಗಾರಿಗಳಿಗೆ |
| 02 | ಮೊದಲೇ ದರ್ಜೆ ಸಹಾಯಕ/ ಎರಡನೇ ದರ್ಜೆ ಸಹಾಯಕ/ ಜಿಎಸ್‌ಟಿ ಕೆಲಸ | ಎರಡು – ಮಾಸಿಕ ಕಾಮಗಾರಿ ಬಿಲ್ಲುಗಳು, ಮಾಸಿಕ ಲೆಕ್ಕಗಳು, ಜಿಎಸ್‌ಟಿ ಒಳಗೊಂಡಂತೆ ತೆರಿಗೆ ದಾಖಲೆ ಸಿದ್ಧಪಡಿಸಲು |
| 03 | ಡಾಟಾ ಎಂಟ್ರಿ ಆಪರೇಟರ್ | ಎರಡು |
| 04 | ಕಾಮಗಾರಿ ಪರಿವೀಕ್ಷರು | ಒಂದು – ಪ್ರತಿ ಎಇ/ಜೆಇಗೆ |

ಆಧಾರ: ಕೆಆರ್‌ಐಡಿಎಲ್ ಸುತ್ತೋಲೆ ದಿನಾಂಕ 5.4.2018

ಸಿಬ್ಬಂದಿ ಅವಶ್ಯಕತೆಯು ಕಾಮಗಾರಿ ವಹಿಸುವ ಸಂಸ್ಥೆಗಳು ವಹಿಸುವ ಕಾಮಗಾರಿಗಳ ಪ್ರಮಾಣವನ್ನು ಆಧರಿಸಿ ವರ್ಷದಿಂದ ವರ್ಷಕ್ಕೆ ಬದಲಾಗುವ ಕಾರಣ, ಮೇಲಿನ ಕೋಷ್ಟಕದಲ್ಲಿನಂತೆ ಕೆಆರ್‌ಐಡಿಎಲ್ ಅಳವಡಿಸಿಕೊಂಡ ಸಿಬ್ಬಂದಿ ಮಾದರಿ ಅಗತ್ಯತೆಯು ದೋಷಪೂರಿತವಾಗಿದೆ.

### *5.7.1 ಉಪ-ವಿಭಾಗಗಳಲ್ಲಿನ ಮುಖ್ಯ ಕಾರ್ಯಗಳನ್ನು ನಿರ್ವಹಿಸಲು ಖಾಯಂ ಸಿಬ್ಬಂದಿ ಕೊರತೆ/ಇಲ್ಲದಿರುವುದು*

ಪ್ರತಿ ವರ್ಷವೂ ಕೆಆರ್‌ಐಡಿಎಲ್‌ಗೆ ವಹಿಸಲಾದ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳನ್ನು ಪರಿಗಣಿಸಿದಾಗ, ವಿಭಾಗ/ಉಪ-ವಿಭಾಗದಲ್ಲಿನ ಆಡಳಿತ ಮತ್ತು ತಾಂತ್ರಿಕ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ಮತ್ತು ಸಮಯೋಚಿತವಾಗಿ ಕಾರ್ಯಗತಗೊಳಿಸಲು ಅರ್ಹ ಸಿಬ್ಬಂದಿಯ ಅಗತ್ಯವಿದೆ. ಆದರೆ, ಕೆಳಗಿನ **ಕೋಷ್ಟಕ 5.3**ರಲ್ಲಿ ವಿವರಿಸಿದಂತೆ ಸಿಬ್ಬಂದಿಗಳ ಗಮನಾರ್ಹ ಕೊರತೆಯಿತ್ತು:

**ಕೋಷ್ಟಕ 5.3: ಫೆಬ್ರವರಿ 2022ರಲ್ಲಿದ್ದಂತೆ, ಕೆಆರ್‌ಐಡಿಎಲ್‌ನಲ್ಲಿ ಮಂಜರಾದ ಹುದ್ದೆಗಳು ಮತ್ತು ಕಾರ್ಯನಿರ್ವಹಿಸುತ್ತಿರುವವರು**

| ಹುದ್ದೆಯ ಹೆಸರು | ಮಂಜೂರಾದ ಹುದ್ದೆ (ಎ) | ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರು (ಬಿ) | ಸಿಬ್ಬಂದಿ ಕೊರತೆ (ಸಿ=ಎ-ಬಿ) |
|---|---|---|---|
| ಎಇ/ಜೆಇ | 196 | 85 | 111 (57) |
| ಮೊದಲೇ ದರ್ಜೆ ಸಹಾಯಕ/ ಎರಡನೇ ದರ್ಜೆ ಸಹಾಯಕ/ ಜಿಎಸ್‌ಟಿ ಕೆಲಸ | 176 | 115 | 61 (35) |
| ಡಾಟಾ ಎಂಟ್ರಿ ಆಪರೇಟರ್ | 30 | 13 | 17 (57) |
| ಕಾಮಗಾರಿ ಪರಿವೀಕ್ಷರು | 223 | 128 | 95 (43) |
| ಎಸ್‌ಇಗಳು (ವಲಯ ಕಛೇರಿ) | 06 | 05 | 1 (20) |
| ಇಇ (ವಿಭಾಗೀಯ ಕಛೇರಿ) | 33 | 28 | 05 (15) |
| ಎಇಇ (ಉಪ-ವಿಭಾಗ ಕಛೇರಿ) | 74 | 68 | 06 (8) |
| ಒಟ್ಟು | 738 | 442 | 296 (40) |

ಆಧಾರ: ಕೆಆರ್‌ಐಡಿಎಲ್ ಒದಗಿಸಿದ ಸಿಬ್ಬಂದಿ ತಖ್ತೆ.
*ಕಂಸದಲ್ಲಿ ಶೇಕಡಾವಾರು ಸೂಚಿಸಲಾಗಿದೆ.

ಮಂಜೂರಾದ 738 ಹುದ್ದೆಗಳಿಗೆ ಪ್ರತಿಯಾಗಿ ಕೇವಲ 442 ಮಂದಿ (ಶೇಕಡ 60) ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು 296 ಸಿಬ್ಬಂದಿ ಕೊರತೆಯಿದೆ (ಶೇಕಡ 40) ಎಂಬುದನ್ನು **ಕೋಷ್ಟಕ 5.3**ರಲ್ಲಿ ನೋಡಬಹುದಾಗಿದೆ.

ಅಗತ್ಯ ಮಾನವಶಕ್ತಿಯ ಅನುಪಸ್ಥಿತಿಯಲ್ಲಿ, ಲೆಕ್ಕಪರಿಶೋಧನೆಯು ವರದಿಯ ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿದಂತೆ ಅಂದಾಜುಪಟ್ಟಿಗಳ ತಯಾರಿಕೆ, ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬ, ಅಳತೆಗಳ ದಾಖಲಾತಿಗಳಂತಹ ತಾಂತ್ರಿಕ ಮತ್ತು ಲೆಕ್ಕಪತ್ರ ಕಾರ್ಯಗಳನ್ನು ನಿರ್ವಹಿಸುವಲ್ಲಿ ಲೆಕ್ಕಪರಿಶೋಧನೆಯು ನ್ಯೂನತೆಗಳನ್ನು ಗಮನಿಸಿದೆ.

ಲೆಕ್ಕಪರಿಶೋಧನೆಯು ಮೇಲಿನ ಅಂಶಗಳನ್ನು ಗಮನಕ್ಕೆ ತಂದಾಗ, ರಾಜ್ಯ ಸರ್ಕಾರವು ಕೆಆರ್‌ಐಡಿಎಲ್‌ನಲ್ಲಿ ಖಾಯಂ ಸಿಬ್ಬಂದಿಯ ತೀವ್ರ ಕೊರತೆಯಿದೆ ಎಂದು ಒಪ್ಪಿಕೊಂಡಿತು. ಇದರಿಂದಾಗಿ ವಿವಿಧ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಹೊರಗುತ್ತಿಗೆ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ ಮತ್ತು ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ತಾಂತ್ರಿಕ ಮತ್ತು ಲೆಕ್ಕಪತ್ರ ವಿಭಾಗವನ್ನು ಬಲಪಡಿಸಲು ಪದವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಉತ್ತರಿಸಿತು.

ಹೊರಗುತ್ತಿಗೆ ಸಿಬ್ಬಂದಿಗಳು ಲೆಕ್ಕಪತ್ರ ನಿರ್ವಹಣೆ, ಅಳತೆ ದಾಖಲಿಸುವುದು, ಮತ್ತು ಕೂಲಿ ಮತ್ತು ಸಾಮಗ್ರಿಗಳ ಖರೀದಿಗಾಗಿ ಗಮನಾರ್ಹ ಮೊತ್ತವನ್ನು ಪಾವತಿಯಾಗುತ್ತಿರುವ ಗುಂಪು ನಾಯಕರುಗಳ

ರೂಪದಲ್ಲಿ ಮುಖ್ಯ ಕಾರ್ಯಗಳನ್ನು ನಿರ್ವಹಿಸುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗಾಗಿ, ಪ್ರಮುಖ ಕಾರ್ಯನಿರ್ವಹಣೆಗಳಲ್ಲಿನ ಲೋಪಗಳ ಮೇಲೆ ಹೊಣೆಗಾರಿಕೆ ಹೊರಿಸಲು ಸಾಧ್ಯವಾಗಲಿಲ್ಲ. ಕಂಪನಿಯು ವಿವಿಧ ಪದವೃಂದಗಳಲ್ಲಿ 76 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಂಡಿದೆ ಎಂದು ಉತ್ತರಿಸಲಾಯಿತು. ಅಲ್ಲದೆ, ಆಂತರಿಕ ತರಬೇತಿ ನೀಡಲೂ ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿದೆ.

***ಶಿಫಾರಸು–10:*** *ವಹಿಸಲಾದ ಕಾಮಗಾರಿಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಲಭ್ಯವಿರುವ ಮಾನವಶಕ್ತಿಯ ಆಧಾರದ ಮೇಲೆ ಕೆಆರ್ಐಡಿಎಲ್ ಕಾಮಗಾರಿಗಳನ್ನು ಸ್ವೀಕರಿಸುವುದನ್ನು ಅಥವಾ ನಿರಾಕರಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.*

**ಬೆಂಗಳೂರು** **(ಶಾಂತಪ್ರಿಯ ಎಸ್)**

**ದಿನಾಂಕ** **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–I)**

**ಕರ್ನಾಟಕ**

**ಮೇಲುರುಜು ಮಾಡಲಾಗಿದೆ**

**ನವದೆಹಲಿ** **(ಗಿರೀಶ್ ಚಂದ್ರ ಮುರ್ಮು)**

**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು



**ಅನುಬಂಧ–I**

**(ಉಲ್ಲೇಖ: ಕಂಡಿಕೆ 1.5, ಪುಟ 4)**

**ಆಯ್ಕೆ ಮಾಡಲಾದ ಉಪ–ವಿಭಾಗಗಳ ಪಟ್ಟಿ**

| ಕ್ರಮ ಸಂಖ್ಯೆ | ವಿಭಾಗದ ಹೆಸರು | ಕ್ರಮ ಸಂಖ್ಯೆ | ವಲಯದ ಹೆಸರು | ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು |
|---|---|---|---|---|---|
| 1 | ಬಿಬಿಎಮ್‌ಪಿ | 1 | ಬಿಬಿಎಮ್‌ಪಿ ವಿಭಾಗ–1 | 1 | ಪೂರ್ವ–II |
| | | 2 | ಬಿಬಿಎಮ್‌ಪಿ ವಿಭಾಗ–4 | 2 | ದಾಸರಹಳ್ಳಿ |
| | | | | 3 | ರಾಜರಾಜೇಶ್ವರಿ ನಗರ |
| | | 3 | ಬಿಬಿಎಮ್‌ಪಿ ವಿಭಾಗ–5 | 4 | ಪೂರ್ವ–I |
| 2 | ಬೆಂಗಳೂರು | 4 | ಬಿಎಮ್‌ಆರ್‌ಸಿಎಲ್ | 5 | ಬಿಎಮ್‌ಆರ್‌ಸಿಎಲ್ |
| | | 5 | ಚಿಕ್ಕಬಳ್ಳಾಪುರ | 6 | ಚಿಕ್ಕಬಳ್ಳಾಪುರ |
| | | 6 | ಕೋಲಾರ | 7 | ಕೋಲಾರ |
| | | 7 | ರಾಮನಗರ | 8 | ರಾಮನಗರ |
| 3 | ಬೆಳಗಾವಿ | 8 | ವಿಜಯಪುರ | 9 | ಬಸವನಬಾಗೇವಾಡಿ |
| | | | | 10 | ವಿಜಯಪುರ |
| | | 9 | ಗದಗ | 11 | ಗದಗ |
| | | 10 | ಕಾರವಾರ | 12 | ಶಿರಸಿ |
| 4 | ಸೆಂಟ್ರಲ್ | 11 | ದಾವಣಗೆರೆ–1 | 13 | ದಾವಣಗೆರೆ |
| | | 12 | ಹೂವಿನಹಡಗಲಿ | 14 | ಹೂವಿನಹಡಗಲಿ |
| | | | | 15 | ಕೂಡ್ಲಿಗಿ |
| | | 13 | ಶಿವಮೊಗ್ಗ | 16 | ಶಿವಮೊಗ್ಗ |
| 5 | ಕಲಬುರಗಿ | 14 | ಕಲಬುರಗಿ–1 | 17 | ಕಲಬುರಗಿ–1 |
| | | 15 | ಕಲಬುರಗಿ–2 | 18 | ಕಲಬುರಗಿ–2 |
| | | 16 | ಕೊಪ್ಪಳ | 19 | ಕೊಪ್ಪಳ |
| | | | | 20 | ಕೊಪ್ಪಳ ನೆಲೋಗಿಪುರ |
| 6 | ಮೈಸೂರು | 17 | ಚಾಮರಾಜನಗರ | 21 | ಕೊಳ್ಳೇಗಾಲ |
| | | 18 | ಮೈಸೂರು | 22 | ಮೈಸೂರು |
| | | 19 | ಮಂಗಳೂರು | 23 | ಮಂಗಳೂರು |
| | | 20 | ಉಡುಪಿ | 24 | ಉಡುಪಿ |

## ಅನುಬಂಧ II

(ಉಲ್ಲೇಖ: ಕಂಡಿಕೆ 1.5, ಪುಟ 4)

### ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳು

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಕಾಮಗಾರಿಗಳ ಸಂಖ್ಯೆ | ಪರೀಕ್ಷಾ–ತನಿಖೆ ನಡೆಸಿದ ಒಟ್ಟು ಕಾಮಗಾರಿಗಳ ಸಂಖ್ಯೆ |
|---|---|---|---|
| 1 | ಬಸವನಬಾಗೇವಾಡಿ | 1,636 | 54 |
| 2 | ಬಿಎಮ್ಆರ್‌ಸಿಎಲ್ | 69 | 18 |
| 3 | ಚಿಕ್ಕಬಳ್ಳಾಪುರ | 1,161 | 57 |
| 4 | ದಾಸರಹಳ್ಳಿ | 5,074 | 129 |
| 5 | ದಾವಣಗೆರೆ | 843 | 52 |
| 6 | ಪೂರ್ವ–I | 3,186 | 93 |
| 7 | ಪೂರ್ವ–II | 1,024 | 80 |
| 8 | ಗದಗ | 1,416 | 60 |
| 9 | ಹೂವಿನಹಡಗಲಿ | 373 | 26 |
| 10 | ಕಲಬುರಗಿ–I | 1,363 | 48 |
| 11 | ಕಲಬುರಗಿ–II | 1,266 | 65 |
| 12 | ಕೋಲಾರ | 2,113 | 68 |
| 13 | ಕೊಳ್ಳೇಗಾಲ | 608 | 42 |
| 14 | ಕೊಪ್ಪಳ | 645 | 30 |
| 15 | ಕೊಪ್ಪಳ ನೆಲೋಗಿಪುರ | 1,649 | 52 |
| 16 | ಕೂಡ್ಲಿಗಿ | 548 | 28 |
| 17 | ಮಂಗಳೂರು | 2,965 | 44 |
| 18 | ಮೈಸೂರು | 862 | 38 |
| 19 | ರಾಜರಾಜೇಶ್ವರಿನಗರ | 1,928 | 126 |
| 20 | ರಾಮನಗರ | 1,159 | 78 |
| 21 | ಶಿವಮೊಗ್ಗ | 2,602 | 56 |
| 22 | ಶಿರಸಿ | 531 | 39 |
| 23 | ಉಡುಪಿ | 3,015 | 52 |
| 24 | ವಿಜಯಪುರ | 1,870 | 44 |
| | **ಒಟ್ಟು** | **37,906** | **1,379** |

**ಅನುಬಂಧ III**

**(ಉಲ್ಲೇಖ: ಕಂಡಿಕೆ 2.1.6, ಪುಟ 9)**

**ಅಂದಾಜು ವೆಚ್ಚಕ್ಕಿಂತ ಅಧಿಕ ವೆಚ್ಚ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚಕ್ಕಿಂತ ಅಧಿಕ ವೆಚ್ಚವನ್ನು ಭರಿಸಿದ ಕಾಮಗಾರಿಗಳ ಸಂಖ್ಯೆ | ಒಟ್ಟು ಅಂದಾಜು ವೆಚ್ಚ | ಭರಿಸಿದ ವೆಚ್ಚ | ಭರಿಸಿದ ಅಧಿಕ ವೆಚ್ಚ |
|---|---|---|---|---|---|---|
| 1 | ದಾವಣಗೆರೆ | 52 | 8 | 20.97 | 24.44 | 3.48 |
| 2 | ಗದಗ | 60 | 1 | 0.43 | 0.45 | 0.01 |
| 3 | ಕೊಪ್ಪಳ ನೆಲೋಗಿಪುರ | 52 | 1 | 0.60 | 0.61 | 0.01 |
| 4 | ಮೈಸೂರು | 38 | 1 | 0.420 | 0.421 | 0.001 |
| 5 | ರಾಮನಗರ | 78 | 1 | 0.045 | 0.047 | 0.002 |
| 6 | ಶಿವಮೊಗ್ಗ | 56 | 3 | 4.78 | 5.10 | 0.32 |
| | **ಒಟ್ಟು** | **336** | **15** | **27.24** | **31.06** | **3.82** |

## ಅನುಬಂಧ–IV

**(ಉಲ್ಲೇಖ: ಕಂಡಿಕೆ 2.2, ಪುಟ 9)**

### ರಾಜಧನ ವಸೂಲು ಮಾಡದಿರುವುದು/ಕಡಿಮೆ ವಸೂಲಾತಿ ಮಾಡಿರುವುದು

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಸಂಖ್ಯೆ | ರಾಜಧನದ ವಸೂಲು ಮಾಡದಿರುವುದು/ಕಡಿಮೆ ವಸೂಲಾತಿಯ ಬಗ್ಗೆ ವಿಮರ್ಶೆ ಮಾಡಿರುವ ಕಾಮಗಾರಿಗಳ ಸಂಖ್ಯೆ | ರಾಜಧನದ ವಸೂಲಿ ಮಾಡದಿರುವುದು/ಕಡಿಮೆ ವಸೂಲಾತಿ |
|---|---|---|---|---|
| 1 | ಬಸವನಬಾಗೇವಾಡಿ | 54 | 25 | 0.79 |
| 2 | ಚಿಕ್ಕಬಳ್ಳಾಪುರ | 57 | 11 | 0.06 |
| 3 | ದಾಸರಹಳ್ಳಿ | 129 | 9 | 0.09 |
| 4 | ದಾವಣಗೆರೆ | 52 | 10 | 0.31 |
| 5 | ಪೂರ್ವ–I | 93 | 21 | 1.29 |
| 6 | ಪೂರ್ವ–II | 80 | 10 | 0.15 |
| 7 | ಗದಗ | 60 | 3 | 0.04 |
| 8 | ಹೂವಿನಹಡಗಲಿ | 26 | 22 | 0.10 |
| 9 | ಕಲಬುರಗಿ–I | 48 | 13 | 0.22 |
| 10 | ಕಲಬುರಗಿ–II | 65 | 4 | 0.03 |
| 11 | ಕೋಲಾರ | 68 | 19 | 0.20 |
| 12 | ಕೊಳ್ಳೇಗಾಲ | 42 | 11 | 0.04 |
| 13 | ಕೊಪ್ಪಳ | 30 | 27 | 0.30 |
| 14 | ಕೊಪ್ಪಳ ನೆಲೋಗಿಪುರ | 52 | 3 | 0.04 |
| 15 | ಕೂಡ್ಲಿಗಿ | 28 | 12 | 0.20 |
| 16 | ಮಂಗಳೂರು | 44 | 20 | 0.16 |
| 17 | ಮೈಸೂರು | 38 | 5 | 0.06 |
| 18 | ರಾಮನಗರ | 78 | 6 | 0.03 |
| 19 | ಶಿವಮೊಗ್ಗ | 56 | 8 | 0.06 |
| 20 | ಶಿರಸಿ | 39 | 4 | 0.03 |
| 21 | ಉಡುಪಿ | 52 | 33 | 0.40 |
| 22 | ವಿಜಯಪುರ | 44 | 11 | 0.24 |
| **ಒಟ್ಟು** | | **1,235** | **287** | **4.82** |

**ಅನುಬಂಧ–V**

**(ಉಲ್ಲೇಖ: ಕಂಡಿಕೆ 3.2.1.1, ಪುಟ 15)**

## ಎರಡು ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಕಾಮಗಾರಿಗಳು

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಅನರ್ಹ ಕಾಮಗಾರಿಗಳು | | | |
|---|---|---|---|---|---|
| | | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ಕನಿಷ್ಠ | ಕಾಮಗಾರಿಗಳ ಸಂಖ್ಯೆ |
| 1 | ಬಸವನಬಾಗೇವಾಡಿ | 1 | 3.35 | 3.35 | 3.35 |
| 2 | ಬಿಎಮ್‌ಆರ್‌ಸಿಎಲ್ | 9 | 62.92 | 2.60 | 13.90 |
| 3 | ಚಿಕ್ಕಬಳ್ಳಾಪುರ | 3 | 8.99 | 2.80 | 3.26 |
| 4 | ದಾಸರಹಳ್ಳಿ | 1 | 2.64 | 2.64 | 2.64 |
| 5 | ದಾವಣಗೆರೆ | 13 | 54.47 | 2.39 | 9.07 |
| 6 | ಪೂರ್ವ–I | 8 | 113.65 | 2.51 | 56.50 |
| 7 | ಗದಗ | 2 | 10.42 | 3.00 | 7.42 |
| 8 | ಕಲಬುರಗಿ–I | 8 | 28.63 | 2.58 | 7.05 |
| 9 | ಕಲಬುರಗಿ–II | 1 | 3.29 | 3.29 | 3.29 |
| 10 | ಕೊಪ್ಪಳ ನೆಲೋಗಿಪುರ | 4 | 10.73 | 2.16 | 3.26 |
| 11 | ಕೂಡ್ಲಿಗಿ | 2 | 6.53 | 3.27 | 3.27 |
| 12 | ಮಂಗಳೂರು | 2 | 5.50 | 2.50 | 3.00 |
| 13 | ಮೈಸೂರು | 3 | 7.38 | 2.18 | 3.00 |
| 14 | ರಾಜರಾಜೇಶ್ವರಿ ನಗರ | 32 | 237.58 | 2.04 | 47.04 |
| 15 | ರಾಮನಗರ | 3 | 9.10 | 2.57 | 3.27 |
| 16 | ಶಿವಮೊಗ್ಗ | 1 | 2.30 | 2.30 | 2.30 |
| 17 | ಉಡುಪಿ | 1 | 5.88 | 5.88 | 5.88 |
| 18 | ವಿಜಯಪುರ | 5 | 20.15 | 3.00 | 6.81 |
| ಒಟ್ಟು | | 99 | 593.51 | | |

**ಅನುಬಂಧ–VI**

**(ಉಲ್ಲೇಖ: ಕಂಡಿಕೆ 3.2.1.2, ಪುಟ 16)**

**ಕಾಮಗಾರಿ ವಹಿಸುವ ಸಂಸ್ಥೆಗಳು ಎರಡು ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಅಂದಾಜುಪಟ್ಟಿಗಳನ್ನು ವಿಭಜಿಸಿರುವುದು**

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ವಹಿಸುವುದರ ಮೊದಲು ಕಾಮಗಾರಿ ವಹಿಸುವ ಸಂಸ್ಥೆಗಳು ವಿಭಜಿಸಿರುವ ಎರಡು ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಕಾಮಗಾರಿಗಳ ಸಂಖ್ಯೆ | ವಿಭಜಿಸಿದ ನಂತರ ಕಾಮಗಾರಿಗಳ ಸಂಖ್ಯೆ | ಮೌಲ್ಯ (₹ ಕೋಟಿಗಳಲ್ಲಿ) |
|---|---|---|---|---|
| 1 | ಕಲಬುರಗಿ–I | 6 | 18 | 28.07 |
| 2 | ಕೂಡ್ಲಿಗಿ | 3 | 12 | 12.35 |
| 3 | ಮಂಗಳೂರು | 1 | 13 | 3.52 |
| 4 | ರಾಜರಾಜೇಶ್ವರಿ ನಗರ | 1 | 40 | 44.51 |
| 5 | ವಿಜಯಪುರ | 1 | 2 | 3.98 |
| | ಒಟ್ಟು | 12 | 85 | 92.43 |

## ಅನುಬಂಧ–VII

**(ಉಲ್ಲೇಖ: ಕಂಡಿಕೆ 3.2.1.3, ಪುಟ 16)**

### ಅನರ್ಹ ಕಾಮಗಾರಿಗಳನ್ನು ವಹಿಸಿರುವುದು

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಕಾಮಗಾರಿ ಕೋಡ್ | ಕಾಮಗಾರಿಯ ಹೆಸರು | ಅಂದಾಜು ವೆಚ್ಚ | ಕೊನೆಯ ಮಾಸಿಕ ಕಾಮಗಾರಿ ಬಿಲ್‌ನ ಪ್ರಕಾರ ಭರಿಸಿದ ವೆಚ್ಚ |
|---|---|---|---|---|---|
| 1 | ದಾವಣಗೆರೆ | 78293 | ಹೈಟೆಕ್ ಆಸ್ಪತ್ರೆ ರಸ್ತೆಯ ಹೆಚ್‌ಟಿ/ಎಲ್‌ಟಿ ಲೈನ್ ಮತ್ತು ಟ್ರಾನ್ಸ್‌ಫಾರ್ಮರ್ ಸೆಂಟರ್ ಅನ್ನು ನಿಟುವಳ್ಳಿ ತರಕಾರಿ ಮಾರುಕಟ್ಟೆಯಿಂದ ಬೈಪಾಸ್ ರಸ್ತೆಗೆ ಬದಲಾಯಿಸುವುದು. | 0.30 | 0.13 |
| 2 | ಪೂರ್ವ–I | 141968 | 10–4–2018 ರಂದು ಬೆಳ್ಳಹಳ್ಳಿ ಗ್ರಾಮದ ಸರ್ವೆ ನಂಬರ್ 13ರ (310–20–000046) ಕಸ ಸುರಿಯುವ ವೈಜ್ಞಾನಿಕ ಕ್ವಾರಿಯಲ್ಲಿ ಆಕಸ್ಮಿಕ ಬೆಂಕಿ ಅನಾಹುತವನ್ನು ನಂದಿಸಿರುವುದು | 0.70 | 0.70 |
| 3 | | 141965 | ಮಿಟ್ಟಗಾನಹಳ್ಳಿಯಲ್ಲಿಯ ಸರ್ವೆ ನಂಬರ್ 2ರಲ್ಲಿ (310–20–000048) ತುರ್ತಾಗಿ ಬೆಂಕಿ ನಂದಿಸಿರುವುದು ಮತ್ತು ಕಸ ಸುರಿಯುವ ವೈಜ್ಞಾನಿಕ ಕ್ವಾರಿ ಸ್ಥಳದಲ್ಲಿ ತಡೆಗಳನ್ನು ರೂಪಿಸಲು ಮಣ್ಣಿನ ಕಟ್ಟೆ ರಚನೆ | 1.98 | 1.98 |
| 4 | | 141966 | ಬೆಳ್ಳಹಳ್ಳಿ ಗ್ರಾಮದ ಸರ್ವೆ ನಂಬರ್ 13ರಲ್ಲಿ (310–20–000047) 13–3–19 ರಂದು ಕಸ ಸುರಿಯುವ ವೈಜ್ಞಾನಿಕ ಕ್ವಾರಿಯಲ್ಲಿ ಆಕಸ್ಮಿಕ ಬೆಂಕಿ ಅನಾಹುತವನ್ನು ನಂದಿಸಿರುವುದು | 1.93 | 1.93 |
| 5 | | No work code | ಗಾಂಧಿಜಯಂತಿ ಪುರಸ್ಕಾರ ಸಮಾರಂಭ | 5.25 | 8.89 |
| 6 | ಗದಗ | 99980 | ಗದಗ ಜಿಲ್ಲೆಯಲ್ಲಿ ಸಾಧನಾ ಸಮಾವೇಶ ಕಾರ್ಯಕ್ರಮಕ್ಕೆ ವ್ಯವಸ್ಥೆ | 0.49 | 0.43 |
| 7 | | 90285 | ರಾಷ್ಟ್ರದ ಉಪಾಧ್ಯಕ್ಷರಿಂದ ಗದಗ ಜಿಲ್ಲೆ ನರಗುಂದ ತಾಲ್ಲೂಕನ್ನು ಬಯಲು ಶೌಚ ನಿರ್ಮೂಲನೆ ಘೋಷಣೆ ಕಾರ್ಯಕ್ರಮಕ್ಕೆ ಸಂಬಂಧಿಸಿದ ವೆಚ್ಚ | 0.41 | 0.41 |
| 8 | | 99977 | ಗದಗ ಜಿಲ್ಲೆಯಲ್ಲಿ ಸಾಧನಾ ಸಮಾವೇಶ ಕಾರ್ಯಕ್ರಮಕ್ಕೆ ವ್ಯವಸ್ಥೆ | 0.41 | 0.29 |
| 9 | | 94789 | ಗದಗ ಉತ್ಸವ ಸರಸ ಮೇಳ ಕಾರ್ಯಕ್ರಮ | 0.40 | 0.34 |
| 10 | ಕಲಬುರಗಿ–I | 70861 | ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಕುಂದನೂರು ಗ್ರಾಮದ ಒಟ್ಟು 3.00 ಎಕರೆ ವಿಸ್ತೀರ್ಣದಲ್ಲಿ ಮರಳು ಬ್ಲಾಕ್ ಸಂಖ್ಯೆ 2ರಲ್ಲಿ ಯಂತ್ರ ಬಳಸದೆ ಮರಳನ್ನು ತೆಗೆಯುವುದು | 0.27 | 0.12 |
| 11 | ಕಲಬುರಗಿ–II | No work code | ಯುಪಿಎಸ್ ಮತ್ತು ವಿದ್ಯುತ್ ಘಟಕವನ್ನು ಒದಗಿಸುವುದು ಮತ್ತು ಪೂರೈಸುವುದು | 0.23 | 0.23 |
| 12 | ಕೊಪ್ಪಳ ನೆಲೋಗಿಪುರ | 125024 | ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಆನೆಗುಂದಿ ಗ್ರಾಮದಲ್ಲಿ ಆನೆಗುಂದಿ ಉತ್ಸವದ ಪ್ರಮುಖ ಸ್ಥಳಗಳಲ್ಲಿ ಷಾಮಿಯಾನ/ವೇದಿಕೆ, ಧ್ವನಿವರ್ಧಕ, ಮೈಕ್ ಸೆಟ್, ಬ್ಯಾರಿಕೇಡ್, ಆಸನ ವ್ಯವಸ್ಥೆ, ಜನರೇಟರ್ ಅಳವಡಿಕೆ | 0.65 | 0.65 |
| 13 | | 125022 | ಕೊಪ್ಪಳ ಪಟ್ಟಣದಲ್ಲಿ ಸೇನಾ ನೇಮಕಾತಿ ಶಿಬಿರಕ್ಕಾಗಿ ಷಾಮಿಯಾನ ಮತ್ತು ಬ್ಯಾರಿಕೇಡ್ ಅಳವಡಿಕೆ | 0.10 | 0.10 |
| 14 | | 143002 | ಕೊಪ್ಪಳ ಪಟ್ಟಣದಲ್ಲಿ ಸೇನಾ ನೇಮಕಾತಿ ಶಿಬಿರಕ್ಕಾಗಿ ಷಾಮಿಯಾನ ಮತ್ತು ಬ್ಯಾರಿಕೇಡ್ ಅಳವಡಿಕೆ | 0.08 | 0.08 |
| | ಒಟ್ಟು | | | **13.21** | **16.28** |

## ಅನುಬಂಧ–VIII

**(ಉಲ್ಲೇಖ: ಕಂಡಿಕೆ 3.3.1, ಪುಟ 17)**

### ಎರಡು ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಅಂದಾಜುಪಟ್ಟಿಗಳನ್ನು ಕೆಆರ್‌ಐಡಿಎಲ್ ವಿಭಜಿಸಿರುವುದು

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಕೆಆರ್‌ಐಡಿಎಲ್ ವಿಭಜಸಿರುವ ಎರಡು ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಕಾಮಗಾರಿಗಳ ಸಂಖ್ಯೆ | ವಿಭಜಿಸಿದ ನಂತರ ಕಾಮಗಾರಿಗಳ ಸಂಖ್ಯೆ | ಮೌಲ್ಯ (₹ ಕೋಟಿಗಳಲ್ಲಿ) |
|---|---|---|---|---|
| 1 | ಚಿಕ್ಕಬಳ್ಳಾಪುರ | 2 | 4 | 6.19 |
| 2 | ಗದಗ | 2 | 8 | 2.33 |
| 3 | ಹೂವಿನಹಡಗಲಿ | 1 | 4 | 3.00 |
| 4 | ಕೋಲಾರ | 1 | 2 | 2.10 |
| 5 | ಕೊಪ್ಪಳ ನೆಲೋಗಿಪುರ | 3 | 6 | 7.47 |
| 6 | ರಾಮನಗರ | 1 | 2 | 2.57 |
| 7 | ಉಡುಪಿ | 2 | 4 | 7.20 |
| | **ಒಟ್ಟು** | **12** | **30** | **30.86** |

## ಅನುಬಂಧ–IX

**(ಉಲ್ಲೇಖ: ಕಂಡಿಕೆ 3.3.3.2, ಪುಟ 20)**

### ಪಿಆರ್‌ಇಡಿ ದರಪಟ್ಟಿಯ ಬದಲು ಲೋಕೋಪಯೋಗಿ ಇಲಾಖೆಯ ದರಪಟ್ಟಿ ಅಳವಡಿಸಿಕೊಂಡಿದ್ದರಿಂದ ಉಂಟಾದ ವೆಚ್ಚದ ವ್ಯತ್ಯಾಸ

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ವೆಚ್ಚ (₹ ಕೋಟಿಗಳಲ್ಲಿ) | ರಸ್ತೆಯ ಉದ್ದ (ಮೀಟರ್‌ಗಳಲ್ಲಿ) | ಅಧಿಕ (₹ ಕೋಟಿಗಳಲ್ಲಿ) |
|---|---|---|---|---|
| 1 | ಅಗರ ಗ್ರಾಮ, ಅಗರ ಗ್ರಾಮಪಂಚಾಯತಿ | 1.00 | 898.0 | 0.1133 |
| 2 | ರಾಮಸಂದ್ರ ಕನ್ನಿಕಾ ಬಡಾವಣೆ | 1.00 | 868.2 | 0.1132 |
| 3 | ರಾಮಸಂದ್ರ ಗಾಯತ್ರಿ ಬಡಾವಣೆ | 1.00 | 868.2 | 0.1132 |
| 4 | ಪುನುಗಮಾರನಹಳ್ಳಿಯಿಂದ ರಾಮೋಹಳ್ಳಿ ಮರಗೊಂಡನಹಳ್ಳಿ | 1.00 | 898.0 | 0.1133 |
| 5 | ಮಂಗನಹಳ್ಳಿ ಉದ್ಯಾನಗರ, ಕೊಡಿಗೇಹಳ್ಳಿ ಗ್ರಾಮ | 1.00 | 898.0 | 0.1133 |
| 6 | ಕನ್ನಹಳ್ಳಿ ಗ್ರಾಮ, ಕೊಡಿಗೇಹಳ್ಳಿ ಗ್ರಾಮಪಂಚಾಯಿತಿ | 1.00 | 868.0 | 0.1132 |
| 7 | ನೆಟ್ಟಿಗೆರೆ ಗೇಟ್‌ನಿಂದ ಎಪಿಸಿಒ ಫ್ಯಾಕ್ಟರಿ ರಸ್ತೆ, ನೆಲಗುಲಿ ಗ್ರಾಮಪಂಚಾಯಿತಿ | 1.00 | 868.2 | 0.1132 |
| 8 | ಕನಕಪುರ ಮುಖ್ಯರಸ್ತೆಯಿಂದ ವಡೇರಹಳ್ಳಿ ಅಗರ ಗ್ರಾಮಪಂಚಾಯಿತಿ | 1.00 | 868.2 | 0.1132 |
| 9 | ದಿಣ್ಣೆಯಪಾಳ್ಯದಿಂದ ಗೋಶಾಲೆ ರಸ್ತೆ, ಕಗ್ಗಲೀಪುರ ಗ್ರಾಮಪಂಚಾಯಿತಿ | 1.00 | 898.0 | 0.1133 |
| **ಒಟ್ಟು** | | **9.00** | **7,932.8** | **1.02** |

## ಅನುಬಂಧ X

**(ಉಲ್ಲೇಖ: ಕಂಡಿಕೆ 3.4.2, ಪುಟ 22)**

### ಆಡಳಿತಾತ್ಮಕ ಅನುಮೋದನೆಗೆ ಮೊದಲೇ ಹಣ ಬಿಡುಗಡೆ

| ಕ್ರಮ ಸಂಖ್ಯೆ | ಉಪ-ವಿಭಾಗದ ಹೆಸರು | ವಹಿಸುವ ಸಂಸ್ಥೆಗಳಿಂದ ಆಡಳಿತಾತ್ಮಕ ಅನುಮೋದನೆಗೆ ಮೊದಲೇ ಹಣ ಬಿಡುಗಡೆ ಮಾಡಿದ ಕಾಮಗಾರಿಗಳ ಸಂಖ್ಯೆ | | | | | ಕನಿಷ್ಠ ತಿಂಗಳುಗಳು | ಗರಿಷ್ಠ ತಿಂಗಳುಗಳು | ಆಡಳಿತಾತ್ಮಕ ಅನುಮೋದನೆಗೆ ಮೊದಲೇ ಬಿಡುಗಡೆ ಮಾಡಿದ ಒಟ್ಟು ಹಣ (₹ ಕೋಟಿಗಳಲ್ಲಿ) |
|---|---|---|---|---|---|---|---|---|---|
| | | 1ರಿಂದ 3 ತಿಂಗಳು | 4ರಿಂದ 6 ತಿಂಗಳು | 7ರಿಂದ 12 ತಿಂಗಳು | 12 ತಿಂಗಳಿಗೂ ಅಧಿಕ | ಒಟ್ಟು | | | |
| 1 | ಬಸವನಬಾಗೇವಾಡಿ | 3 | 8 | 2 | 1 | 14 | 1 | 23 | 4.28 |
| 2 | ಚಿಕ್ಕಬಳ್ಳಾಪುರ | 4 | 1 | 5 | 4 | 14 | 1 | 24 | 6.79 |
| 3 | ದಾವಣಗೆರೆ | 0 | 1 | 0 | 0 | 1 | 5 | 5 | 0.41 |
| 4 | ಗದಗ | 8 | 2 | 0 | 2 | 12 | 1 | 49 | 8.80 |
| 5 | ಹೂವಿನಹಡಗಲಿ | 8 | 0 | 0 | 0 | 8 | 1 | 3 | 3.15 |
| 6 | ಕಲಬುರಗಿ-I | 3 | 0 | 1 | 0 | 4 | 1 | 10 | 1.77 |
| 7 | ಕಲಬುರಗಿ-II | 1 | 2 | 0 | 3 | 6 | 1 | 26 | 1.03 |
| 8 | ಕೋಲಾರ | 7 | 3 | 1 | 1 | 12 | 1 | 62 | 8.35 |
| 9 | ಕೊಳ್ಳೇಗಾಲ | 1 | 6 | 1 | 3 | 11 | 2 | 18 | 2.71 |
| 10 | ಕೊಪ್ಪಳ | 12 | 0 | 5 | 0 | 17 | 2 | 10 | 8.28 |
| 11 | ಕೊಪ್ಪಳ ನೆಲೋಗಿಪುರ | 6 | 1 | 3 | 3 | 13 | 1 | 32 | 5.61 |
| 12 | ಕೂಡ್ಲಿಗಿ | 3 | 2 | 0 | 0 | 5 | 1 | 5 | 1.28 |
| 13 | ಮಂಗಳೂರು | 5 | 3 | 0 | 0 | 8 | 1 | 5 | 3.71 |
| 14 | ಮೈಸೂರು | 1 | 0 | 0 | 3 | 4 | 1 | 79 | 1.25 |
| 15 | ರಾಮನಗರ | 4 | 7 | 3 | 5 | 19 | 1 | 36 | 3.86 |
| 16 | ಶಿವಮೊಗ್ಗ | 1 | 0 | 0 | 2 | 3 | 1 | 19 | 4.11 |
| 17 | ಸಿರ್ಸಿ | 1 | 1 | 3 | 5 | 10 | 1 | 39 | 3.72 |
| 18 | ಉಡುಪಿ | 3 | 1 | 0 | 2 | 6 | 1 | 60 | 1.75 |
| 19 | ವಿಜಯಪುರ | 2 | 1 | 0 | 3 | 6 | 1 | 82 | 2.48 |
| | **ಒಟ್ಟು** | **73** | **39** | **24** | **37** | **173** | **1** | **82** | **73.31** |

## ಅನುಬಂಧ–XI (ಎ)

**(ಉಲ್ಲೇಖ: ಕಂಡಿಕೆ 3.6.1, ಪುಟ 25)**

### ಮೇಲಿನ ಅಧಿಕಾರಿಗಳಿಂದ ತಾಂತ್ರಿಕ ಮಂಜೂರಾತಿಯನ್ನು ತಪ್ಪಿಸಲು ಅಂದಾಜುಪಟ್ಟಿಗಳನ್ನು ವಿಭಜಿಸಿರುವುದು

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಸಂಖ್ಯೆ | ಒಂದೇ ಸಂಯೋಜಿತ ಕಾಮಗಾರಿಯೆಂದು ವಹಿಸಿದ ಕಾಮಗಾರಿಗಳ ಸಂಖ್ಯೆ | ವಿಭಜನೆ ಮೊದಲಿಗೆ ಅಂದಾಜುಪಟ್ಟಿಯ ಮೌಲ್ಯದ ವ್ಯಾಪ್ತಿ (₹ ಕೋಟಿಗಳಲ್ಲಿ) | | ಮೇಲಿನ ಅಧಿಕಾರಿಗಳ ಮಂಜೂರಾತಿಯನ್ನು ತಪ್ಪಿಸಲು ವಿಭಜಿಸಿರುವ ಕಾಮಗಾರಿಗಳ ಸಂಖ್ಯೆ | ವಿಭಜಿಸಿದ ನಂತರ ಅಂದಾಜುಪಟ್ಟಿಯ ಮೌಲ್ಯದ ವ್ಯಾಪ್ತಿ (₹ ಕೋಟಿಗಳಲ್ಲಿ) | | ಒಟ್ಟು ಅಂದಾಜು ಮೌಲ್ಯ (₹ ಕೋಟಿಗಳಲ್ಲಿ) |
|---|---|---|---|---|---|---|---|---|---|
| | | | | **ಕನಿಷ್ಠ** | **ಗರಿಷ್ಠ** | | **ಕನಿಷ್ಠ** | **ಗರಿಷ್ಠ** | |
| **1** | ಬಸವನಬಾಗೇವಾಡಿ | 54 | 5 | 100 | 200 | 10 | 50 | 100 | 800.00 |
| **2** | ಕಲಬುರಗಿ–I | 48 | 1 | 71 | 71 | 16 | 2 | 5 | 71.00 |
| **3** | ಕೂಡ್ಲಿಗಿ | 28 | 1 | 200 | 200 | 6 | 25.5 | 45 | 200 |
| | **ಒಟ್ಟು** | **130** | **7** | | | **32** | | | **1,071** |

**ಅನುಬಂಧ–XI (ಬಿ)**

**(ಉಲ್ಲೇಖ: ಕಂಡಿಕೆ 3.6.1, ಪುಟ 25)**

## ಉಪ–ಸಮಿತಿಯ ಬದಲು ಮುಖ್ಯ ಇಂಜಿನಿಯರ್ ತಾಂತ್ರಿಕ ಮಂಜೂರಾತಿ ನೀಡಿರುವುದು

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ (₹ ಕೋಟಿಗಳಲ್ಲಿ) |
|---|---|---|---|---|
| 1 | ಬಸವನಬಾಗೇವಾಡಿ | 54 | 1 | 3.35 |
| 2 | ಚಿಕ್ಕಬಳ್ಳಾಪುರ | 57 | 3 | 8.99 |
| 3 | ದಾವಣಗೆರೆ | 52 | 13 | 54.47 |
| 4 | ಗದಗ | 60 | 2 | 10.42 |
| 5 | ಕಲಬುರಗಿ–I | 48 | 8 | 28.63 |
| 6 | ಕಲಬುರಗಿ–II | 65 | 1 | 3.29 |
| 7 | ಕೊಪ್ಪಳ ನೆಲೋಗಿಪುರ | 52 | 4 | 10.73 |
| 8 | ಕೂಡ್ಲಿಗಿ | 28 | 2 | 6.53 |
| 9 | ಮಂಗಳೂರು | 44 | 2 | 5.50 |
| 10 | ಮೈಸೂರು | 38 | 3 | 7.38 |
| 11 | ರಾಮನಗರ | 78 | 3 | 9.10 |
| 12 | ಶಿವಮೊಗ್ಗ | 56 | 1 | 2.30 |
| 13 | ಉಡುಪಿ | 52 | 1 | 5.88 |
| 14 | ವಿಜಯಪುರ | 44 | 5 | 20.15 |
| | **ಒಟ್ಟು** | **728** | **49** | **176.73** |

**ಅನುಬಂಧ–XII**

**(ಉಲ್ಲೇಖ: ಕಂಡಿಕೆ 3.6.3, ಪುಟ 26)**

**ತಾಂತ್ರಿಕ ಮಂಜೂರಾತಿಗೆ ಮೊದಲೇ ಕಾಮಗಾರಿಗಳನ್ನು ಆರಂಭಿಸಿರುವುದು**

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಪರೀಕ್ಷಾ–ತನಿಖೆ ನಡೆಸಿದ ಕಾಮಗಾರಿಗಳ ಸಂಖ್ಯೆ | ತಾಂತ್ರಿಕ ಮಂಜೂರಾತಿಯನ್ನು ಪಡೆಯುವ ಮೊದಲೇ ಆರಂಭಿಸಿದ ಕಾಮಗಾರಿಗಳ ಸಂಖ್ಯೆ | ಒಟ್ಟು ಅಂದಾಜು ವೆಚ್ಚ (₹ ಕೋಟಿಗಳಲ್ಲಿ) |
|---|---|---|---|---|
| 1 | ಬಸವನಬಾಗೇವಾಡಿ | 54 | 1 | 3.35 |
| 2 | ಚಿಕ್ಕಬಳ್ಳಾಪುರ | 57 | 11 | 17.22 |
| 3 | ದಾಸರಹಳ್ಳಿ | 129 | 3 | 2.44 |
| 4 | ದಾವಣಗೆರೆ | 52 | 4 | 13.29 |
| 5 | ಗದಗ | 60 | 19 | 15.78 |
| 7 | ಕಲಬುರಗಿ–I | 48 | 35 | 54.64 |
| 8 | ಕಲಬುರಗಿ–II | 65 | 13 | 11.31 |
| 9 | ಕೋಲಾರ | 68 | 4 | 2.90 |
| 10 | ಕೊಳ್ಳೇಗಾಲ | 42 | 13 | 7.75 |
| 11 | ಕೊಪ್ಪಳ | 30 | 3 | 3.30 |
| 13 | ಕೂಡ್ಲಿಗಿ | 28 | 2 | 3.76 |
| 14 | ಮಂಗಳೂರು | 44 | 5 | 1.70 |
| 15 | ಮೈಸೂರು | 38 | 9 | 11.26 |
| 16 | ರಾಮನಗರ | 78 | 9 | 6.37 |
| 17 | ಶಿವಮೊಗ್ಗ | 56 | 10 | 16.73 |
| 18 | ಶಿರಸಿ | 39 | 3 | 4.11 |
| 19 | ಉಡುಪಿ | 52 | 1 | 0.51 |
| 20 | ವಿಜಯಪುರ | 44 | 1 | 3.64 |
| | **ಒಟ್ಟು** | **984** | **146** | **180.05** |

# ಅನುಬಂಧ-XIII

**(ಉಲ್ಲೇಖ: ಕಂಡಿಕೆ 4.1.2, ಪುಟ 31)**

## ಕಾಮಗಾರಿಗಳನ್ನು ಆರಂಭಿಸುವಲ್ಲಿನ ವಿಳಂಬ

| ಕ್ರಮ ಸಂಖ್ಯೆ | ಉಪ-ವಿಭಾಗದ ಹೆಸರು | 1ರಿಂದ 2 ತಿಂಗಳುಗಳು | 3ರಿಂದ 4 ತಿಂಗಳುಗಳು | 5ರಿಂದ 6 ತಿಂಗಳುಗಳು | 7ರಿಂದ 8 ತಿಂಗಳುಗಳು | 9ರಿಂದ 10 ತಿಂಗಳುಗಳು | 11ರಿಂದ12 ತಿಂಗಳುಗಳು | 12 ತಿಂಗಳಿಗೂ ಅಧಿಕ | ಒಟ್ಟು | ಕನಿಷ್ಠ | ಗರಿಷ್ಠ |
|---|---|---|---|---|---|---|---|---|---|---|---|
| 1 | ಬಸವನಬಾಗೇವಾಡಿ | 17 | 6 | 5 | 1 | 1 | 2 | 4 | **36** | **1** | **13** |
| 2 | ಚಿಕ್ಕಬಳ್ಳಾಪುರ | 6 | 6 | 3 | 1 | 1 | 2 | 6 | **25** | **1** | **38** |
| 3 | ದಾವಣಗೆರೆ | 15 | 5 | 2 | 0 | 1 | 2 | 2 | **27** | **1** | **19** |
| 4 | ಪೂರ್ವ-I | 5 | 0 | 0 | 0 | 1 | 0 | 0 | **6** | **1** | **9** |
| 5 | ಗದಗ | 14 | 5 | 3 | 1 | 1 | 1 | 0 | **25** | **1** | **11** |
| 6 | ಹೂವಿನಹಡಗಲಿ | 8 | 1 | 1 | 2 | 1 | 2 | 2 | **17** | **1** | **34** |
| 7 | ಕಲಬುರಗಿ-I | 1 | 1 | 2 | 0 | 0 | 0 | 3 | **7** | **1** | **66** |
| 8 | ಕಲಬುರಗಿ-II | 11 | 10 | 5 | 4 | 4 | 1 | 3 | **38** | **1** | **24** |
| 9 | ಕೋಲಾರ | 10 | 5 | 2 | 5 | 1 | 1 | 1 | **25** | **1** | **14** |
| 10 | ಕೊಳ್ಳೇಗಾಲ | 13 | 2 | 1 | 2 | 0 | 0 | 2 | **20** | **1** | **23** |
| 11 | ಕೊಪ್ಪಳ | 10 | 3 | 0 | 0 | 1 | 2 | 2 | **18** | **1** | **36** |
| 12 | ಕೊಪ್ಪಳ ನೆಲೋಗಿಪುರ | 14 | 0 | 1 | 2 | 2 | 5 | 1 | **25** | **1** | **19** |
| 13 | ಕೂಡ್ಲಿಗಿ | 4 | 5 | 1 | 0 | 0 | 1 | 5 | **16** | **1** | **28** |
| 14 | ಮಂಗಳೂರು | 6 | 10 | 7 | 1 | 0 | 1 | 11 | **36** | **1** | **52** |
| 15 | ಮೈಸೂರು | 1 | 0 | 1 | 0 | 0 | 2 | 1 | **5** | **2** | **15** |
| 16 | ರಾಜರಾಜೇಶ್ವರಿ ನಗರ | 31 | 3 | 4 | 0 | 0 | 0 | 1 | **39** | **1** | **13** |
| 17 | ರಾಮನಗರ | 18 | 10 | 2 | 5 | 1 | 1 | 2 | **39** | **1** | **15** |
| 18 | ಶಿವಮೊಗ್ಗ | 0 | 1 | 0 | 0 | 6 | 0 | 3 | **10** | **3** | **26** |
| 19 | ಸಿರ್ಸಿ | 2 | 6 | 4 | 1 | 1 | 0 | 1 | **15** | **1** | **17** |
| 20 | ಉಡುಪಿ | 7 | 11 | 2 | 4 | 1 | 1 | 2 | **28** | **1** | **34** |
| 21 | ವಿಜಯಪುರ | 14 | 8 | 3 | 1 | 2 | 1 | 3 | **32** | **1** | **49** |
| | ಒಟ್ಟು | **207** | **98** | **49** | **30** | **25** | **25** | **55** | **489** | **1** | **66** |

**ಅನುಬಂಧ – XIV**

**(ಉಲ್ಲೇಖ: ಕಂಡಿಕೆ 4.2, ಪುಟ 34)**

## ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬ

| ಕ್ರಮ ಸಂಖ್ಯೆ | ಉಪ-ವಿಭಾಗದ ಹೆಸರು | ಪೂರ್ಣಗೊಳ್ಳುವುದು ವಿಳಂಬವಾದ ಕಾಮಗಾರಿಗಳ ಸಂಖ್ಯೆ | ತಿಂಗಳುಗಳ ವ್ಯಾಪ್ತಿ | | | | | |
|---|---|---|---|---|---|---|---|---|
| | | | 1ರಿಂದ 4 ತಿಂಗಳುಗಳು | 5ರಿಂದ 9 ತಿಂಗಳುಗಳು | 10ರಿಂದ 19 ತಿಂಗಳುಗಳು | 20ರಿಂದ 29 ತಿಂಗಳುಗಳು | 29 ತಿಂಗಳಿಗೂ ಅಧಿಕ | ಒಟ್ಟು |
| 1 | ಬಸವನಬಾಗೇವಾಡಿ | 29 | 4 | 4 | 8 | 7 | 6 | 29 |
| 2 | ಚಿಕ್ಕಬಳ್ಳಾಪುರ | 52 | 2 | 4 | 7 | 3 | 36 | 52 |
| 3 | ದಾವಣಗೆರೆ | 36 | 17 | 4 | 4 | 5 | 6 | 36 |
| 4 | ಪೂರ್ವ-I | 72 | 19 | 20 | 17 | 13 | 3 | 72 |
| 5 | ಗದಗ | 44 | 18 | 6 | 8 | 6 | 6 | 44 |
| 6 | ಹೂವಿನಹಡಗಲಿ | 23 | 2 | 0 | 2 | 15 | 4 | 23 |
| 7 | ಕಲಬುರಗಿ-I | 43 | 1 | 2 | 2 | 4 | 34 | 43 |
| 8 | ಕಲಬುರಗಿ-II | 46 | 8 | 3 | 14 | 7 | 14 | 46 |
| 9 | ಕೋಲಾರ | 54 | 0 | 4 | 6 | 18 | 26 | 54 |
| 10 | ಕೊಳ್ಳೇಗಾಲ | 31 | 8 | 3 | 8 | 4 | 8 | 31 |
| 11 | ಕೊಪ್ಪಳ | 24 | 1 | 3 | 9 | 6 | 5 | 24 |
| 12 | ಕೊಪ್ಪಳ ನೆಲೋಗಿಪುರ | 30 | 7 | 2 | 6 | 5 | 10 | 30 |
| 13 | ಕೂಡ್ಲಿಗಿ | 24 | 2 | 7 | 8 | 1 | 6 | 24 |
| 14 | ಮಂಗಳೂರು | 41 | 0 | 8 | 16 | 6 | 11 | 41 |
| 15 | ಮೈಸೂರು | 31 | 2 | 3 | 16 | 4 | 6 | 31 |
| 16 | ರಾಜರಾಜೇಶ್ವರಿ ನಗರ | 65 | 8 | 1 | 40 | 5 | 11 | 65 |
| 17 | ರಾಮನಗರ | 41 | 6 | 8 | 9 | 10 | 8 | 41 |
| 18 | ಶಿವಮೊಗ್ಗ | 33 | 11 | 7 | 8 | 3 | 4 | 33 |
| 19 | ಶಿರಸಿ | 19 | 1 | 3 | 4 | 6 | 5 | 19 |
| 20 | ಉಡುಪಿ | 35 | 3 | 2 | 12 | 4 | 14 | 35 |
| 21 | ವಿಜಯಪುರ | 41 | 4 | 1 | 20 | 4 | 12 | 41 |
| | **ಒಟ್ಟು** | **814** | **124** | **95** | **224** | **136** | **235** | **814** |

**ಅನುಬಂಧ – XV**

**(ಉಲ್ಲೇಖ: ಕಂಡಿಕೆ 4.6.1, ಪುಟ 39)**

**ಇಡುಗಂಟಿನ ಆಧಾರದ ಮೇಲೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದು**

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಅಂದಾಜುಪಟ್ಟಿಗಳಲ್ಲಿ ಇಡುಗಂಟಿನ ಅವಕಾಶ ಮಾಡಿದ ಕಾಮಗಾರಿಗಳ ಸಂಖ್ಯೆ | ಅಂದಾಜುಪಟ್ಟಿಗಳಲ್ಲಿ ಇಡುಗಂಟಿನ ಅವಕಾಶ ಮಾಡಿದ ಒಟ್ಟು ಮೊತ್ತ (₹ ಕೋಟಿಗಳಲ್ಲಿ) | ವಿವರವಾದ ಅಂದಾಜುಪಟ್ಟಿ ಇಲ್ಲದೆ ಭರಿಸಿದ ವೆಚ್ಚ (₹ ಕೋಟಿಗಳಲ್ಲಿ) |
|---|---|---|---|---|
| **1** | ಬಸವನಬಾಗೇವಾಡಿ | 2 | 0.45 | 0.45 |
| **2** | ಕಲಬುರಗಿ–I | 5 | 3.29 | 3.29 |
| **3** | ಕೋಲಾರ | 1 | 0.06 | 0.06 |
| **4** | ಕೊಳ್ಳೇಗಾಲ | 6 | 2.04 | 0.45 |
| **5** | ಕೊಪ್ಪಳ | 12 | 1.81 | 1.81 |
| **6** | ಕೂಡ್ಲಿಗಿ | 5 | 0.62 | 0.62 |
| **7** | ಮೈಸೂರು | 8 | 1.36 | 0.80 |
| **8** | ವಿಜಯಪುರ | 3 | 0.43 | 0.43 |
| | **ಒಟ್ಟು** | **42** | **10.07** | **7.92** |

## ಅನುಬಂಧ–XVI

**(ಉಲ್ಲೇಖ: ಕಂಡಿಕೆ 5.1.2.1, ಪುಟ 47)**

### ಅಧಿಕ ವೆಚ್ಚವನ್ನು ವರದಿ ಮಾಡದಿರುವುದು

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡಿದ ಹಣಕ್ಕಿಂತ ಹೆಚ್ಚು ವೆಚ್ಚ ಮಾಡಿದ ಕಾಮಗಾರಿಗಳ ಸಂಖ್ಯೆ | ಒಟ್ಟು ಅಂದಾಜು ವೆಚ್ಚ | ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡಿದ ಒಟ್ಟು ಹಣ | ಭರಿಸಿದ ವೆಚ್ಚ | ಭರಿಸಿದ ಅಧಿಕ ವೆಚ್ಚ |
|---|---|---|---|---|---|---|
| 1 | ಬಸವನಬಾಗೇವಾಡಿ | 1 | 1.50 | 1.50 | 1.57 | 0.07 |
| 2 | ಬಿಎಮ್ಆರ್‌ಸಿಎಲ್ | 2 | 2.77 | 2.54 | 2.77 | 0.23 |
| 3 | ಚಿಕ್ಕಬಳ್ಳಾಪುರ | 2 | 0.81 | 0.74 | 0.80 | 0.06 |
| 4 | ದಾಸರಹಳ್ಳಿ | 41 | 39.69 | 36.67 | 39.12 | 2.45 |
| 5 | ದಾವಣಗೆರೆ | 12 | 30.05 | 28.33 | 33.05 | 4.72 |
| 6 | ಪೂರ್ವ–I | 68 | 103.75 | 90.06 | 96.03 | 5.96 |
| 7 | ಪೂರ್ವ–II | 49 | 62.26 | 60.89 | 62.32 | 1.43 |
| 8 | ಗದಗ | 2 | 0.88 | 0.72 | 0.85 | 0.13 |
| 9 | ಕಲಬುರಗಿ–I | 4 | 5.10 | 4.39 | 5.05 | 0.66 |
| 10 | ಕಲಬುರಗಿ–II | 8 | 7.58 | 5.98 | 7.32 | 1.34 |
| 11 | ಕೋಲಾರ | 3 | 3.50 | 3.50 | 3.62 | 0.12 |
| 12 | ಕೊಳ್ಳೇಗಾಲ | 1 | 0.38 | 0.38 | 0.39 | 0.01 |
| 13 | ಕೊಪ್ಪಳ | 1 | 0.50 | 0.48 | 0.50 | 0.02 |
| 14 | ಕೂಡ್ಲಿಗಿ | 3 | 4.62 | 4.51 | 4.56 | 0.05 |
| 15 | ಮೈಸೂರು | 1 | 0.42 | 0.39 | 0.42 | 0.04 |
| 16 | ರಾಜರಾಜೇಶ್ವರಿ ನಗರ | 27 | 37.32 | 35.79 | 37.29 | 1.50 |
| 17 | ಶಿವಮೊಗ್ಗ | 2 | 1.49 | 1.41 | 1.49 | 0.08 |
| 18 | ಶಿರಸಿ | 5 | 2.58 | 2.52 | 2.58 | 0.05 |
| ಒಟ್ಟು | | 231 | 303.70 | 279.29 | 298.16 | 18.86 |

## ಅನುಬಂಧ – XVII

**(ಉಲ್ಲೇಖ: ಕಂಡಿಕೆ 5.1.2.2, ಪುಟ 47)**

### ಉಳಿತಾಯಗಳನ್ನು ವರದಿ ಮಾಡದಿರುವುದು

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಅಂದಾಜು ವೆಚ್ಚಕ್ಕಿಂತ ಕಡಿಮೆ ಬೆಚ್ಚ ಮಾಡಿರುವ ಕಾಮಗಾರಿಗಳ ಸಂಖ್ಯೆ | ಒಟ್ಟು ಅಂದಾಜು ವೆಚ್ಚ | ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡಿದ ಒಟ್ಟು ಹಣ | ಭರಿಸಿದ ವೆಚ್ಚ | ಉಳಿತಾಯ |
|---|---|---|---|---|---|---|
| 1 | ಬಸವನಬಾಗೇವಾಡಿ | 9 | 7.25 | 7.25 | 7.18 | 0.07 |
| 2 | ಬಿಎಮ್‌ಆರ್‌ಸಿಎಲ್ | 1 | 0.43 | 0.42 | 0.39 | 0.03 |
| 3 | ದಾಸರಹಳ್ಳಿ | 1 | 1.00 | 0.99 | 0.98 | 0.01 |
| 4 | ದಾವಣಗೆರೆ | 2 | 6.18 | 5.72 | 5.66 | 0.05 |
| 5 | ಪೂರ್ವ–II | 2 | 3.00 | 2.98 | 2.95 | 0.03 |
| 6 | ಗದಗ | 5 | 5.00 | 5.00 | 4.97 | 0.03 |
| 7 | ಕಲಬುರಗಿ–I | 1 | 0.27 | 0.22 | 0.16 | 0.05 |
| 8 | ಕಲಬುರಗಿ–II | 2 | 0.82 | 0.82 | 0.79 | 0.03 |
| 9 | ಕೋಲಾರ | 3 | 1.69 | 1.69 | 1.68 | 0.01 |
| 10 | ಕೊಳ್ಳೇಗಾಲ | 7 | 3.07 | 3.07 | 3.06 | 0.01 |
| 11 | ಕೊಪ್ಪಳ ನೆಲೋಗಿಪುರ | 1 | 0.08 | 0.08 | 0.08 | 0.00 |
| 12 | ಕೂಡ್ಲಗಿ | 5 | 5.79 | 5.68 | 5.29 | 0.39 |
| 13 | ಮೈಸೂರು | 2 | 1.80 | 1.80 | 1.80 | 0.00 |
| 14 | ಶಿವಮೊಗ್ಗ | 3 | 1.94 | 1.93 | 1.83 | 0.10 |
| 15 | ಉಡುಪಿ | 1 | 0.40 | 0.40 | 0.24 | 0.16 |
| 16 | ವಿಜಯಪುರ | 2 | 1.90 | 1.90 | 1.89 | 0.01 |
| | **ಒಟ್ಟು** | **47** | **40.64** | **39.95** | **38.97** | **0.98** |

## ಅನುಬಂಧ – XVIII

**(ಉಲ್ಲೇಖ: ಕಂಡಿಕೆ 5.2.1, ಪುಟ 49)**

### ಅನುಮೋದಿತವಾಗಿರದ ಸಂಸ್ಥೆಗಳಿಂದ ಕಬ್ಬಿಣ/ಸಿಮೆಂಟ್ ಖರೀದಿ

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಉಪ–ವಿಭಾಗದ ಹೆಸರು | ಸಾಮಗ್ರಿ ವಿವರಣೆ | |
|---|---|---|---|
| | | ಕಬ್ಬಿಣ | ಸಿಮೆಂಟ್ |
| 1 | ಬಸವನಬಾಗೇವಾಡಿ | 1.82 | 1.13 |
| 2 | ಚಿಕ್ಕಬಳ್ಳಾಪುರ | 0.00 | 3.80 |
| 3 | ದಾಸರಹಳ್ಳಿ | 249.09 | 84.31 |
| 4 | ಪೂರ್ವ–I | 113.28 | 35.94 |
| 5 | ಪೂರ್ವ–II | 41.91 | 12.37 |
| 6 | ಹೂವಿನಹಡಗಲಿ | 0.00 | 0.09 |
| 7 | ಕಲಬುರಗಿ–I | 2.15 | 0.32 |
| 8 | ಕಲಬುರಗಿ–II | 3.67 | 3.58 |
| 9 | ಕೊಪ್ಪಳ | 2.09 | 0.55 |
| 10 | ಕೊಪ್ಪಳ ನೆಲೋಗಿಪುರ | 11.07 | 6.76 |
| 11 | ಕೂಡ್ಲಿಗಿ | 0.07 | 0.39 |
| 12 | ಮಂಗಳೂರು | 0.07 | 0.66 |
| 13 | ರಾಜರಾಜೇಶ್ವರಿ ನಗರ | 121.12 | 13.68 |
| 14 | ಶಿವಮೊಗ್ಗ | 0.20 | 0.00 |
| 15 | ಶಿರಸಿ | 0.22 | 0.00 |
| 16 | ಉಡುಪಿ | 0.87 | 1.63 |
| 17 | ವಿಜಯಪುರ | 4.93 | 3.12 |
| ಉಪ ಮೊತ್ತ | | **552.55** | **168.34** |
| ಒಟ್ಟು ಮೊತ್ತ | | | **720.89** |

## ಅನುಬಂಧ – XIX

**(ಉಲ್ಲೇಖ: ಕಂಡಿಕೆ 5.2.2, ಪುಟ 50)**

### ಟೆಂಡರ್‌ಗಳನ್ನು ಆಹ್ವಾನಿಸದೆಯೇ ಖರೀದಿಸಿರುವ ವಸ್ತುಗಳು

| ಕ್ರಮ ಸಂಖ್ಯೆ | ಉಪ-ವಿಭಾಗದ ಹೆಸರು | ಟೆಂಡರ್‌ಗಳನ್ನು ಆಹ್ವಾನಿಸದೆಯೇ ಖರೀದಿಸಿರುವ ವಸ್ತುಗಳ ಮೌಲ್ಯ (₹ ಕೋಟಿಗಳಲ್ಲಿ) | | | | | |
|---|---|---|---|---|---|---|---|
| | | **2016–17** | **2017–18** | **2018–19** | **2019–20** | **2020–21** | **ಒಟ್ಟು** |
| 1 | ಬಸವನಬಾಗೇವಾಡಿ | 3.63 | 11.33 | 2.85 | 13.12 | 10.34 | 41.26 |
| 2 | ಬಿಎಮ್‌ಆರ್‌ಸಿಎಲ್ | 3.20 | 1.84 | 0.89 | 0.86 | 0.00 | 6.79 |
| 3 | ಚಿಕ್ಕಬಳ್ಳಾಪುರ | 1.89 | 14.12 | 8.90 | 5.86 | 0.96 | 31.74 |
| 4 | ದಾಸರಹಳ್ಳಿ | 2.35 | 22.40 | 40.25 | 1.23 | 0.02 | 66.26 |
| 5 | ದಾವಣಗೆರೆ | 7.95 | 7.36 | 9.73 | 5.49 | 3.23 | 33.77 |
| 6 | ಪೂರ್ವ–I | 3.53 | 13.43 | 0.08 | 0.26 | 0.01 | 17.31 |
| 7 | ಪೂರ್ವ–II | 1.10 | 6.08 | 0.00 | 0.00 | 0.00 | 7.18 |
| 8 | ಗದಗ | 9.60 | 10.37 | 7.98 | 3.92 | 0.28 | 32.15 |
| 9 | ಹೂವಿನಹಡಗಲಿ | 0.91 | 0.68 | 0.49 | 0.56 | 0.18 | 2.82 |
| 10 | ಕಲಬುರಗಿ–I | 8.19 | 13.59 | 7.02 | 4.98 | 2.54 | 36.32 |
| 11 | ಕಲಬುರಗಿ–II | 4.87 | 14.07 | 8.59 | 6.04 | 6.55 | 40.12 |
| 12 | ಕೋಲಾರ | 4.01 | 12.55 | 14.26 | 13.23 | 4.18 | 48.24 |
| 13 | ಕೊಳ್ಳೇಗಾಲ | 0.79 | 3.37 | 5.95 | 5.53 | 1.84 | 17.46 |
| 14 | ಕೊಪ್ಪಳ | 2.05 | 4.38 | 3.93 | 4.79 | 3.34 | 18.48 |
| 15 | ಕೊಪ್ಪಳ ನೆಲೋಗಿಪುರ | 8.51 | 4.19 | 0.32 | 0.30 | 10.12 | 23.45 |
| 16 | ಕೂಡ್ಲಿಗಿ | 1.34 | 1.23 | 0.17 | 2.08 | 0.45 | 5.26 |
| 17 | ಮಂಗಳೂರು | 6.02 | 11.02 | 17.15 | 12.45 | 0.04 | 46.68 |
| 18 | ಮೈಸೂರು | 4.06 | 5.33 | 6.94 | 4.05 | 1.85 | 22.23 |
| 19 | ರಾಜರಾಜೇಶ್ವರಿ ನಗರ | 0.17 | 3.57 | 3.61 | 0.00 | 0.00 | 7.35 |
| 20 | ರಾಮನಗರ | 2.82 | 6.85 | 9.05 | 10.64 | 1.70 | 31.06 |
| 21 | ಶಿವಮೊಗ್ಗ | 5.57 | 16.10 | 24.64 | 51.50 | 48.23 | 146.03 |
| 22 | ಶಿರಸಿ | 3.45 | 5.71 | 5.20 | 4.63 | 0.00 | 18.99 |
| 23 | ಉಡುಪಿ | 6.43 | 9.17 | 0.95 | 0.28 | 0.06 | 16.89 |
| 24 | ವಿಜಯಪುರ | 4.00 | 10.79 | 16.85 | 4.83 | 0.00 | 36.47 |
| | ಒಟ್ಟು | **96.44** | **209.53** | **195.80** | **156.63** | **95.92** | **754.32** |

# ಅನುಬಂಧ – XX

**(ಉಲ್ಲೇಖ: ಕಂಡಿಕೆ 5.2.3, ಪುಟ 50)**

## ಅನುಮೋದಿತವಾಗಿರದ ಸಗಟು ಮಾರಾಟಗಾರರಿಂದ ಸಾಮಗ್ರಿ ಮತ್ತು ಕೂಲಿಯಾಳುಗಳ ಸಂಗ್ರಹಣೆಯಿಂದಾದಗಿ ಇನ್‌ಪುಟ್ ತೆರಿಗೆ ಕ್ರೆಡಿಟ್ ನಷ್ಟ

| ವರ್ಷ | ಅನುಮೋದಿತವಾಗಿರದ ಸಗಟು ಮಾರಾಟಗಾರರಿಂದ ಖರೀದಿಸಿರುವ ಸಾಮಗ್ರಿಗಳ ಮೊತ್ತ | ಅನುಮೋದಿತವಾಗಿರದ ಸಗಟು ಮಾರಾಟಗಾರರ ಸಾಮಗ್ರಿಗಳ ಮೇಲೆ 5% ದರದಲ್ಲಿ ಇನ್‌ಪುಟ್ ತೆರಿಗೆ ಕ್ರೆಡಿಟ್ ನಷ್ಟ | ಅನುಮೋದಿತವಾಗಿರದ ಸಗಟು ಮಾರಾಟಗಾರರಿಗೆ ಪಾವತಿಸಿರುವ ಕೂಲಿ | ಅನುಮೋದಿತವಾಗಿರದ ಸಗಟು ಮಾರಾಟಗಾರರ ಕೂಲಿ ಮೇಲೆ 18% ದರದಲ್ಲಿ ಇನ್‌ಪುಟ್ ತೆರಿಗೆ ಕ್ರೆಡಿಟ್ ನಷ್ಟ | ಒಟ್ಟು ಇನ್‌ಪುಟ್ ತೆರಿಗೆ ಕ್ರೆಡಿಟ್ ನಷ್ಟ |
|---|---|---|---|---|---|
| (ಎ) | (ಬಿ) | ಸಿ=ಬಿ*5% | ಡಿ | ಇ=ಡಿ*18% | ಎಫ್=ಸಿ+ಇ |
| 2018–19 | 195.80 | 9.79 | 508.60 | 91.55 | 101.34 |
| 2019–20 | 156.63 | 7.83 | 340.09 | 61.22 | 69.05 |
| 2020–21 | 95.92 | 4.80 | 218.24 | 39.28 | 44.08 |
| **ಒಟ್ಟು** | **448.35** | **22.42** | **1,066.93** | **192.05** | **214.46** |

| ಪದಕೋಶ | |
|---|---|
| **ಎಸಿಎಸ್** | ಅಪರ ಮುಖ್ಯ ಕಾರ್ಯದರ್ಶಿಗಳು |
| **ಎಇಇ** | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ |
| **ಬಿಬಿಎಮ್‌ಪಿ** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| **ಬಿಎಮ್‌ಆರ್‌ಸಿಎಲ್** | ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ |
| **ಬಿಟಿ** | ಬಿಟುಮಿನಸ್ |
| **ಸಿಸಿ** | ಸಿಮೆಂಟ್ ಕಾಂಕ್ರೀಟ್ |
| **ಸಿಇ** | ಮುಖ್ಯ ಇಂಜಿನಿಯರ್ |
| **ಸಿಎಸ್‌ಆರ್** | ಔದ್ಯಮಿಕ ಸಾಮಾಜಿಕ ಜವಾಬ್ದಾರಿ |
| **ಡಿಸಿ** | ಜಿಲ್ಲಾಧಿಕಾರಿಗಳು |
| **ಡಿಕ್ಯೂಎಮ್** | ಜಿಲ್ಲಾ ಗುಣಮಟ್ಟ ಮೇಲ್ವಿಚಾರಕರು |
| **ಇಎ** | ಕಾಮಗಾರಿ ವಹಿಸಿರುವ ಏಜೆನ್ಸಿಗಳು |
| **ಇಇ** | ಕಾರ್ಯನಿರ್ವಾಹಕ ಇಂಜಿನಿಯರ್ |
| **ಜಿಎಲ್** | ಗುಂಪು ನಾಯಕರು |
| **ಜಿಒಕೆ** | ಕರ್ನಾಟಕ ಸರ್ಕಾರ |
| **ಜಿಎಸ್‌ಕೆ** | ಗಾಂಧಿ ಸಾಕ್ಷಿ ಕಾಯಕ |
| **ಐಆರ್‌ಸಿ** | ಇಂಡಿಯನ್ ರೋಡ್ ಕಾಂಗ್ರೆಸ್ |
| **ಐಟಿ** | ಆದಾಯ ತೆರಿಗೆ |
| **ಜೆಇ** | ಕಿರಿಯ ಇಂಜಿನಿಯರ್ |
| **ಜೆಪಿವಿ** | ಜಂಟಿ ಭೌತಿಕ ಪರಿಶೀಲನೆ |
| **ಜೆಡಬ್ಲ್ಯುಬಿ** | ಕಾಮಗಾರಿ ಬಿಲ್ |
| **ಕೆಎಲ್‌ಎಸಿ** | ಕರ್ನಾಟಕ ಭೂಸೇನಾ ನಿಗಮ ನಿಯಮಿತ |
| **ಕೆಪಿಡಬ್ಲ್ಯುಡಿ** | ಕರ್ನಾಟಕ ಲೋಕೋಪಯೋಗಿ ಇಲಾಖೆ |
| **ಕೆಆರ್‌ಐಡಿಎಲ್** | ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತ |
| **ಕೆಟಿಪಿಪಿ** | ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ |
| **ಎಮ್‌ಬಿ** | ಮಾಪನ ಪುಸ್ತಕ |
| **ಎಮ್‌ಡಿ** | ನಿರ್ವಾಹಕ ನಿರ್ದೇಶಕ |
| **ಎಮ್‌ಒಆರ್‌ಡಿ** | ಗ್ರಾಮೀಣಾಭಿವೃದ್ಧಿ ಮಂತ್ರಾಲಯ |
| **ಎಮ್‌ಒಆರ್‌ಟಿಹೆಚ್** | ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ |
| **ಎಮ್‌ಆರ್‌ಎ** | ಮಾಸಿಕ ಕಾಮಗಾರಿ ಲೆಕ್ಕ |
| **ಪಿಎಮ್‌ಜಿಎಸ್‌ವೈ** | ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ |
| **ಪಿಎಮ್‌ಎಸ್** | ಯೋಜನಾ ಮೇಲ್ವಿಚಾರಣಾ ತಂತ್ರಾಂಶ |
| **ಪಿಆರ್‌ಇಡಿ** | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ |
| **ಪಿಡಬ್ಲ್ಯುಡಿ** | ಲೋಕೋಪಯೋಗಿ ಇಲಾಖೆ |
| **ಕ್ಯೂಎಪಿ** | ಗುಣಮಟ್ಟ ಭರವಸೆ ಕಾರ್ಯಕ್ರಮ |
| **ಕ್ಯೂಸಿ** | ಗುಣಮಟ್ಟ ನಿಯಂತ್ರಣ |
| **ಕ್ಯೂಎಮ್‌ಎಸ್** | ಗುಣಮಟ್ಟ ನಿರ್ವಹಣಾ ವ್ಯವಸ್ಥೆ |
| **ಆರ್‌ಎ** | ರನ್ನಿಂಗ್ ಅಕೌಂಟ್ |
| **ಆರ್‌ಡಿಪಿಆರ್** | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ |
| **ಎಸ್‌ಎ** | ಪ್ರಾಯೋಜಕ ಸಂಸ್ಥೆ |
| **ಎಸ್‌ಡಿಬಿಸಿ** | ಸೆಮಿ ಡೆನ್ಸ್ ಬಿಟುಮಿನಸ್ ಕಾಂಕ್ರೀಟ್ |

| | |
|---|---|
| **ಎಸ್ಇ** | ಅಧೀಕ್ಷಕ ಇಂಜಿನಿಯರ್ |
| **ಎಸ್‌ಕ್ಯೂಎಮ್** | ರಾಜ್ಯ ಗುಣಮಟ್ಟ ಮೇಲ್ವಿಚಾರಕರು |
| **ಎಸ್ಆರ್** | ದರಪಟ್ಟಿ |
| **ಟಿಡಿಎಸ್** | ಮೂಲ ತೆರಿಗೆ ಕಡಿತ |
| **ಟಿಐಎನ್** | ತೆರಿಗೆ ಪಾವತಿಸುವವರ ಗುರುತಿನ ಸಂಖ್ಯೆ |
| **ಟಿಪಿಐ** | ಮೂರನೇ ವ್ಯಕ್ತಿಯ ತಪಾಸಣೆ |
| **ವ್ಯಾಟ್** | ಮೌಲ್ಯಾಧಾರಿತ ತೆರಿಗೆ |
| **ವಿಜೆಎನ್ಎಲ್** | ವಿಶ್ವೇಶ್ವರಯ್ಯ ಜಲನಿಗಮ ನಿಯಮಿತ |



© ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು

**https://cag.gov.in/ag1/karnataka/en**